ಜಾನಪದ ಪರಿಕ್ರಮ

(ಜಾನಪದ ಲೇಖನಗಳು)

ಡಾ. ಶ್ರೀರಾಮ ಇಟ್ಟಣ್ಣವರ

87875

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

BVP-121-27/2/17
1179-(5).

BVP CHECKED
DEC 2017

ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಜಾನಪದ ಪರಿಕ್ರಮ

(ಜಾನಪದ ಲೇಖನಗಳು)

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಸ್ವಾಧೀನ ದಿನಾಂಕ
ಸ್ವಾಮ್ಯ ಸಂಖ್ಯೆ..... 87875

ಡಾ. ಶ್ರೀರಾಮ ಇಟ್ಟಣ್ಣವರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

JAANAPADA PARIKRAMA (Collection of Folk Articles)
by : **Dr. Srirama Ittannavara**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 94 Price : Rs. **40=00** : **2007**

ಪ್ರಥಮ ಮುದ್ರಣ : ೨೦೦೭
ಪ್ರತಿಗಳು : ೧೦೦೦
ಬೆಲೆ : ನಲವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

0,33,91 ITT J P073

ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಶ್ರೀ ವಿಶ್ವನಾಥ ವಂಶಾಕೃತಮಠ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಪ್ರೊ. ಕೆ.ಎಸ್.ನಿಸಾರ್ ಅಹಮದ್
ಸಮ್ಮೇಳನಾಧ್ಯಕ್ಷರು
೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್
ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ - ಶಿವಮೊಗ್ಗ
ಸ್ವಾಗತ ಸಮಿತಿ

ಶ್ರೀ ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷರು
ಶ್ರೀ ಕೆ.ಎಸ್. ಈಶ್ವರಪ್ಪ, ಹಿರಿಯ ಉಪಾಧ್ಯಕ್ಷರು.
ಶ್ರೀ ಡಿ.ಹೆಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಸಚಿವರು
ಶ್ರೀ ಎಸ್. ಬಂಗಾರಪ್ಪ, ಲೋಕಸಭಾ ಸದಸ್ಯರು
ಪ್ರೊ. ಬಿ.ಎಸ್. ಶೇರಿಗಾರ್, ಕುಲಪತಿಗಳು, ಕುವೆಂಪು.ವಿ.ವಿ
ಶ್ರೀ ಟಿ.ಕೆ. ಅನಿಲ್‌ಕುಮಾರ್, ಕೋಶಾಧ್ಯಕ್ಷರು, ಜಿಲ್ಲಾಧಿಕಾರಿಗಳು
ಶ್ರೀ ಅರುಣ್ ಚಕ್ರವರ್ತಿ ಜೇಜಿ, ಜಿಲ್ಲಾ ರಕ್ಷಣಾಧಿಕಾರಿಗಳು
ಡಾ. ಬೋರೇಗೌಡರು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಶ್ರೀ ಟಿ. ಮಹಾಬಲೇಶ್ವರಭಟ್ಟರು, ಹಿರಿಯ ಸಾಹಿತಿಗಳು
ಶ್ರೀ ಡಿ. ಮಂಜುನಾಥ್, ಅಧ್ಯಕ್ಷರು, ಕಸಾಪ, ಪ್ರಧಾನಕಾರ್ಯದರ್ಶಿ, ಶಿವಮೊಗ್ಗ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ(ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರದೇ ಪಾರ್ಶ್ವನಾಥ, ಬೆಂಗಳೂರು
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ವಂಶಾಕೃತಮಠ, ಬಾಗಲಕೋಟೆ
ಡಾ. ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಮಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಪ್ರೊ. ಕೆ.ಎಸ್. ನಿಸಾರ್ ಅಹಮದ್, ಬೆಂಗಳೂರು
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಬಿ.ಟಿ. ಲಲಿತಾನಾಯಕ್, ಬೆಂಗಳೂರು
ಶ್ರೀ ಕೆ. ಪ್ರಭಾಕರ ರೆಡ್ಡಿ, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ(ಹಂಪಿ ವಿ.ವಿ. ಪ್ರತಿನಿಧಿ)
ಡಾ. ಸಿದ್ಧಲಿಂಗಯ್ಯ, ಬೆಂಗಳೂರು (ಬೆಂಗಳೂರು ವಿ.ವಿ. ಪ್ರತಿನಿಧಿ)

ಅಧ್ಯಕ್ಷರ ನುಡಿ

ಕಳೆದ ತೊಂಬತ್ತೊಂದು ವರ್ಷಗಳಿಂದ ನಾಡು-ನುಡಿ-ಸಂಸತಿಯಡ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ - ಅಕ್ಷರ - ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ - (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಡಿಸೆಂಬರ್ ೨೦೦೬ರಲ್ಲಿ ಶಿವಮೊಗ್ಗದಲ್ಲಿ ನಡೆಯಲಿರುವ ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ೭೩ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯದವರಿಗೂ ಹಾಗೂ ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ಜಾನಪದವನ್ನು ಕುರಿತಾಗಿ ಇದುವರೆಗೆ ನಾನು ಬರೆದ ಒಟ್ಟು ಲೇಖನಗಳಿಂದ ಆಯ್ದ ಒಂಬತ್ತು ಲೇಖನಗಳನ್ನು ಇಲ್ಲಿ ಪ್ರಕಟಿಸಿದ್ದೇನೆ. ನನ್ನ ಬರವಣಿಗೆಯ ತೀರ ಪ್ರಾರಂಭದ ದಿನಗಳಲ್ಲಿ ಬರೆದ ಲೇಖನದಿಂದ ಹಿಡಿದು ಇತ್ತೀಚಿನ ಕೆಲವು ಲೇಖನಗಳವರೆಗೂ ಕಾಲಮಾನದ ವ್ಯಾಪ್ತಿಯಿದೆ. ಇತ್ತೀಚೆಗೆ ಜಾನಪದ ಅಧ್ಯಯನ ವಿಧಾನ ಸಾಕಷ್ಟು ಬದಲಾವಣೆಗೊಂಡಿದೆ. ಏನಿದ್ದರೂ ನಾನು ಲೇಖನಗಳಲ್ಲಿ ಬದಲಾಣೆ ಮಾಡಿಲ್ಲ. ಇದರಲ್ಲಿ ಕೆಲವು ಸಂಶೋಧನಾತ್ಮಕ, ಕೆಲವು ವಿಶ್ಲೇಷನಾತ್ಮಕ ಮತ್ತೆ ಕೆಲವು ನಿರೂಪಣಾತ್ಮಕ.

ಈ ಗ್ರಂಥವನ್ನು ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿಯ ಕಾರ್ಯಕಾರಿ ಮಂಡಳಿಗೆ ನನ್ನ ಕೃತಜ್ಞತೆಗಳು. ಸ್ನೇಹಿತರಾದ ಪ್ರೊ. ವಿಶ್ವನಾಥ ವಂಶಾಕೃತಮಠ ಹಾಗೂ ಸಿದ್ಧರಾಮ ಶೀರೋಳ ಅವರು ಪ್ರಸ್ತುತ ಗ್ರಂಥ ಪ್ರಕಟಣೆಯಲ್ಲಿ ಹೆಚ್ಚಿನ ಆಸಕ್ತಿ ತೋರಿದ್ದಾರೆ. ಅನೇಕ ಜನ ಹಿರಿಯರು, ಸ್ನೇಹಿತರು ಬೇರೆ ಬೇರೆ ಸಂದರ್ಭಗಳಿಗಾಗಿ ಈ ಲೇಖನಗಳನ್ನು ಬರೆಸಿದ್ದಾರೆ. 'ಚಿಕ್ಕಲಿಗರ ಸೋಗು'. 'ತಳವಾರ' ಲೇಖನಗಳಿಗೆ ಗುರುಗಳಾದ ಡಾ. ಎಂ.ಎಂ. ಕಲಬುರ್ಗಿಯವರು ಮಾರ್ಗದರ್ಶನ ಮಾಡಿದ್ದಾರೆ. ಪತ್ನಿ ಸರೋಜ ಬರವಣಿಗೆಗೆ ಸಹಕರಿಸಿದ್ದಾಳೆ. ಇವರೆಲ್ಲರನ್ನೂ ಪ್ರೀತಿಯಿಂದ ನೆನೆಯುತ್ತೇನೆ.

ಬೀಳಗಿ. ಬಾಗಲಕೋಟೆ ಜಿಲ್ಲೆ

ಡಾ. ಶ್ರೀರಾಮ ಇಟ್ಟಣ್ಣವರ

ಪರಿವಿಡಿ

೧. ಕನ್ನಡ ಜಾನಪದ ಅಧ್ಯಯನಕ್ಕೆ ಸ್ವಾತಂತ್ರ್ಯಪೂರ್ವ ಆಂಗ್ಲರ ಕೊಡುಗೆ– ೧

೨. ಬೀರಪ್ಪನ ಜನನ : ತಂದೆ–ತಾಯಿ ಮತ್ತು ಇತರ ವಿಷಯಗಳು – ೧೦

೩. ಡೊಳ್ಳಿನ ಹಾಡು – ೧೮

೪. ಚಿಕ್ಕಲಿಗರ ಸೋಗು – ೩೨

೫. ಗೀಗೀಪದ : ಅನ್ವಯಿಕ ದೃಷ್ಟಿ – ೪೪

೬. ತಳವಾರ – ೫೪

೭. ನಂಬಿಕೆ ಸಂಪ್ರದಾಯಗಳು – ೬೩

೮. ಜನಪದ ಸಾಹಿತ್ಯದಲ್ಲಿ ಮಾನವೀಯ ತುಡಿತಗಳು – ೮೫

೯. ಬದಲಾಗುತ್ತಿರುವ ಹಳ್ಳಿಗಳು – ೯೧

ಕನ್ನಡ ಜಾನಪದ ಅಧ್ಯಯನಕ್ಕೆ ಸ್ವಾತಂತ್ರ್ಯಪೂರ್ವ ಆಂಗ್ಲರ ಕೊಡುಗೆ

ಅಭ್ಯಾಸಯೋಗ್ಯ ಕೊಡುಗೆಯನ್ನು ಆಂಗ್ಲರು ಕನ್ನಡ ಜಾನಪದ ಅಧ್ಯಯನಕ್ಕೆ ಕೊಟ್ಟಿದ್ದಾರೆ. ಕನ್ನಡನಾಡಿನ ಶಾಸನಗಳು ಹಾಗೂ ಹಳೆಗನ್ನಡ ಕಾವ್ಯಗಳ ಸಂಗ್ರಹ, ಸಂಪಾದನೆಗಳಿಗೆ ಆಂಗ್ಲರನ್ನು ನೆನೆಯುವಂತೆ ಕನ್ನಡ ಜಾನಪದ ಕ್ಷೇತ್ರಾಧ್ಯಯನದ ವಿಷಯಕ್ಕೂ ಇವರನ್ನೇ ನೆನೆಯಬೇಕಾಗುತ್ತದೆ. ಮತ ಪ್ರಚಾರಕರಾಗಿ, ಆಡಳಿತಾಧಿಕಾರಿಗಳಾಗಿ ಭಾರತಕ್ಕೆ ಬಂದು ಕನ್ನಡದ ಸೇವೆಗೈದವರಲ್ಲಿ ಜಾನ್‌ಗ್ಯಾರೆಟ್, ರೀವ್, ಮೋಗ್ಲಿಂಗ್, ಕಿಟೆಲ್, ಫ್ಲೀಟ್, ಇ.ಪಿ.ರೈಸ್, ಬಿ. ಎಲ್. ರೈಸ್, ಕ್ಯಾಪ್ಟನ್ ಮೆಕೆಂಝಿ, ವಾಲ್ಟರ್ ಇಲಿಯಟ್, ಚಾರ್ಲಸ್ ಗೋವರ್ ಮುಂತಾದವರು ಪ್ರಮುಖರು. ಇವರಲ್ಲಿ ಕೆಲವರು ಶಾಸನ ಪರಿವೀಕ್ಷಣೆಗೆ ದುಡಿದರೆ ಇನ್ನು ಕೆಲವರು ಕನ್ನಡ ಜಾನಪದ ಮತ್ತು ಸಾಹಿತ್ಯಾಧ್ಯಯನಗಳಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡರು. ಇವರಾರೂ ಕನ್ನಡದ ಅಭ್ಯಾಸವನ್ನು ಧ್ಯೇಯವಾರಿಸಿಕೊಂಡು ಈ ದೇಶಕ್ಕೆ ಬಂದವರಲ್ಲ ಎಂಬುದನ್ನು ನಾವು ಮೊಟ್ಟಮೊದಲು ಮನದಟ್ಟುಮಾಡಿಕೊಳ್ಳಬೇಕು. ಇತರ ಬೇರೆ ಬೇರೆ ಉದ್ದೇಶಗಳಿಗಾಗಿ ಈ ದೇಶಕ್ಕೆ – ಕರ್ನಾಟಕಕ್ಕೆ – ಬಂದ ಇವರು ಕೇವಲ ಹವ್ಯಾಸಕ್ಕಾಗಿ ಈ ನುಡಿಯ ಸೇವೆ ಕೈಗೊಂಡರು. ಕಿಟೆಲ್‌ನಂಥ ವ್ಯಕ್ತಿಗೆ ಬರಬರುತ್ತ ಕನ್ನಡಕ್ಕಾಗಿ ದುಡಿಯುವುದೇ ಜೀವನಾದರ್ಶವಾದುದು ಈ ಭಾಷೆಯ ಪುಣ್ಯವೆಂದು ಭಾವಿಸಬೇಕಾಗುತ್ತದೆ.

ಕನ್ನಡ ಜಾನಪದ ಅಭ್ಯಾಸಕ್ಕೆ ಆಂಗ್ಲರು ತೊಡಗಿದ ಹಿನ್ನೆಲೆಯನ್ನು ನಾವು ಮೂರುನಿಟ್ಟಿನಿಂದ ನೋಡಬೇಕಾಗುತ್ತದೆ.

೧. ಪಾಶ್ಚಿಮಾತ್ಯ ದೇಶಗಳಲ್ಲಿ ಹರಡಿದ ಜಾನಪದ ಅಧ್ಯಯನದ ಅಲೆಗಳು.

೨. ಕನ್ನಡೇತರ ದೇಶಿಯ ಭಾಷೆಗಳಲ್ಲಿ ಪಾಶ್ಚಿಮಾತ್ಯರಿಂದ ನಡೆದ ಜಾನಪದ ಅಧ್ಯಯನ.

೩. ಮಿಷನರಿಗಳ ಕಾರ್ಯ ವಿಧಾನ

ಇವನ್ನೀಗ ಒಂದೊಂದಾಗಿ ಪರಿಶೀಲಿಸಬಹುದು.

೧. ವಿದೇಶಿಯರು ಭಾರತಕ್ಕೆ ಬಂದು ಕನ್ನಡ ಜಾನಪದ ಅಧ್ಯಯನ ಕ್ಷೇತ್ರವನ್ನು ಪ್ರವೇಶಿಸುವ ಹೊತ್ತಿಗೆ ಪಾಶ್ಚಾತ್ಯ ದೇಶಗಳಲ್ಲಿ ಈ ಬಗೆಯ ಅಭ್ಯಾಸ ಕೇವಲ ಕುತೂಹಲದ ಮಟ್ಟವನ್ನು ದಾಟಿಕೊಂಡು ಗಂಭೀರತೆಯ ಅಂಚನ್ನು ತಲುಪಿತ್ತು. ಜಾನಪದ ವಿಜ್ಞಾನದ ಜನಕರು ಎನ್ನಿಸಿಕೊಂಡ ಗ್ರಿಮ್ಸ್ ಸಹೋದರರು ಮತ್ತು Folk Lore ಶಬ್ದವನ್ನು ಸೃಷ್ಟಿಸಿ ಜಾನಪದದ ವ್ಯಾಪ್ತಿಯನ್ನು ಜಗತ್ತಿಗೆ ಮನದಟ್ಟು ಮಾಡಿಕೊಟ್ಟ ವಿಲಿಯಂ ಜಾನ್ ಥಾಮ್ಸ್ ಹತ್ತೊಂಬತ್ತನೆಯ ಶತಮಾನದ ಮಧ್ಯದ ಹೊತ್ತಿಗೆ ಜಾನಪದ ಅಭ್ಯಾಸಿಗಳಿಗೆ ಮನನೀಯ ಹೆಸರಾಗಿದ್ದರು. ಇಂಥ ಮಹನೀಯರ ಕಾರ್ಯ ಕಳಕಳಿಗಳು ಕ್ರೈಸ್ತಧರ್ಮ ಮತ ಪ್ರಚಾರಕರಾಗಿ, ಆಡಳಿತದ ಅಧಿಕಾರಿಗಳಾಗಿ ಭಾರತಕ್ಕೆ ಬಂದಿದ್ದ ವಿದೇಶಿಯರಿಗೆ ಪ್ರೇರಣೆ ನೀಡಿರಲು ಸಾಕು.

೨. ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದ ಜಾನಪದ ಅಧ್ಯಯನದ ಈ ಅಲೆಗಳು ಕನ್ನಡವನ್ನು ಒಳಗೊಂಡಂತೆ ದೇಶಿಯ ಇತರ ಭಾಷೆಗಳಲ್ಲಿಯೂ ಹರಡಿದವು. ಭಾರತೀಯ ಕನ್ನಡೇತರ ಬೇರೆ ಬೇರೆ ಭಾಷೆಗಳಲ್ಲಿ ನಡೆದ ಸಂಗ್ರಹ, ಸಂಪಾದನೆಗಳಿಗೂ ವಿದೇಶಿಯ ತಜ್ಞರೇ ಮೊದಲಿಗರು. ಇವರ ಗ್ರಂಥಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

೧. Annals and Antiquities of Rajastan – ಕರ್ನಲ್ ಟೋಡ್

೨. Romantic tales from the Punjab – ಸಿ. ಸ್ವಿನ್ನರ್‌ಟನ್

೩. The legends of the Punjab – ಆರ್. ಸಿ. ಟೆಂಪಲ್

೪. The punjab Lyrics and proverbs – ಸಿ. ಎಫ್. ಔಸ್‌ಬೋರ್ನ

೫. The tales of the Punjab – ಎಫ್. ಎ. ಸ್ಟೀಲ್

೬. A Collection of proverbs – ವಿಲಿಯಂ ಮಾರ್ಟಿನ್

Bengali and Sanskrit with their translation and application in English.

೭. Bengali Proverbs – ವಿಲಿಯಂ ಮಾರ್ಟಿನ್

ಹೊರನಾಡುಗಳಲ್ಲಿ ನಡೆದ ಈ ಬಗೆಯ ಸಂಗ್ರಹ, ಸಂಪಾದನೆಗಳ ಪರಸ್ಪರ ಪ್ರಭಾವವನ್ನು ಕುರಿತು ಇನ್ನೂ ಅಭ್ಯಾಸ ನಡೆಸಬೇಕಾಗಿದೆ.

---

೧. ವಿವರಗಳಿಗೆ ನೋಡಿ: ಡಾ. ನಂ. ತಪಸ್ವೀ ಕುಮಾರ ಅವರ "ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ" ಪುಟ-೪೭, ೪೮, ೪೯

೩. ಮತ ಪ್ರಚಾರಕರಾಗಿ ಭಾರತಕ್ಕೆ ಬಂದ ವಿದೇಶಿಯರು ಕನ್ನಡ ಕಲಿಯುವುದು ಅನಿವಾರ್ಯವಿದ್ದಿತು. ಅದರಲ್ಲೂ ಮತ ಪ್ರಚಾರದಂಥ ಕೆಲಸಕ್ಕೆ ತುಂಬಾ ಹರವಾದ ಭಾಷಿಕ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದ್ದಿತು. ಶಬ್ದಕೋಶದ ನಿರ್ಮಾಣ ಮತ್ತು ಏಸುವಿನ ಅಥವಾ ಕ್ರೈಸ್ತ ಧರ್ಮದ ಮೇಲ್ಮೆಯನ್ನು ಸಾರುವ ಸಾಹಿತ್ಯ ಸೃಷ್ಟಿ ಇವೆರಡನ್ನು ಮೊಟ್ಟಮೊದಲು ಇವರು ಕೈಗೊಂಡರು. ಈ ಜನರನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳಲು ಭಾಷಾ ಮಾಧ್ಯಮ ಅವಶ್ಯವೆಂಬುದನ್ನು ಮನಗಂಡ ಇವರು ಮೊದಮೊದಲು ಸ್ವಾರ್ಥೋದ್ದೇಶದಿಂದಲೇ ಕನ್ನಡದ ಅಭ್ಯಾಸ ಕೈಗೊಂಡರು. ಶಬ್ದಕೋಶಕ್ಕೆ ಅನಿವಾರ್ಯವಾಗಿ ಕನ್ನಡಿಗರ ಬದುಕನ್ನೇ ಇವರು ಅಭ್ಯಸಿಸಬೇಕಾಯಿತು. ಹಳೆಗನ್ನಡ ಕಾವ್ಯಾಭ್ಯಾಸವಲ್ಲದೆ ನೇರವಾಗಿ ಜನರಿಂದ ಶಬ್ದಗಳನ್ನು, ಗಾದೆಯ ಮಾತುಗಳನ್ನು ಸಂಗ್ರಹಿಸುವ ಮಟ್ಟಿಗೆ ಇವರ ಅಭ್ಯಾಸ ನಿಶ್ಚಿತವಾಯಿತು. ಕನ್ನಡ–ಇಂಗ್ಲೀಷ್ ಶಬ್ದಕೋಶ ನಿರ್ಮಿತಿಯಲ್ಲಿ ಕಿಟೆಲ್ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮಗಳು ಭಾಷಾಭ್ಯಾಸಿಗಳಿಗೆ ಮಾದರಿಯಾಗಬಲ್ಲವು. ಕಿಟೆಲ್‌ರು "ಪ್ರಾಚೀನ ಗ್ರಂಥಗಳ ಶಬ್ದ ಸಂಪತ್ತಿಯನ್ನು ಶೇಖರಿಸಿ ಪರಿಷ್ಕರಿಸಿದರು. ದ್ರಾವಿಡ ಜಾತಿ ಶಬ್ದಗಳನ್ನು ಸಂಗ್ರಹಿಸಿ ನಿಷ್ಪತ್ತಿಯನ್ನು ಸೂಚಿಸಿದರು. ಗ್ರಂಥಸ್ಥ ಉದಾಹರಣೆಗಳನ್ನು ಕೊಡುವುದಲ್ಲದೆ ಜನಸಾಮಾನ್ಯರ ಆಡುನುಡಿಗಳತ್ತ ದೃಷ್ಟಿ ಹಾಯಿಸಿದರು. ಗಾದೆಗಳನ್ನು ಸಂಗ್ರಹಿಸಿದರು. ಹಲವಾರು ಪದಾರ್ಥಗಳನ್ನು ಕಿಸೆಯಲ್ಲಿಟ್ಟುಕೊಂಡು ಧಾರವಾಡ–ಹುಬ್ಬಳ್ಳಿಗಳ ಬೀದಿಯಲ್ಲಿ ಸಂಚರಿಸಿ ಹಳ್ಳಿಗರಲ್ಲಿ ಕೇಳಿ ಅರ್ಥಸಂಗ್ರಹ ಮಾಡುತ್ತಿದ್ದರು. ಹುಬ್ಬಳ್ಳಿಯ ವಸ್ತ್ರದ ಶಿವಲಿಂಗಪ್ಪ ಎಂಬವರಿಂದ ಅನೇಕ ಶಬ್ದ ಸಂಗ್ರಹಿಸಿದರು". [೨] ಹೀಗೆ ಅನಿವಾರ್ಯವೆನಿಸಿ ಕೆಲವರು ಜಾನಪದ ಲೋಕವನ್ನು ಪ್ರವೇಶಿಸಬೇಕಾಯಿತು.

ಮತ ಪ್ರಚಾರಕ್ಕೆ ಸಂಬಂಧಪಟ್ಟ ಹಾಡುಗಳ ರಚನೆಯಲ್ಲಿಯೂ ಇವರು ತುಂಬ ಜಾಗರೂಕರಾಗಿದ್ದರು. ಬಯಲಾಟದ ಹಾಡುಗಳು, ಲಾವಣಿಗಳು, ದುಂದುಮೆಗಳು ಜಾನಪದ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿರುವುದನ್ನು ಇಲ್ಲಿಗೆ ಬಂದ ವಿದೇಶಿಯರು ಮನಗಂಡರು. ಜಾನಪದರ ಸಾಂಸ್ಕೃತಿಕ ಜೀವನದ ಮೇಲೆ ಈ ಜನಪದ ಸಾಹಿತ್ಯದ ಪ್ರಭಾವ ದಟ್ಟವಾಗಿರುವುದನ್ನು ಗಮನಿಸಿದ ಆಂಗ್ಲರು ಈ ಪ್ರಭಾವದ ಲಾಭವನ್ನು ತಾವು ಪಡೆಯಬಾರದೇಕೆ ಎಂದು ಚಿಂತಿಸುತ್ತ ಅವರಂತೆ ಹಾಡುಕಟ್ಟಲು ಯತ್ನಿಸುತ್ತ ಈ ಅಭ್ಯಾಸದ ಮುಂದುವರಿಕೆಯಲ್ಲಿ ಕ್ರಮೇಣ ಹಳ್ಳಿಯ ಹಾಡು, ಸಂಪ್ರದಾಯಗಳಿಗೆ ಮಾರುಹೋದರು. ಜನರಿಗೆ ಸುಲಭವಾಗಿ ಅರ್ಥವಾಗುವ, ಜನರಲ್ಲಿ ಹರವಾದ ಪ್ರಚಾರ ಪಡೆದು ಕೊಂಡಿರುವ ಜನಪದ ಮಟ್ಟುಗಳನ್ನೇ ಇವರು ತಮ್ಮ ಮತದ ಗೀತೆಗಳಿಗೆ ಬಳಸಿಕೊಂಡರು. ವಿಶೇಷವಾಗಿ ಜನಪದ ಹಾಡು, ದಾಸರ ಹಾಡುಗಳ ಭಾವ–ಭಾಷೆಗಳು ಇವರ ಮನವನ್ನು ಆಕರ್ಷಿಸಿದವು. ಇವುಗಳನ್ನು ತಮ್ಮ ಗೀತ ರಚನೆಗೆ ಸಹಾಯಕ ಸಾಹಿತ್ಯವಾಗಿ ಅಭ್ಯಾಸ ಮಾಡುತ್ತ ಕ್ರಮೇಣ ಇವುಗಳನ್ನು

---

೨. ಡಾ. ಆರ್.ಸಿ. ಹಿರೇಮಠ 'ಕನ್ನಡಕ್ಕೆ ಕಿಟೆಲ್ಲರ ಕೊಡುಗೆ' ಪುಟ ೧೩–೧೪

ಸಂಗ್ರಹಿಸುವ ಹವ್ಯಾಸ ಇವರದಾಯಿತು. ಸುತ್ತಲೂ ನಡೆದ ಜಾನಪದ ಚಟುವಟಿಕೆಗಳನ್ನು ನೋಡುತ್ತ ಬಂದ ಇವರಿಗೆ ಕರ್ನಾಟಕದ ಜಾನಪದ ಕ್ಷೇತ್ರ ತುಂಬಾ ಸಂಪದ್ಭರಿತವಾದ ನೆಲವಾಗಿ ಗೋಚರಿಸಿದ್ದಲ್ಲಿ ಯಾವ ಆಶ್ಚರ್ಯವೂ ಇಲ್ಲ. ಈ ಹಿನ್ನಲೆಯಲ್ಲಿ ತಮ್ಮ ಅಳವಿಗೆ ನಿಲುಕಿದಷ್ಟು ಜಾನಪದ ಪ್ರಭೇದಗಳನ್ನು ಸಂಗ್ರಹಿಸಿದ್ದಲ್ಲದೆ ಕೆಲವರು ಆ ಕುರಿತಾಗಿ ಗಂಭೀರವಾಗಿ ಯೋಚಿಸಿದ್ದೂ ಉಂಟು.

ಸ್ವಾತಂತ್ರ್ಯ ಪೂರ್ವದ ಆಂಗ್ಲರಿಂದ ಕನ್ನಡ ಜಾನಪದ ಅಧ್ಯಯನಕ್ಕೆ ಸಂದ ಕೊಡುಗೆಯನ್ನು –

ಅ. ಗೀತಗಳು

ಆ. ಗಾದೆಗಳು.

ಇ. ಇತರ

– ಎಂದು ವಿಭಾಗಿಸಿಕೊಂಡು ಮುಂದುವರಿಯುವುದು ಉಚಿತವೆನಿಸುತ್ತದೆ.

ಅ. ಗೀತಗಳು

ಕ್ರಿ.ಶ. ೧೮೦೩ರ ಜಾನ್ ಲೇಡನ್‌ನ ಶ್ರೀರಂಗಪಟ್ಟಣದ ಕೆಡುಗಾಲ ಕುರಿತ ಲಾವಣಿ ಸಂಗ್ರಹವೇ ಮೊದಲನೆಯದೆಂದು ಅಂಬಳಿಕೆ ಹಿರಿಯಣ್ಣ ಅಭಿಪ್ರಾಯಪಡುತ್ತಾರೆ.[೩] ತರುವಾಯದ ಚಾರ್ಲಸ್ ಗೋವರ್‌ನ "The Folk Songs of Southern India" ಎಂಬ ಕೃತಿಯನ್ನು ಕುರಿತು ವಿವೇಚಿಸುವುದು ಮುಖ್ಯವೆನಿಸುತ್ತದೆ. ಈ ಕೃತಿಯಲ್ಲಿ ಗೋವರನು ದಾಸರ ಪದಗಳನ್ನು ಜನಪದ ಗೀತೆಗಳೆಂದು ಸಂಗ್ರಹಿಸಿದ್ದಾನೆ. ಇದು ತಪ್ಪು ಎಂಬ ಆಕ್ಷೇಪಣೆಯೊಂದಿದೆ.[೪] ಆದರೆ ಇದರ ಹಿಂದೆ ಇರಬಹುದಾದ ಚಾರ್ಲಸ್ ಗೋವರನ ಮನೋಧೋರಣೆ ಮರು ಪರಿಶೀಲನೆಗೆ ಯೋಗ್ಯವಾದುದೆಂದೆನಿಸುತ್ತದೆ.

ನಮ್ಮಲ್ಲಿ ದಾಸರಿಗೆ ಸಂಬಂಧಿಸಿದ ಅಧ್ಯಯನ ಎರಡು ಬಗೆಯಾಗಿ ನಡೆಯಬೇಕಾಗಿದೆ. ೧. ದಾಸರ ಜನಾಂಗಿಕ ಅಧ್ಯಯನ ೨. ಭಜನಾ ಮೇಳದ ಜಾನಪದೀಯ ಅಧ್ಯಯನ. ಪುರಂದರ ದಾಸ, ಕನಕದಾಸರ ಪದಗಳನ್ನೂ, ಅನುಭಾವಕ್ಕೆ ಸಂಬಂಧಪಟ್ಟ ಬೇರಾವುದೋ ಹಾಡುಗಳನ್ನೂ ಹಾಡುತ್ತ ಉಪಜೀವನ ಸಾಗಿಸುವ ದಾಸರ ಜನಾಂಗಿಕ ಅಧ್ಯಯನವೆಂಬುದು ಎಲ್ಲರಿಗೂ ಅರ್ಥವಾಗುವಂಥದು. ಎರಡನೆಯದಾಗಿ ಪುರಂದರದಾಸ, ಕನಕದಾಸ, ನಿಜಗುಣಶಿವಯೋಗಿ, ಸರ್ಪಭೂಷಣ ಶಿವಯೋಗಿ ಮುಂತಾದವರ ಹಾಡುಗಳನ್ನು ಹಾಡುವ ಭಜನಾಮೇಳದತ್ತ ಜಾನಪದ ವಿಜ್ಞಾನಿಗಳು ಗಮನಹರಿಸಬೇಕಾಗಿದೆ. ಜನ ಸಾಮಾನ್ಯರಿಗೆ ಅವ್ಯಾಯಮಾನವೆನಿಸಿದ

೩. ಕರ್ನಾಟಕ ಜಾನಪದ : ಪುಟ-೬೫

೪. ಕರ್ನಾಟಕ ಜಾನಪದ ವಿಶ್ವಕೋಶ : ಪುಟ – ೭೯೯

ಅನುಭಾವದ ಹಾಡುಗಳನ್ನು ರಚಿಸಿದವರು ಪುರಂದರದಾಸರು, ನಿಜಗುಣ ಶಿವಯೋಗಿಗಳಂಥ ಶಿಷ್ಟವರ್ಗದವರೆನ್ನಬಹುದಾದ ಕವಿಗಳು. ಆದರೆ ಈ ಹಾಡುಗಳು ಒಮ್ಮೆ ಜಾನಪದ ಆವರಣಕ್ಕೆ ಬಿದ್ದಮೇಲೆ ಇವನ್ನು ಹಾಡುವ ಜನಸಾಮಾನ್ಯರನ್ನು, ಮೇಳಗಳನ್ನು ಜಾನಪದೀಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಇಲ್ಲಿ ವ್ಯಕ್ತವಾಗುವ ಜನಪದರ ಲಯ, ವಾದ್ಯ, ಹಾಡು ಸಂದರ್ಭ ಇವನ್ನೆಲ್ಲ ನೋಡಿದರೆ ಈ ಬಗೆಯ ಹಾಡುಗಳ ಬಳಕೆಯನ್ನು ಜಾನಪದದಿಂದ ಭಿನ್ನವಾಗಿ ಗುರ್ತಿಸುವುದು ಸಾಧ್ಯವಾಗುವುದಿಲ್ಲ. ಇಂಥ ಹಾಡುಗಳಿಗಿಂತಲೂ ಕ್ಲಿಷ್ಟವಾದ ಯಕ್ಷಗಾನದ ಹಾಡು, ದೊಡ್ಡಾಟದ ಮಾತುಗಳನ್ನು ಜಾನಪದ ಕ್ಷೇತ್ರದ ಬಹುದೊಡ್ಡ ಸಾಧನೆಯೆಂದು ಹೆಮ್ಮೆ ಪಡುವ ನಾವು ದಾಸರ ಪದಗಳನ್ನೂ – ಅವುಗಳ ಬಳಕೆಯ ಸಂದರ್ಭದಲ್ಲಿ – ಅದೇ ದೃಷ್ಟಿಯಿಂದ ನೋಡಬೇಕಾಗುತ್ತದೆ. ಗೋವರ್, ಸಂಗ್ರಹದ ಸಂದರ್ಭದಲ್ಲಿ ಜನಸಾಮಾನ್ಯರನ್ನೇ ಅವಲಂಬಿಸಿ ದಾಸರ ಪದಗಳನ್ನು ಜಾನಪದವೆಂದು ಕರೆದಿರುವುದು ಅವನ ಮಟ್ಟಿಗೆ ಸಹಜವೆನಿಸುತ್ತದೆ. ಗೋವರನು ಹಾಡುಗಳನ್ನು ಗ್ರಹಿಸಿರುವುದು ವೈಷ್ಣವ ಪರಂಪರೆಯ ದಾಸರಿಂದ ಎನ್ನುವುದಕ್ಕಿಂತ ಜನಸಾಮಾನ್ಯರಿಂದ ಎನ್ನುವುದು ಹೆಚ್ಚು ಸೂಕ್ತವಾದ ಮಾತು.

ಗೋವರನ ಈ ಸಂದರ್ಭದ ತಿಳುವಳಿಕೆಯನ್ನು ಕುರಿತಾಗಿ ಫ್ಲೀಟರ ಮಾತುಗಳು ಗಮನಾರ್ಹ "ತಮ್ಮ ಗ್ರಂಥದ ಪ್ರಸ್ತಾವನೆಯನ್ನು ಗೋವರ್ ಅವರು ಚೆನ್ನಾಗಿ ವಿವರಿಸಿರುವಂತೆ ಅವು ದಾಸರಿಂದ ಹಾಡಲ್ಪಟ್ಟವು. ಆದರೆ ಆ ಘಟನೆಗಳಿಗೆ ಸಂಬಂಧಪಟ್ಟ ಪ್ರದೇಶದ ಮತ್ತು ಸುತ್ತಮುತ್ತಲ ಪ್ರದೇಶದ ಸಾಮಾನ್ಯ ಹಳ್ಳಿಗರಿಂದಲೂ ಅವು ಹಾಡಲ್ಪಟ್ಟಿದ್ದವು." ಮುಂಚಿನ ನನ್ನ ವಾದವನ್ನು ಫ್ಲೀಟರನ ಈ ಮಾತುಗಳು ಸಮರ್ಥಿಸುತ್ತವೆಯೆಂದು ಭಾವಿಸಿದ್ದೇನೆ.

ಚಾರ್ಲಸ್ ಗೋವರ್ ಜಾನಪದ ಅಧ್ಯಯನದ ನೆಲೆ-ಬೆಲೆಗಳನ್ನು ಬಲ್ಲವನಾಗಿದ್ದ. "ಜಾನಪದ ಒಂದು ದೇಶದ ಸಂಪತ್ತಾದುದರಿಂದ ಅದರ ಮೂಲಕ ಆ ದೇಶದ ಸಂಸ್ಕೃತಿ ಮತ್ತು ಜನರ ನಡವಳಿಕೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ಐರೋಪ್ಯರಿಗೆ ಭಾರತದ ಜನತೆ ಮತ್ತು ಸಂಸ್ಕೃತಿ ಸರಿಯಾಗಿ ಅರ್ಥವಾಗಲೆಂದು ಜಾನಪದ ಕ್ಷೇತ್ರ ಕಾರ್ಯಕ್ಕೆ ಕೈ ಹಾಕಿದೆ" [೬] ಎನ್ನುತಾನೆ. ಇಷ್ಟೊಂದು ಆತ್ಮವಿಶ್ವಾಸದಿಂದ ಮಾತನಾಡುವ ಗೋವರನ ಗೀತಸಂಗ್ರಹದ ಹಿನ್ನಲೆಯನ್ನು ಸರಿಯಾಗಿ ಗ್ರಹಿಸಿ ಒಂದು ತೀರ್ಮಾನಕ್ಕೆ ಬರುವುದು ಯೋಗ್ಯವೆನಿಸುತ್ತದೆ.

ಫ್ಲೀಟರು ಕನ್ನಡ ಜನಪದ ಸಾಹಿತ್ಯಕ್ಕೆ ಸಲ್ಲಿಸಿರುವ ಬಹುದೊಡ್ಡ ಕಾಣಿಕೆ ಲಾವಣಿಗಳ ಸಂಗ್ರಹ. ಫ್ಲೀಟರ ಲಾವಣಿಗಳನ್ನು ಸಂಗ್ರಹಿಸಿರುವ ಕ್ಯಾತನಹಳ್ಳಿ ರಾಮಣ್ಣ ಈ ಲಾವಣಿಗಳನ್ನು ಕುರಿತಾಗಿ ಈಗಾಗಲೇ ಸಾಕಷ್ಟು ಚರ್ಚಿಸಿರುವುದರಿಂದ ಮತ್ತೆ

೫. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು. ಸಂ. ಕ್ಯಾತನಹಳ್ಳಿ ರಾಮಣ್ಣ ಪುಟ ೩೧-೩೮

೬. ಕನ್ನಡ ಜಾನಪದ ವಿಶ್ವಕೋಶ : ಪುಟ – ೭೬೬

ಅವುಗಳನ್ನು ಕುರಿತು ಹೆಚ್ಚು ಮಾತನಾಡುವುದು ಬೇಡವೆನಿಸುತ್ತದೆ. ಫ್ಲೀಟರು ಲಾವಣಿಗಳ ಸಂಗ್ರಹಕ್ಕಾಗಿ ಪಟ್ಟ ಶ್ರಮದಷ್ಟೇ ಮುಖ್ಯವಾದುದು ಲಾವಣಿಗಳನ್ನು ಕುರಿತಾದ ಅವರ ವಿವೇಚನೆ. ಲಾವಣಿಯ ಶಿಲ್ಪವನ್ನು ಕುರಿತಾಗಿರುವ ಫ್ಲೀಟರ ಮಾತುಗಳು ಅವರ ಸೂಕ್ಷ್ಮ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. "ಒಂದು ನಿಯಮದ ಪ್ರಕಾರ ಒಂದೇ ಸಂಖ್ಯೆಯ ಪಾದಗಳನ್ನುಳ್ಳ ನುಡಿಗಳನ್ನು ವಿಭಾಗಿಸಬಾರದು. ಹಾಡುಗಳ ಲಯ ಮಾತ್ರ ಹಾಡುವುದನ್ನು ಕೇಳಿಯೇ ತಿಳಿಯುವಂಥದ್ದು. ರೂಢಿಯಲ್ಲಿರುವ ಕನ್ನಡಕಾವ್ಯದ ವೈಶಿಷ್ಟ್ಯವಾದ ಅನುಪ್ರಾಸ ಅಥವಾ ದ್ವಿತೀಯಾಕ್ಷರ ಪ್ರಾಸದ ಬದಲು ಶಿಷ್ಟ ಸಾಹಿತ್ಯದ ಸೂತ್ರಗಳನ್ನು ಆಧರಿಸಿ ಅಂತ್ಯಪ್ರಾಸ ಬಳಕೆಯಾಗಿರುವುದು ಮತ್ತೊಂದು ಗಮನಾರ್ಹ ಅಂಶವಾಗಿದೆ".[೭] ಫ್ಲೀಟರು ಲಾವಣಿಗಳ ಹಾಡುಗಾರಿಗೆಯನ್ನು ಕುರಿತಾಗಿಯೂ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ರಾಗಗಳಂತೂ ಬಹಳ ಆಕರ್ಷಕವಾಗಿರುತ್ತವೆ. ಆದರೆ ಎಲ್ಲ ಸ್ಥಳೀಯ ಸಂಗೀತಗಳಂತೆ ಇದನ್ನು ಕೂಡ ಗ್ರಹಿಸಲು ಮತ್ತು ಬರವಣಿಗೆಗೆ ಅಳವಡಿಸಲು ತುಂಬ ಕಷ್ಟವಾಗುತ್ತದೆ. ವಾಸ್ತವವಾಗಿ ನುಡಿಗಳ ಹಾಡುಗಾರಿಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತ ಹೋಗುತ್ತದೆ. ಆದರೆ ಪಲ್ಲವಿ ಅಥವಾ ಹಿಮ್ಮೇಳದ ರಾಗ ಮಾತ್ರ ಮೋಹಕ, ನಿರ್ದಿಷ್ಟ ಮತ್ತು ಪ್ರಸಿದ್ಧ".[೮]

ದುಂದುಮೆಯ ಹಾಡುಗಳು ಒಂದು ಕಾಲಕ್ಕೆ ಕನ್ನಡ ಜನಪದ ಗೀತ ಪ್ರಕಾರವಾಗಿ ಜನಪ್ರಿಯಗೊಂಡಿದ್ದವು. ಇಂದು ದುಂದುಮೆಯ ಸ್ವರೂಪದ ಬಗೆಗೆ ಅಸ್ಪಷ್ಟ ತಿಳುವಳಿಕೆಗಳಿವೆ. ಗದ್ದಗಿಮಠರು "ದುಂದುಮೆಯು ಹೋಳಿಯ ಪದದ ಒಂದು ಉತ್ಕೃಷ್ಟವಾದ ಕುಸುಕು. ಇದನ್ನು ಮೋಜು, ಮಜಲುಗಳೊಡನೆ ಹಾಡುವ ವಾಡಿಕೆಯು ಕರ್ನಾಟಕದಲ್ಲಿ ಶಿವಶರಣರ ಕಾಲದಿಂದ ಹೆಚ್ಚು ಬಳಕೆಯಲ್ಲಿ ಬಂದಿದೆ ಎಂದು ಹೇಳಬಹುದು" ಎನ್ನುತ್ತಾರೆ. ಹೋಳಿ ಹುಣ್ಣಿಮೆಯ ಇಂದಿನ ಹಾಡುಗಳೊಂದಿಗೆ ಹಿಂದೆ ಇದ್ದ ದುಂದುಮೆಗಳನ್ನು ಹೋಲಿಸಿ ನೋಡಬೇಕಾಗಿದೆ. ಆದರೆ ಇಂದು ದುಂದುಮೆ ಹಾಡುಗಳ ಕೊರತೆ ಎದ್ದು ಕಾಣುತ್ತದೆ. ಆದರೆ ಕಿಟೆಲ್ಲರು ಕೊಟ್ಟ ತಮ್ಮ ಸಮಕಾಲೀನ ಮೂವತ್ತು ಪ್ರಕಟಣೆಗಳಲ್ಲಿ ಏಳು ಕೃತಿಗಳು ದುಂದುಮೆಗಳಾಗಿವೆ. ೧. ಕಾಮದಹನದ ರತಿ ಪ್ರಲಾಪ ದುಂದುಮೆ. ೨. ಕೃಷ್ಣ ಲೀಲಾ ದುಂದುಮೆ. (ಕುಂದಗೊಳ್ಳ ಶ್ರೀಗುರು) ೩. ಕೃಷ್ಣಾರ್ಜುನ ದುಂದುಮೆ. (ಕಲಿಬಸವ ಲಿಂಗಯ್ಯ) ೪. ದ್ರೌಪದಿ ಮಾನಹರಣ ದುಂದುಮೆ (ಚೆನ್ನಸಿದ್ದೇಶನ ಶಿಷ್ಯ, ಹುಬ್ಬಳ್ಳಿ) ೫. ವೀರಸಂಗಯ್ಯ ದುಂದುಮೆ (ಚೆನ್ನಬಸವ ಸಾಲಿ, ಧಾರವಾಡ) ೬. ಹುಬ್ಬಳ್ಳಿ ವರ್ಣನ ದುಂದುಮೆ. ೭. ಹುಬ್ಬಳ್ಳಿ ಮರ್ಕಟ ದುಂದುಮೆ. (ಚೆನ್ನವೃಷಭನ ಮಗ, ತರಬೇತ ಸಾಲಿಮಠ, ಧಾರವಾಡ)[೧೦] ಕಿಟೆಲ್ಲರು ಕೊಟ್ಟಿರುವ ಈ ಯಾದಿಯ ಎಲ್ಲ ದುಂದುಮೆ ಹಾಡುಗಳು ಸಿಕ್ಕರೆ ದುಂದುಮೆಯ ಸ್ವರೂಪದ ಬಗೆಗೆ ಒಂದು ಸ್ಥೂಲ ಕಲ್ಪನೆ ಬರಬಹುದೇನೋ.

---

೭. ಫ್ಲೀಟರು ಸಂಗ್ರಹಿಸಿದ ಏದು ಐತಿಹಾಸಿಕ ಲಾವಣಿಗಳು ಸಂ. ಕ್ಯಾತನಹಳ್ಳಿ ರಾಮಣ್ಣ ಪುಟ –೩೨

೮. ಅದೇ ಪುಟ– ೩೨–೩೩.

೯. ಕನ್ನಡ ಜಾನಪದ ಗೀತೆಗಳು : ಪುಟ – ೯೩

೧೦. ಕನ್ನಡಕ್ಕೆ ಕಿಟೆಲ್ಲರ ಕೊಡುಗೆ : ಪುಟ–೪೦–೪೧ (ಡಾ. ಎಂ. ಎಂ. ಕಲಬುರ್ಗಿಯವರ ಲೇಖನದಿಂದ ಉದ್ಧೃತ).

ಒಂದು ಕುತೂಹಲದ ಸಂಗತಿಯೆಂದರೆ ಲಾವಣಿಗಳು, ದುಂದುಮೆಗಳನ್ನು ಕುರಿತಂತೆ ಆಸಕ್ತಿ ತಾಳಿರುವ ಇವರಿಂದ ಬೀಸುಕಲ್ಲಿನ ಹಾಡುಗಳು, ಕೋಲಾಟದ ಹಾಡುಗಳು, ಮದುವೆಯ ಸಂಪ್ರದಾಯದ ಹಾಡುಗಳು–ಒಟ್ಟಾರೆ ಹೆಣ್ಣುಮಕ್ಕಳ ಹಾಡುಗಳು ಸಂಗ್ರಹಗೊಂಡಿಲ್ಲ. ಇದಕ್ಕೆ ಕಾರಣಗಳನ್ನು ಮೂರು ಬಗೆಯಾಗಿ ಊಹಿಸಬಹುದು. ೧. ಮತಾಂತರಕ್ಕೆ ಸಂಬಂಧಿಸಿದ ವಿಷಯವೇ ಇರಲಿ, ಆಡಳಿತಕ್ಕೆ ಸಂಬಂಧಪಟ್ಟ ವಿಷಯವೇ ಇರಲಿ ಈ ವ್ಯಾಪ್ತಿಯಲ್ಲಿ ಹಿರಿಯರ, ಪುರುಷರ ಸಂಪರ್ಕ ಮಾತ್ರ ಮುಖ್ಯವೆನಿಸುತ್ತದೆ. ಸಹಜವಾಗಿ ಮನೆಯ ಹೆಣ್ಣುಮಕ್ಕಳು ಹಿಂದೆ ಸರಿಯುತ್ತಾರೆ. ೨. ಮಿಷನರಿಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ತೀರ ಕಡಿಮೆ. ೩. ಭಯವೋ, ಸಂಕೋಚವೋ ಹೆಣ್ಣು ಮಕ್ಕಳು ಈ ಮಿಷನರಿಗಳ ಸಂಪರ್ಕದಲ್ಲಿ ಬರುವುದು ಅಪರೂಪ. ಆದ್ದರಿಂದ ಒಂದು ಸಂಸ್ಕೃತಿಯ ಪ್ರತಿನಿಧಿಗಳಾದ ಹೆಣ್ಣುಮಕ್ಕಳ ಜನಪದ ಗೀತೆಗಳು, ಇಂಥ ಗೀತೆಗಳಿಗೆ ಹಿನ್ನೆಲೆಯಾಗಿದ್ದ ವೃತ್ತಿ ಸಂಪ್ರದಾಯಗಳು ಈ ವಿದ್ವಾಂಸರಿಂದ ಸಂಗ್ರಹಗೊಂಡಿಲ್ಲ. ಕೇವಲ ಹವ್ಯಾಸಕ್ಕಾಗಿ ಮಾಡುವವರ ಮೇಲೆ ಇದನ್ನು ಆರೋಪವೆಂದು ಹೊರಿಸಬೇಕಾಗಿಲ್ಲ. ಬಹಳವಾದರೆ ನಮಗೆ ಈಗ ಇದೊಂದು ಕೊರತೆಯನ್ನಿಸಬಹುದು ಅಷ್ಟೇ. ಇಂದಿಗೆ ಸುಮಾರು ೧೫೦ ವರ್ಷಗಳ ಹಿಂದೆ ಅನೇಕ ಹಾಡು, ನಂಬಿಕೆ, ಸಂಪ್ರದಾಯ ವೃತ್ತಿಗಳೆಲ್ಲ ಸಂಗ್ರಹಿಸಲ್ಪಟ್ಟಿದ್ದರೆ ಅಂದಿನ ಅವುಗಳ ಸ್ವರೂಪದಲ್ಲಿ ಹೇಗಿದ್ದವೋ ಹಾಗೆಯೇ ದೊರೆಯಬಹುದಿತ್ತು.

ಆ. ಗಾದೆಗಳು

ವಿದೇಶಿಯರು ಕನ್ನಡ ಭಾಷೆಯ ಕಲಿಕೆಗಾಗಿ ಶಬ್ದಕೋಶದ ನಿರ್ಮಿತಿಗೆ ಕೈ ಹಾಕಿದ್ದನ್ನು ಹಿಂದೆಯೇ ಸ್ಪಷ್ಟಗೊಳಿಸಲಾಗಿದೆ. ಈ ಕೋಶಗಳ ನಿರ್ಮಾಣದಲ್ಲಿ ಶಬ್ದಾರ್ಥ ಸ್ಪಷ್ಟತೆಗೆ ಸಹಾಯಕವಾದ ಗಾದೆಗಳನ್ನು ಉಲ್ಲೇಖಿಸುತ್ತಿದ್ದುದು ಒಂದು ವಿಧಾನ. ವಿಲಿಯಂರೀವ್ ಮತ್ತು ಕಿಟೆಲ್ಲರನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾಗುತ್ತದೆ. ಕಿಟೆಲ್ಲರಿಗಿಂತ ಮೊದಲು ಕನ್ನಡ ಇಂಗ್ಲೀಷ್ ಕೋಶ ಕೊಟ್ಟಿರುವ ವಿಲಿಯಂರೀವ್ ದೇಶಿಯರ ಸಹಾಯದಿಂದ ಕೋಶಕ್ಕಾಗಿ ಗಾದೆಗಳನ್ನು ಸಂಗ್ರಹಿಸಿದನು. ಕಿಟೆಲ್ಲರು ತಮ್ಮ ಕೋಶದಲ್ಲಿ ಸಾಕಷ್ಟು ಗಾದೆಗಳನ್ನು ಉಲ್ಲೇಖಿಸಿದ್ದಾರೆ. "ಪ್ರಾಯಶಃ ಜಗತ್ತಿನ ಬೇರಾವ ಶಬ್ದಕೋಶದಲ್ಲೂ ಇಷ್ಟು ಗಾದೆಗಳನ್ನು ಬಳಸಿರುವ ಉದಾಹರಣೆ ಸಿಗುವುದಿಲ್ಲ"[೧೧] ಇದೇ ಸಂದರ್ಭದಲ್ಲಿ ಬಹುಶಃ ಕಿಟೆಲ್ಲರಿಗೆ ಕನ್ನಡದ ಗಾದೆಗಳ ಆಧಿಕ್ಯದ ಅರಿವಾಗಿ ಒಂದು ಸ್ವತಂತ್ರ ಗಾದೆಗಳ ಸಂಗ್ರಹವನ್ನೇ ಕೊಟ್ಟಿದ್ದಾರೆ. ೧೮೭೫ರಲ್ಲಿ ಪ್ರಕಟವಾದ 'ಸಹಸ್ರಗಾಥಾಮೃತ ಕಲಶ' ಎಂಬ ಈ ಸಂಗ್ರಹದಲ್ಲಿ ಸುಮಾರು ೨೦೦೦ ಕನ್ನಡ ಗಾದೆಗಳು ಇವೆ. ಇದಕ್ಕಿಂತ ಮೊದಲು ೧೮೪೭ರಲ್ಲಿ ಮೋಗ್ಲಿಂಗನು ಕನ್ನಡದ ಮೂರು ಸಾವಿರ ಗಾದೆಗಳನ್ನು ಸಂಗ್ರಹಿಸಿರುವುದಕ್ಕೆ ಉಲ್ಲೇಖಗಳಿವೆ.[೧೨] ಕಿಟೆಲ್ಲರ ಕೋಶದ ಗಾದೆಗಳನ್ನು ರಾಗೌ ಅವರು ಈಗಾಗಲೇ ಸಂಪಾದಿಸಿದ್ದಾರೆ. ಆದರೆ ಮೋಗ್ಲಿಂಗರ

---

೧೧. ವೇ.ಜ.ಗೌ. ಕನ್ನಡಕ್ಕೆ ಕಿಟ್ಟಲರ ಕೋಡುಗೆ: ಪು–೨೧

೧೨. ಡಾ. ಶ್ರೀನಿವಾಸ ಹಾವನೂರ :ಕನ್ನಡಕ್ಕೆ ಕಿಟೆಲ್‌ರ ಕೋಡುಗೆ ಪುಟ–೭ ಡಾ.ರಾ.ಯ. ಧಾರವಾಡಕರ:ಹೊಸಗನ್ನಡ ಸಾಹಿತ್ಯದ ಉದಯಕಾಲ : ಪುಟ–೫೯೦.

ಗಾದೆಗಳು ಇನ್ನೂ ಸಿಕ್ಕಿದಂತೆ ತೋರುವುದಿಲ್ಲ. ಸುಮಾರು ೧೪೫೫ ವರ್ಷಗಳ ಹಿಂದಿನ ಈ ಗಾದೆಗಳ ಸಂಗ್ರಹ ದೊರೆತರೆ ಕನ್ನಡ ಜನಪದದ ಸಾಹಿತ್ಯಕ್ಕೆ ಅಮೂಲ್ಯನಿಧಿ ಸಿಕ್ಕಂತಾಗುತ್ತದೆ.

ಇ. ಇತರೆ

ಕನ್ನಡ ಜನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಸಂಗ್ರಹ ಸಂಪಾದನೆಗಳೇ ಅಲ್ಲದೇ ರೀತಿ ನಡಾವಳಿ, ಜಾತಿ ಬುಡಕಟ್ಟು, ನಂಬಿಕೆ–ಸಂಪ್ರಾದಾಯಗಳನ್ನು ಕುರಿತಂತೆಯೂ ಅಭ್ಯಸಿಸಿ ಅನೇಕರು ಕನ್ನಡ ಜಾನಪದ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಅಭೇದುಬಾಯಿ ಅವರ Hindu manners, customs and ceremonics ಎಂಬುದು ಮೊದಲ ಬಾರಿಗೆ ದಕ್ಷಿಣ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾನಪದ ಅಧ್ಯಯನ ಕೈಗೊಂಡಿರುವ ಗ್ರಂಥ.[೧೩] ಇದೇ ರೀತಿ ಕ್ಯಾಪ್ಟನ್ ಜಿ. ಮೆಕಂಝಿ ಅವರ The Village feast, The Kulawadi of the Hassan District ಮುಂತಾದ ಲೇಖನಗಳು ಉಲ್ಲೇಖನಾರ್ಹವಾಗಿವೆ. ಇ. ಥರ್ಸ್ಟನ್ನನ Castes and tribes of Southern Indian ಎಂಬ ಗ್ರಂಥದ ಸಂಪುಟಗಳು ಈ ಭಾಗದ ಜನಾಂಗಿಕ ಅಧ್ಯಯನ ಕೈಗೊಳ್ಳುವವರಿಗೆ ಉತ್ಕೃಷ್ಟ ಆಕರಗಳಾಗಿವೆ. ಜಾನ್ ಗ್ಯಾರೆಟ್‌ನ 'Classical dictionary (ಹಿಂದೂ ನಾಮಕೋಶ) ಎಂಬ ಮಹತ್ವಪೂರ್ಣ ಗ್ರಂಥವೊಂದರ ಉಲ್ಲೇವನ್ನು ಡಾ. ಶ್ರೀನಿವಾಸ ಹಾವನೂರ ಅವರು ಕೊಡುತ್ತಾರೆ.[೧೪] ಈ ಗ್ರಂಥದಲ್ಲಿ ಭಾರತೀಯ ಪುರಾಣಗಳು, ಧರ್ಮಗ್ರಂಥಗಳು, ಕಾವ್ಯಗಳು, ಕಲೆಗಳು, ಆಚಾರವಿಚಾರಗಳು ಆಕಾರಾಧಿಯಾಗಿ ಹೊಂದಿಸಿ ನಿರೂಪಿಸಲ್ಪಟ್ಟಿವೆ.

ಆಂಗ್ಲರು ಕೈಗೊಂಡ ಕನ್ನಡ ಜಾನಪದ ಅಭ್ಯಾಸಕ್ಕೆ ಚಾರಿತ್ರಿಕ ಮಹತ್ವವಿದೆ. ಈ ಮಾತಿಗೆ ಸಮರ್ಥನೆಯೊದಗಿಸುವ ಅಂಶಗಳನ್ನು ಈ ರೀತಿಯಾಗಿ ಹೇಳಬಹುದು.

೧. ಕನ್ನಡ ಜಾನಪದ ಅಧ್ಯಯನವನ್ನು ಪ್ರಾರಂಭಿಸಿ ಅದರ ಮಹತ್ವವನ್ನು ತಿಳಿಸಿಕೊಟ್ಟವರು ಪಾಶ್ಚಿಮಾತ್ಯರು.

೨. ಇವರು ನೇರವಾಗಿ ಜಾನಪದ ಬದುಕಿನಿಂದಲೇ ವಿಷಯವನ್ನು ಸಂಗ್ರಹಿಸಿದವರಾದ್ದರಿಂದ ಅವರ ಲೇಖನ–ಗ್ರಂಥಗಳು ಆ ಕಾಲದ ಜಾನಪದ ಬದುಕು, ಸಾಹಿತ್ಯ, ಕಲೆಗಳನ್ನು ಕುರಿತಂತೆ ಪ್ರಾಮಾಣಿಕ ದಾಖಲೆಯೆನಿಸುತ್ತವೆ.

೩. ಮರೆಯಾಗಬಹುದಿದ್ದ ಎಷ್ಟೋ ಸಾಹಿತ್ಯ ಇವರಿಂದ ಉಳಿಯಿತು. ವಿಶೇಷವಾಗಿ ರೀವ್, ಮೊಗ್ಲಿಂಗ್, ಕಿಟೆಲ್‌ರಿಂದ ಸಂಪಾದಿಸಲ್ಪಟ್ಟ ಗಾದೆಗಳು ಹಾಗೂ

---

೧೩. ೧೪ ವಿಶೇಷಕ್ಕೆ ನಂ. ತಪಸ್ವಿ ಕುಮಾರರ ಜಾನಪದ ಅಧ್ಯಯನದ [illegible]ಕ್ಷಿಪ್ತ ಇತಿಹಾಸ ನೋಡಿ: ಪುಟ–೪೬, ೪೭,೫೦.

೧೪. ಹೊಸಗನ್ನಡ ಅರುಣೋದಯ:ಪುಟ–೧೦೩–೧೦೪

ಫ್ಲೀಟ್‌ರಿಂದ ಸಂಗ್ರಹಿಸಿಲ್ಪಟ್ಟ ಚಾರಿತ್ರಿಕ ಲಾವಣಿಗಳು.

೪. ವಿದೇಶಿಯರಿಂದ ಪ್ರಾರಂಭಗೊಂಡು ಅನೂಚಾನವಾಗಿ ಉಳಿದುಕೊಂಡ ಈ ಪ್ರಜ್ಞೆ, ಉತ್ತರ ಕರ್ನಾಟಕದಲ್ಲಿ ಹಲಸಂಗಿ ಗೆಳೆಯರಂಥವರಿಗೋ, ದಕ್ಷಿಣ ಕರ್ನಾಟಕದಲ್ಲಿ ಮಾಸ್ತಿಯಂಥವರಿಗೋ ಮೊದಲ ಪ್ರೇರಣೆಯಾಗಿರಲು ಸಾಕು.

ಪಾಶ್ಚಿಮಾತ್ಯರ ಗ್ರಂಥ ಲೇಖನಗಳೆಲ್ಲ ಸರಿಯಾಗಿ ದೊರೆತು ಇಂದು ಆಗ ಬೇಕಷ್ಟಿರುವ ಕೆಲಸ ಸಾಕಷ್ಟಿದೆ. ಇವರಿಗೆ ಜಾನಪದ ಲೋಕವೇ ನೇರ ಆಕರವಾಗಿದ್ದಿತಾದ್ದರಿಂದ ಜಾನಪದದಾಧ್ಯಯನದ ಬಹುಮುಖ್ಯ ಘಟಕವೊಂದನ್ನು ಅವರ ಸಂಗ್ರಹ ಬರವಣಿಗೆಗಳು ಹೊಂದಿವೆ. ಅವರ ಮುಗ್ಧತನಕ್ಕೆ-ಇದು ಬಹಳಷ್ಟು ಸಲ ಭಾಷೆಗೆ ಸಂಬಂಧಿಸಿದ್ದು. ಕೆಲವು ದೋಷಗಳು ಉಳಿದಿರಬಹುದು. ಸಂಗ್ರಹದ ಸಂದರ್ಭದಲ್ಲಿ ಕೆಲವು ಸಂಗ್ರಹಕಾರರು ತೋರುವ ಬೌದ್ಧಿಕ ಕಸರತ್ತಿಗಿಂತಲೂ ಈ ಬಗೆಯ ಮುಗ್ಧತೆ ಎಷ್ಟೋ ಪಾಲು ಮೇಲು. ಇಂಥವುಗಳನ್ನು ಸರಿಪಡಿಸಿಕೊಂಡು ಇವರ ಸಂಗ್ರಹಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬೇಕಿದೆ. ವಿದೇಶಿಯರ ಜಾನಪದ ಗ್ರಂಥಗಳು ಸಂಪುಟಗಳು ಸುಲಭವಾಗಿ ಸಾಧ್ಯವಾದರೆ ಸುಲಭ ಬೆಲೆಗೆ ಸಿಗುವಂತಾಗಬೇಕು. ಈ ದಿಸೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳು ಜಾನಪದ ಅಕಾಡೆಮಿ ಶ್ರಮಿಸಬೇಕು.

ಕೊನೆಯ ಮಾತು; ಇಂದು ನಮ್ಮ ಜಾನಪದ ಅಭ್ಯಾಸ ಕ್ರಮದಲ್ಲಿ ಶಾಸ್ತ್ರೀಯ ದೃಷ್ಟಿ ಮೊಳೆಯುತ್ತಿರುವುದು ಸ್ವಾಗತಾರ್ಹವೇ. ಆದರೆ ಇತ್ತೀಚಿನ ಹತ್ತು ವರ್ಷಗಳ ಅವಧಿಯಲ್ಲಿ ಸಂಗ್ರಹಾಸಕ್ತಿ ಕಡಿಮೆಯಾಗುತ್ತಿರುವುದು ದುರ್ದೈವದ ಸಂಗತಿ. ಜಾನಪದವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದಷ್ಟೇ ಬುದ್ಧಿವಂತಿಕೆಯ ಲಕ್ಷಣಃ ಸಂಗ್ರಹವನ್ನು ಯಾರು ಬೇಕಾದರೂ ಮಾಡಬಹುದೆನ್ನುವ ತಾತ್ಸಾರ ದೃಷ್ಟಿ ಅಥವಾ ಕೀಳರಿಮೆ ವಿಷಾದನೀಯ. ಜಾನಪದವನ್ನು ಕುರಿತಂತೆ ಇದ್ದ ಆಂಗ್ಲರ ನಿಜವಾದ ಕಳಕಳಿ ನಮಗಿಂದು ಪರಿಶ್ರಮದ ಮೂಲಕ ಬರಬೇಕಿದೆ. ಈ ದೃಷ್ಟಿಯಿಂದ ಆಂಗ್ಲರನ್ನು ನೆನೆಯುವ ಕಾಲವಿಂದು ಪ್ರಾಪ್ತವಾಗಿದೆ.

೧೯೯೩ ಜಾನಪದ ಗಂಗೋತ್ರಿ ೫-೪ ಪ್ರ.ಸಂ.ಡಾ. ಜೀ.ಶಂ.ಪರಮಶಿವಯ್ಯ

ಗ್ರಂಥಋಣ :

೧. ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ-ನಂ. ತಪಸ್ವೀ ಕುಮಾರ
೨. ಕನ್ನಡಕ್ಕೆ ಕಿಟಲ್ಲರ ಕೊಡುಗೆ-ಸಂ.ಡಾ.ಆರ್.ಸಿ. ಹಿರೇಮಠ
೩. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು-ಸಂ.ಕ್ಯಾತನಹಳ್ಳಿರಾಮಣ್ಣ
೪. ಹೊಸಗನ್ನಡದ ಅರುಣೋದಯ-ಡಾ. ಶ್ರೀನಿವಾಸ ಹಾವನೂರ
೫. ಹೊಸಗನ್ನಡ ಸಾಹಿತ್ಯದ ಉದಯಕಾಲ - ಡಾ.ರಾ.ಯ.ಧಾರವಾಡಕರ
೬ ಕರ್ನಾಟಕ ಜಾನಪದ -ಡಾ. ಎಸ್.ಕೆ.ಕರೀಂಖಾನ್
೭ ಕನ್ನಡ ಜಾನಪದ ಗೀತಗಳು - ಡಾ.ಬಿ.ಎಸ್. ಗದ್ದಗಿಮಠ
೮. ಕನ್ನಡ ಜಾನಪದ ವಿಶ್ವಕೋಶ-ಸಂ.ಡಾ. ಚಂದ್ರಶೇಖರ ಕಂಬಾರ

ಬೀರಪ್ಪನ ಜನನ :
ತಂದೆ–ತಾಯಿ ಮತ್ತು ಇತರ ವಿಷಯಗಳು

ರಸ್ತಾಪುರ ಭೀಮಕವಿಯಿಂದ ರಚಿಸಲ್ಪಟ್ಟ 'ಶ್ರೀ ರೇವಣಸಿದ್ಧೇಶ್ವರ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣ' ಮತ್ತು ಡಾ. ವೀರಣ್ಣ ದಂಡೆಯವರಿಂದ ಸಂಪಾದಿಸಲ್ಪಟ್ಟ 'ಜನಪದ ಹಾಲುಮತ ಮಹಾಕಾವ್ಯ' ಇವೆರಡೂ ಸದ್ಯಕ್ಕೆ ಹಾಲುಮತದ ಪ್ರಮಾಣ ಗ್ರಂಥಗಳು. ಇವುಗಳಲ್ಲಿ ಹಾಲಮತದ ಆರಾಧ್ಯದೈವವೆನಿಸಿದ ಬೀರಪ್ಪನ ಜನನವನ್ನು ಕುರಿತಾಗಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಬಗೆಯವಾದ ಉಲ್ಲೇಖಗಳಿವೆ. ಇವುಗಳನ್ನು ಮೊದಲು ಪ್ರತ್ಯೇಕವಾಗಿ ನೋಡಿ ಅಲ್ಲಿ ಹೊರಡುವ ಸಮಾನಾಂಶಗಳನ್ನು ಗೋವಿಂದಮೂರ್ತಿ ದೇಸಾಯಿಯವರು ಉಲ್ಲೇಖಿಸುವ ಬೇರೆ ಪುರಾಣಂಶಗಳಿಗೆ ಹೋಲಿಸಿ ನೋಡಿದರೆ ಕೆಲ ಹೊಸ ವಿಚಾರಗಳು ಬೆಳಕಿಗೆ ಬರುತ್ತವೆ.

ಹಾಲ್ಮತೋತ್ತೇಜಕ ಪುರಾಣ :

ಪುಷ್ಪದತ್ತನೆಂಬುವವನು ದಿನಾಲು ಶಿವಪೂಜೆ ಮಾಡುತ್ತಿದ್ದನು. ಅದರಂತೆ ಹರಿಯೂ ಶಿವಪೂಜೆ ಮಾಡುತ್ತಿದ್ದನು. ಒಂದು ದಿನ ಹರಿಯು ಪುಷ್ಪದತ್ತನು ಪೂಜಾಸಮಯದಲ್ಲಿ ಏರಿಸಿದ ಕಮಲಪುಷ್ಪ ಕೆಡವಿ ಶಿವನ ಪೂಜೆಗೆ ತೊಡಗಿದನು. ಪಾದದಲ್ಲಿ ಬಿದ್ದ ಹೂಗಳನ್ನು ಶಿವನು ಜಂಗುಗಳನ್ನಾಗಿ ಮಾಡಿ ಪ್ರೀತಿಯಿಂದ ಧರಿಸಿದನು. ಪುಷ್ಪದತ್ತನ ಪೂಜೆಯನ್ನು ಅಲಕ್ಷಿಸಿದ ಅಪರಾಧ ಪರಿಹಾರಕ್ಕಾಗಿ ಕಾಶಿಯಿಂದ ಗಂಗಾಜಲ ತಂದು ತನಗೆ ಅಭಿಷೇಕ ಮಾಡಬೇಕೆಂದು ಶಿವನು ಹರಿಗೆ ಆಜ್ಞಾಪಿಸಿದನು. ಶಿವನಾಜ್ಞೆಯನ್ನು ಪಾಲಿಸಿ ಕಾಶಿಗೆ ಹೊರಟ ಹರಿಯು ಚಂದ್ರಗಿರಿಯ ಅರಸು ನಿಲಂಕಾರ ಮಹಾರಾಜನ ಮಗ ಭರಮದೇವನನ್ನು ತಾನು ಬರುವವರೆಗೆ ಶಿವಪೂಜೆ ಮಾಡಿಕೊಂಡಿರುವಂತೆ ಕೇಳಿಕೊಂಡನು. ಭರಮದೇವನ ಇಚ್ಛೆಯಂತೆ ತನ್ನ ತಂಗಿ ಸುರಾವತಿಯನ್ನು ಕೊಟ್ಟು ಮದುವೆಯನ್ನೂ ಮಾಡಿ ಕಾಶಿಗೆ ಹೋದನು.

ಭರಮದೇವನ ನಿಷ್ಠೆಯ ಪೂಜೆಗೊಲಿದ ಶಿವನು 'ಇನ್ನು ಮೇಲೆ ನೀನೇ ನನ್ನ ಪೂಜೆ ಮಾಡುತ್ತಿರು' ಎಂದನು. ಪೂಜೆಗೆ ಬೇರೆಯವರನ್ನು ಒಳಗೆ ಬಿಡದಿರುವಂತೆ ಆಜ್ಞೆಯೂ ಆಯಿತು. ಕಾಶಿಯಿಂದ ಹಿಂದಿರುಗಿದ ಕೃಷ್ಣ (ಹರಿ)ನನ್ನು ದ್ವಾರಪಾಲಕರು ಒಳಗೆ ಬಿಡಲಿಲ್ಲ. ಆದರೂ ಒತ್ತಾಯದಿಂದ ಒಳಗೆ ಪ್ರವೇಶಿಸಿದ ಕೃಷ್ಣನು

'ಮಕ್ಕಳಿಲ್ಲದವರಿಂದ ಪೂಜೆಯನ್ನು ಸ್ವೀಕರಿಸುವುದು ಸರಿಯೇ' ಎಂದು ಶಿವನನ್ನು ಪ್ರಶ್ನಿಸಿದನು. ಕೃಷ್ಣನ ವಾದಕ್ಕೆ ಮಣಿದು ಶಿವನು ಭರಮದೇವನನ್ನು ಪೂಜೆಯಿಂದ ಬಿಡುಗಡೆಗೊಳಿಸಿದನು.

ಗಂಡನಿಂದ ವಿಷಯ ತಿಳಿದು ನೊಂದುಕೊಂಡ ಸುರಾವತಿ ಶಿವನಲ್ಲಿಗೆ ಹೋಗಿ ತನಗೆ ಮಕ್ಕಳನ್ನು ಕರುಣಿಸುವಂತೆ ಬೇಡಿಕೊಂಡಳು. ಹೊನ್ನ ಹೊಕ್ಕುಳ, ಸುವರ್ಣ ಜಡೆ ಇರುವ ಮಗನು ಹುಟ್ಟುವನೆಂಬ ಶಿವನ ಆಶೀರ್ವಾದ ಕೆಳಗಿನ ಪದ್ಯಗಳಲ್ಲಿ ಉಕ್ತವಾಗಿದೆ;

ಹಸ್ತಿ ಚರ್ಮಾಂಬರಂ ಬಳಿಕ ಸುತೆಯಂಕರೆದು
ಮಸ್ತಕದ ಮೇಲೆ ಕಡುಮೋಹದಿಂ ತನ್ನಮೃತ
ಹಸ್ತವಂಯಿಟ್ಟು ಭಸಿತವ ಕೊಟ್ಟು ಪುತ್ರವತಿಯಾಗಿ ಬಾಳೆಂದ್ದರಸುತ
ವಿಸ್ತಾರದಿಂದವಳಿಗಾನಂದಮಪ್ಪಂತೆ
ವಿಸ್ತರಿಸಿ ಹೊನ್ನ ಹೊಕ್ಕುಳ ಸುವರ್ಣದ ಜಡೆಗ
ಭಸ್ತಿಯಲಿ ಉಡಪನಂ ದಿಕ್ಕರಿಪ ಬಾಲನುದ್ಭವಿಸುವನು ನಿನ್ನುದರದಿ

ಜಾತಂಗೆ ನರರ ಭಯವಿಲ್ಲ ಸಟಿಯಲ್ಲ ತಿಳಿ
ಭೂತಲದಿ ಮಹಿಮೆಗಳ ತೋರಿ ಮೆರೆವನು ಮುಂದೆ
ಆತಂಗೆ ಶಿವಸಿದ್ಧ ಬೀರನೆಂಬಭಿದಾನವಿಟ್ಟು ಪಾಲಿಸೆಂದನು
ಭೂತೇಶ ವೇಳಿಕಳಿಸಲು ಸುರಾವತಿಯಳತಿ
ಪ್ರೀತಿಯಿಂದೈತಂದು ಪುರುಷಂಗೆ ಶಿವನೊರೆದ
ಮಾತುಗಳ ತಿಳಿಸಲಾ ಬರ್ಮಭೂಪಂ ಘನಾನಂದದೊಳ್ಮಗ್ನನಾದಂ [೧]

ಸುರಾವತಿ ಗರ್ಭವತಿಯಾದಳು. ಕೃಷ್ಣನಿಗೆ ವಿಷಯ ತಿಳಿಯಿತು. ತನ್ನ ತಂಗಿಗೆ ಹುಟ್ಟುವ ಮಗ ಮುಂದೆ ತನ್ನ ಮಗಳನ್ನು ಮದುವೆಯಾಗಿ ತನಗೆ ಅಪಹಾಸ್ಯ ಒದಗುವುದೆಂದು ತಿಳಿದಿದ್ದ ಕೃಷ್ಣನು ಗರ್ಭದಲ್ಲಿರುವಾಗಲೇ ಮಗುವನ್ನು ಕೊಲ್ಲುವ ಹಂಚಿಕೆ ಮಾಡಿದನು. ತಂಗಿಗೆ ವಿಷ ಬೆರೆಸಿದ ಮಧುರಾನ್ನವನ್ನು ತಂದನು ಗರ್ಭಸ್ಥ ಶಿಶು ಎಚ್ಚರಿಕೆ ನೀಡಿದ್ದರಿಂದ ಸುರಾವತಿಯು ಮಧುರಾನ್ನವನ್ನು ಸೇವಿಸದೆ ಕೃಷ್ಣನ ಕುಯುಕ್ತಿ ಫಲಿಸಲಿಲ್ಲ.

ಶಿವನು ಹೇಳಿದಂತಹ ಕೂಸನ್ನು ಸುರಾವತಿ ಹೆತ್ತಳು. ಕೃಷ್ಣನು ಜ್ಯೋತಿಷಿಯ ವೇಷ ಹಾಕಿಕೊಂಡು ಬಂದು ಈ ಮಗು ಹುಟ್ಟಿದ ಗಳಿಗೆ ಚೆನ್ನಾಗಿಲ್ಲ, ಇದರಿಂದ ನಿನ್ನ ಅಣ್ಣನಿಗೆ ಮೃತ್ಯುವೊದಗುವುದೆಂದೂ ಇದನ್ನು ಅರಣ್ಯದಲ್ಲಿ ಬಿಟ್ಟು ಬರಬೇಕೆಂದೂ ತಿಳಿಸಿದನು. ಸುರಾವತಿಯು ದುಃಖಿಸುತ್ತ ಮಗುವನ್ನು ಬಿಟ್ಟು ಬರಲು ಚಾರರನ್ನು

೧. ಹಾಲ್ಕುರಿಕೆ ಸೋಮೇಶ್ವರ ಪುರಾಣ ೮೨ ಸಂ.ಭಾಗೂತನಯನವಿಲು ಮಟ – ೮೫

ಅಟ್ಟಿದಳು. ಚಾರರು ಕೊದಲಿಬನದ ಹಾಲಹೇವಲಿ ಹಳ್ಳದ ದಂಡೆಯ ಮೇಲೆ ತೊಟ್ಟಿಲನ್ನು ಇಳುಹಿ ನೀರು ಕುಡಿಯಲು ಹೋದರು. ಶಿವಮಹಿಮೆಯಿಂದ ತೊಟ್ಟಿಲು ಮೇಲೆ ಹೋಗಿ ವಟವೃಕ್ಷದಲ್ಲಿ ಸುರಕ್ಷಿತವಾಗಿ ಕುಳಿತಿತು. ನೀರು ಕುಡಿದು ಹಿಂದಿರುಗಿದ ಚಾರರು ರಕ್ತಕಾರಿಕೊಂಡು ತೀರಿಕೊಂಡರು; ಶಿವ ಕರುಣೆಯಿಂದ ಕೂಸು ಉಳಿಯಿತು. ಪಾರ್ವತಿಯು ಕೂಸಿಗೆ ಶಿವಸಿದ್ಧಬೀರನೆಂದು ಹೆಸರಿಟ್ಟಳು.

ಶಿವನು ಲೋಕಸಂಚಾರ ಮಾಡುತ್ತ ಮಾರ್ಗಮಧ್ಯದಲ್ಲಿ ತೋರಿದ ವಟವೃಕ್ಷದ ಕೆಳಗೆ ಕುಳಿತುಕೊಳ್ಳುವ ಸ್ತ್ರೀಯರು ಗರ್ಭವತಿಯರಾಗಲೆಂದನು. ದೇವಾಂಗನೆ-ಯರೈವರು ಅರಿಯದೆ ಇದರ ಕೆಳಗೊಮ್ಮೆ ವಿಶ್ರಮಿಸಿಕೊಂಡಾಗ ಶಿವನೆಂದಂತೆ ಅವರೆಲ್ಲ ಗರ್ಭವತಿಯರಾದರು. ಗಾಬರಿಗೊಂಡ ಅವರು ಅಪವಾದಕ್ಕೆ ಹೆದರಿ ಗರ್ಭ ಭೇದಿಸಿಕೊಂಡು ತಮ್ಮ ಆ ಐದೂ ಕೂಸುಗಳನ್ನು ತೆಪ್ಪದ ಮೇಲೆ ಇಟ್ಟು ನದಿಯಲ್ಲಿ ತೇಲಿಬಿಟ್ಟರು. ಕೆಳಗೆ ಕುರಿಕಾಯುತ್ತ ನಿಂತಿದ್ದ ಚಾಮರಾಯ ಈ ಐದೂ ಕೂಸುಗಳನ್ನು ತಂದು ಮಕ್ಕಳಿಲ್ಲದೆ ಕಳವಳಿಸುತ್ತಿದ್ದ ಮಡದಿ ಶಾಂಭವಿಯ ಕೈಗಿತ್ತನು. ಅವುಗಳಿಗೆ ಲಕ್ಷ್ಮಮ್ಮ, ಮಾಯಮ್ಮ, ಮಂಕಮ್ಮ, ಮಾಕಾಳೆಮ್ಮ ಮತ್ತು ಅಕ್ಕಮ್ಮ ಎಂದು ಹೆಸರಿಟ್ಟು ಸಲುಹಿದರು. ಇವರು ಬೆಳೆದು ಒಂದು ದಿನ ಕುರಿಕಾಯುತ್ತ ಹಾಲಹೇವಲಿ ಹಳ್ಳಕ್ಕೆ ಬಂದರೆ ವಟವೃಕ್ಷದ ಮೇಲಿಂದ ಕೂಸಿನ ಅಳು ಕೇಳಿಸಿತು. ಅಕ್ಕ-ತಂಗಿಯರೆಲ್ಲ ತನಗೆ ಬೇಕು, ತನಗೆ ಬೇಕು ಎಂದು ಮಗುವಿಗೆ ಹಂಬಲಿಸಿದರೆ ಅಕ್ಕಮ್ಮ 'ಮರದಡಿಯಲ್ಲಿ ಉಡಿಯೊಡ್ಡಿ ನಿಲ್ಲೋಣ, ಯಾರ ಉಡಿಯಲ್ಲಿ ಅದು ಬೀಳುತ್ತದೋ ಅವರು ಸ್ವೀಕರಿಸಬೇಕು' ಎಂದು ಉಪಾಯ ಸೂಚಿಸಿದಳು. ಎಲ್ಲರೂ ಉಡಿಯೊಡ್ಡಿ ನಿಂತರೆ ಕೂಸು ಅಕ್ಕಮ್ಮನ ಉಡಿಯೆಲ್ಲಿಯೇ ಬಿದ್ದಿತು. ಅಕ್ಕಮ್ಮ ಶಿವಸಿದ್ಧಬೀರನ ಸಂರಕ್ಷಣೆಯ ಹೊಣೆಹೊತ್ತಳು.

ಜನಪದ ಹಾಲುಮತ ಮಹಾಕಾವ್ಯ :

ಕಾಳಿನಾರಾಯಣನು ಶಿವಭಕ್ತ. ದಿನಾಲು ಶಿವನಿಗೆ ಪೂಜೆ ಸಲ್ಲಿಸುತ್ತಿದ್ದನು. ಒಮ್ಮೆ ಜಂಬುದ್ವೀಪದಿಂದ ವಿಶೇಷ ಕಮಲ ತಂದು ಶಿವನನ್ನು ಪೂಜಿಸಿದನು. ಮರುದಿನ ಸೂರ್ಯೋದಯದ ಹೊತ್ತಿಗೆ ಶಿವನ ಬಲತೊಡೆಯ ಮೇಲಿದ್ದ ಕಮಲದ ಹೋವಿನಲ್ಲಿ ಕೂಸೊಂದು ಕಾಣಿಸಿಕೊಂಡಿತು. ಶಿವನು ಆ ಕೂಸಿನ ರಕ್ಷಣೆಯನ್ನು ಪಾರ್ವತಿಗೆ ಒಪ್ಪಿಸಿದನು. ಕೂಸಿಗೆ ಬಾಳಭರಮ ಎಂದು ಹೆಸರಿಟ್ಟರು. ಪಾರ್ವತಿದೇವಿಯ ಆರೈಕೆಯಿಂದ ಬೆಳೆದ ಬಾಳಭರಮನಿಗೆ ಕಾಳಿನಾರಾಯಣನ ತಂಗಿ ಸೂರಮ್ಮದೇವಿಯನ್ನು ಕೊಟ್ಟು ಮದುವೆಮಾಡಲಾಯಿತು. ಕಾಳಿನಾರಾಯಣನು ಈ ದಂಪತಿಗಳಿಗೆ ಚಂದನಗಿರಿಯನ್ನು ಕಾಣಿಕೆಯಾಗಿ ಕೊಡುತ್ತಾನೆ.

ಕಾಳಿನಾರಾಯಣನೊಮ್ಮೆ ಬಾಡಿದ ಹೂಗಳಿಂದ, ಬತ್ತಿದ ಗುಂಡದ ತಳದಲ್ಲಿಯ ನೀರಿನಿಂದ ಶಿವಪೂಜೆಯನ್ನು ಮಾಡಿದನು. ಈ ಪಾಪಪರಿಹಾರಕ್ಕಾಗಿ ಕಾಶಿಗೆ ಹೋಗಿಬರಬೇಕೆಂದು ಶಿವನು ಅಪ್ಪಣೆಯಿತ್ತನು. ಕಾಳಿನಾರಾಯಣನು ಅಳಿಯ ಭರಮದೇವನಿಗೆ ಶಿವಪೂಜೆಯನ್ನು ಒಪ್ಪಿಸಿ ತಾನು ಕಾಶಿಗೆ ಪ್ರಯಾಣ ಬೆಳೆಸಿದನು. ಭರಮದೇವನ ಪೂಜೆಯಿಂದ ಸಂತೃಪ್ತಗೊಂಡ ಶಿವನು 'ಇನ್ನು ಮುಂದೆ ಬೇರಾರಿಂದಲೂ ಬೇಡ, ನೀನೇ ಪೂಜಿಸು' ಎಂದನು.

ಕಾಶಿಯಿಂದ ಹಿಂದಿರುಗಿದ ಕಾಳಿನಾರಾಯಣ ಪೂಜಿಸಹೋದರೆ ಸೇವಕರು ಅವನನ್ನು ಒಳಗೆ ಬಿಡಲಿಲ್ಲ. ಒತ್ತಾಯದಿಂದ ಒಳಗೆ ಪ್ರವೇಶಿಸಿ ಶಿವನೆದುರು ನಿಂತು 'ಮಕ್ಕಳಾಗದವರಿಂದ ಪೂಜೆಯನ್ನು ಸ್ವೀಕರಿಸಬಾರದು' ಎಂದನು. ಅವನ ಮಾತನ್ನು ಒಪ್ಪಿಕೊಂಡ ಶಿವನು ಭರಮದೇವನನ್ನು ಪೂಜೆಯಿಂದ ಬಿಡಿಸಿದನು. ಇದರಿಂದ ನೊಂದ ಸೂರಮ್ಮದೇವಿ ನೇರವಾಗಿ ಶಿವನಲ್ಲಿಗೆ ಹೋಗಿ ಮಕ್ಕಳ ವರ ಬೇಡಿದಳು. ಸೂರಮ್ಮನ ಒತ್ತಾಯಕ್ಕೆ ಮಣಿದ ಶಿವನು ತನ್ನ ಬೆವರನ್ನು ಬಟ್ಟಲಲ್ಲಿ ಹಾಕಿ ಇದನ್ನು ಗಂಡ–ಹೆಂಡತಿ ಸೇವಿಸಿದರೆ ಮಗನು ಹುಟ್ಟುತ್ತಾನೆ ಎಂದು ಹೇಳಿದನು. ಹೀಗೆ ಹುಟ್ಟುವ ಅವನನ್ನು ೧೩ನೆಯ ದಿನಕ್ಕೆ ಅಡವಿಗೆ ' ಸಾಗಿಸಬೇಕೆಂದೂ ಸೂಚಿಸಿದನು. ಇದಕ್ಕೆ ಇಬ್ಬರೂ ಒಪ್ಪಿಕೊಂಡರು. ಸೂರಮ್ಮದೇವಿ ಮತ್ತು ಭರಮದೇವರಿಬ್ಬರೂ ಶಿವನ ಬೆವರನ್ನು ಕುಡಿದರು. ಸೂರಮ್ಮದೇವಿ ಗರ್ಭ ಧರಿಸಿದಳು.

ತಂಗಿ ಗರ್ಭವತಿಯಾದ ಸುದ್ದಿ ಕಾಳಿನಾರಾಯಣನಿಗೆ ತಲುಪಿತು. ತಂಗಿಗೆ ಹುಟ್ಟುವ ಮಗುವಿನಿಂದ ತನಗೆ ಕೇಡೆಂದು ಭವ್ಯಷ್ಯ ಜ್ಞಾನದಿಂದ ತಿಳಿದಿದ್ದ ಕಾಳಿನಾರಾಯಣ ಕೂಸನ್ನು ಕೊಲ್ಲಬೇಕೆಂದು ತಂಗಿಗೆ ವಿಷದ ಬುತ್ತಿ ಕಳಿಸುತ್ತಾನೆ. ಗರ್ಭಸ್ಥ ಶಿಶು ತಾಯಿಗೆ ಕನಸಿನಲ್ಲಿ ಈ ವಿಷಯ ತಿಳಿಸಿದ ಮೇಲೆ ಕಾಳಿನಾರಾಯಣನ ಹಂಚಿಕೆ ನಿಷ್ಫಲವಾಯಿತು. ಹುಟ್ಟುವ ಕೂಸನ್ನು ಕೂಡಲೇ ಕೊಲ್ಲಬೇಕೆಂದು ತನ್ನೂರಿನಿಂದ ಬಾಣಂತಿಯರನ್ನು ಕಾಳಿನಾರಾಯಣ ಕಳಿಸಿದರೆ ಅದೂ ನಿಷ್ಫಲವಾಯಿತು.

ಗಂಡು ಮಗುವಿನ ಜನನದಿಂದ ಭರಮದೇವ, ಸೂರಮ್ಮದೇವಿಯರಿಗೆ ಸಂತೋಷವಾಯಿತು. ಆದರೆ ಕಾಳಿನಾರಾಯಣನಿಗೆ ಈ ಸಂತೋಷವಿಲ್ಲ. ಅವನು ದೋಸಿಗನ ವೇಷದಲ್ಲಿ ಸೂರಮ್ಮದೇವಿಯಲ್ಲಿಗೆ ಬಂದು ಹುಡುಗನ ಭವಿಷ್ಯ ಚೆನ್ನಾಗಿಲ್ಲವೆಂದು ಸಾರುತ್ತಾನೆ. ಮತ್ತೆ ನಿಜವೇಷದಲ್ಲಿ ಬಂದು ಅದನ್ನೇ ಪುನರುಚ್ಚರಿಸುತ್ತಾನೆ :

ಏತಾರ ಅಮಾಸಿ ದಿವಸವ್ವ ಮೇಲಚತರಿ ದಿವಸವ್ವ
ಮೇಲ ಚತುರಿದಿವಸವ್ವ ಹುಟ್ಟಿದ ಕೂಸ ನೋಡವ್ವ
ಕಾಲಮುಂದಾಗಿ ಹುಟ್ಯಾನೆ ಕದನಕೆ ಮೊದಲಾದಾನ
ಕಂದನ ಕಾಲ ಕೀರ್ತಲೆ ಚಂದನ ಗಿರಿಯ ಆದಾವ .
ಚಂದನಗಿರಿಗೋಳ ಆದಾವೆ ಮಂದನಗಿರಿಗೋಳ ಬಿದ್ದಾವ
ತಾಯಿ ತಂದಿಗೆ ಹೀನವ್ವ ಬಂಧು ಬಳಗಕ ಹೀನವ್ವ
ರೈತರಾಣಿಗೆ ಹೀನವ್ವ ಗೌಡ ಕುಲಕರ್ಣಿಗ ಹೀನವ್ವ
ಗೌಡ ಕುಲಕರ್ಣಿಗ ಹೀನವ್ವ ಭೂಮಿ ಸೀಮಿಗ ಹೀನವ್ವ
ಗೌಡ ಕುಲಕರ್ಣಿಗ ಹೀನವ್ವ ಸ್ವಾದರ ಮಾವಗ ಹೀನವ್ವ
ಕೆಟ್ಟ ಕೂಸನಂದಿದ್ದ ಹುಟ್ಟಿದ ಯಾಳ್ಯಾ ನೋಡವ್ವ
ಹುಟ್ಟಿದ ಯಾಳ್ಯಾ ನೋಡವ್ವ ಚೊಲವದಲ್ಲೇಳು ಅಂದಾನ
ಹನ್ನೊಂದು ದಿನದ ಒಳಗೇನೆ ತೊಟ್ಟಿಲದೊಳಗ ಹಾಕವ್ವ
ಹನ್ನೆರಡು ದಿನದ ಒಳಗವ್ವ ಮನಿಯಾಗ ಇರಬೇಕಂದಾನ
ಹರಿಮೂರ ದಿನದ ಒಳಗವ್ವ ಬೆಟ್ಟದ ಪಾಲ ಮಾಡವ್ವ
ಬೆಟ್ಟದ ಪಾಲ ಮಾಡವ್ವ ಕೊದಲಿಗ ನಂದನ ಬನದಾಗ[೨]

ಕಾಳಿನಾರಾಯಣನ ಸೂಚನೆಯಂತೆ ಕೂಸನ್ನು ಅರಣ್ಯದಲ್ಲಿ ಬಿಟ್ಟು ಬರುವುದೆಂದು ತೀರ್ಮಾನವಾಯಿತು. ನಾಲ್ಕು ಜನ ಮಾಶಾಳ್ಕರು ಕೂಸನ್ನು ತೊಟ್ಟಿಲಲ್ಲಿ ಹಾಕಿಕೊಂಡು ಕೊದಲಿನಂದನ ಬನಕ್ಕೆ ಒಯ್ದು ಅಲ್ಲಿ ಕಂಚಿನ ಆಲದ ಮರಕ್ಕೆ ತೊಟ್ಟಿಲನ್ನು ಕಟ್ಟಿದರು. ಅವರು ಸೂರಮ್ಮದೇವಿ ಕಟ್ಟಕೊಟ್ಟ ಬುತ್ತಿಯ ಋಣಕ್ಕಾಗಿ ಕೂಸನ್ನು ಕೊಲ್ಲದೆ ಸತ್ತ ಕೂಸಿನ ಕೃತ್ರಿಮ ಆಕೃತಿಯೊಂದನ್ನು ಕಾಳಿನಾರಾಯಣನಿಗೆ ತೋರಿಸಿದರು. ಕಾಳಿನಾರಾಯಣ ಸಂತೋಷಪಟ್ಟನು.

ಮುಂದೆ ಕಥೆ ಬೇರೆ ಕಡೆಗೆ ಮುಖ ಮಾಡುತ್ತದೆ. ದೇವಗಿರಿಯ ದೇವಿಂದ್ರರಾಯ ಮತ್ತು ಅವನ ಮಡದಿ ಸುಭದ್ರಿಗೆ ಏಳು ಜನ ಹೆಣ್ಣು ಮಕ್ಕಳು. ಚಿಕ್ಕವಳಾದ ಮಾಯವ್ವ ಹುಟ್ಟಿದ ವೇಳೆ ಸರಿಯಾಗಿಲ್ಲವೆಂದು ಕೂಸನ್ನು ಬಂಗಾರಪೆಟ್ಟಿಗೆಯಲ್ಲಿರಿಸಿ ತೆಪ್ಪದಲ್ಲಿಟ್ಟು ಹೊಳೆಯಲ್ಲಿ ತೇಲಿಬಿಟ್ಟರು. ಅದು ಸಾಧುಗಳಿಗೆ ದೊರೆತು ಕೂಸನ್ನು ಕುರಿಕಾಯುತ್ತ ಬಂದು ಏಳು ಜನ ಹೆಣ್ಣು ಮಕ್ಕಳಿಗೆ ಒಪ್ಪಿಸಿದರು. ಅವರ ತಂದೆ ದಿಬ್ಬರಾಯ ಮತ್ತು ತಾಯಿ ಶಾಂಭಾಯಿಯರು ದೊರೆತ ಕೂಸಿಗೆ ಮಾಯವ್ವನೆಂದು ಹೆಸರಿಟ್ಟರು. ಮಾಯವ್ವ ಬೆಳೆದು ದೊಡ್ಡವಳಾದ ಮೇಲೆ ದಿಬ್ಬರಾಯನ ಕುರಿಗಳನ್ನು ತಾನೇ ಕಾಯುತ್ತ ಕಾಡರುದ್ದರ ಭೂಮಿಯತ್ತ ಬಂದಳು. ಇದೇ ವೇಳೆಗೆ ತಂಗಿಯನ್ನು ಹುಡುಕುತ್ತ ದೇವಿಂದ್ರನ ಆರೂ ಜನ ಹೆಣ್ಣು ಮಕ್ಕಳು ಕೈಲಾಸದಿಂದ ಬರುತ್ತಾರೆ. ಕಾಡರುದ್ದರ

೨. ಜನಪದ ಹಾಲುಮತ ಮಹಾಕಾವ್ಯ ಸಂ.ಡಾ.ವೀರಣ್ಣವಂಡೆ ಪುಟ-೧೭೨

ಭೂಮಿಯಲ್ಲಿ ತಂಗಿ ದೊರೆತಮೇಲೆ ಹಿರಿಯವಳಾದ ಅಕ್ಕಮ್ಮ ತಂಗಿಯೊಂದಿಗೇ ನಿಲ್ಲುತ್ತಾಳೆ; ಉಳಿದೈವರು ಕೈಲಾಸಕ್ಕೆ ಹೋಗುತ್ತಾರೆ. ಮಾಯವ್ವ ದಿಬ್ಬರಾಯನಿಂದ ತಾನು ಅವರಿಗೆ ಸಾಕುಮಗಳೆಂಬುದನ್ನು ಖಚಿತಪಡಿಸಿಕೊಂಡಳು. ದಿಬ್ಬರಾಯ ಮಾಯಮ್ಮ, ಅಕ್ಕಮ್ಮರಿಬ್ಬರಿಗೂ ತಲಾ ಮೂವತ್ತೈದು ಕುರಿಗಳನ್ನು ಹಂಚಿಕೊಟ್ಟು ಚಂದ್ರಗಿರಿಯಲ್ಲಿರಲು ಹೇಳುತ್ತಾನೆ.

ಒಂದು ದಿನ ಇವರು ಕುರಿ ಕಾಯುತ್ತಾ ಕಾಡರುದ್ದರ ಭೂಮಿಯಲ್ಲಿದ್ದಾಗ ಕಂಚಿನಾಲದ ಮರದ ಮೇಲಿಂದ ಕೂಸಿನ ಅಳು ಕೇಳುತ್ತದೆ. ಮರದ ಮೇಲೆ ತೊಟ್ಟಿಲಲ್ಲಿದ್ದ ಆ ಕೂಸನ್ನು ಬಯಸಿ ತೊಟ್ಟಿಲನ್ನು ಇಳುವಿಕೊಳ್ಳಲು ಅಕ್ಕಮ್ಮ ಮೊದಲ ಪ್ರಯತ್ನ ಪಡುತ್ತಾಳೆ; ಅದು ಸಾಧ್ಯವಾಗದಾದಾಗ ಮಾಯವ್ವ ಗಿಡವನ್ನೇರುವಲ್ಲಿ ಯಶಸ್ಸು ಸಾಧಿಸಿ ಕೂಸನ್ನು ಪಡೆಯುತ್ತಾಳೆ. ಕೂಸು ತನಗೆ ಬೇಕು ತನಗೆ ಬೇಕು ಎಂದು ಇಬ್ಬರೂ ಜಗಳವಾಡತೊಡಗಿದರು. ಅದೇ ವೇಳೆಗೆ ಅಲ್ಲಿಗೆ ಬಂದ ಎಳ್ಳಗುಂಪಿ ರಾಯಣ್ಣನೆಂಬವನು ' ಇಬ್ಬರೂ ತೊಟ್ಟಿಲನ್ನು ಸುತ್ತುಹಾಕಿರಿ. ಆಗ ಯಾರ ಎದಿಬದಿಗಳು ಚಿಗಿಯುವವೋ ಅವರಿಗೆ ಆ ಕೂಸು' ಎನ್ನುತ್ತಾನೆ. ಈಗಲೂ ಮಾಯವ್ವನೇ ಜಯಗಳಿಸಿ ಕೂಸನ್ನು ಪಡೆದಳು. ಮಾಯವ್ವ ಅವನಿಗೆ 'ಲಿಂಗಬೀರಣ್ಣ' ಎಂದು ಹೆಸರಿಟ್ಟಳು. ಮಾಯವ್ವನ ಆರೈಕೆಯಲ್ಲಿ ಬೀರಪ್ಪ ಬೆಳೆಯತೊಡಗುತ್ತಾನೆ. 'ಜನಕ ತಮ್ಮನ ಮಾಡಿ ಮನಕ ಮಗನ ಮಾಡಿ' ಅವಳು ಸಲುಹಿದಳು.

ಇದುವರೆಗೆ ಪ್ರತ್ಯೇಕವಾಗಿ ನೋಡಿದ ಈ ಎರಡೂ ಕಾವ್ಯಗಳಲ್ಲಿನ ಬೀರದೇವರ ಜನನದ ಪ್ರಮುಖ ವಿಷಯಗಳನ್ನು ಮೊದಲು ಕ್ರೋಢಿಕರಿಸಿ ತರುವಾಯ ಕೆಲವು ನಿರ್ಣಯಗಳಿಗೆ ಬರಬಹುದೆಂದು ತೋರುತ್ತದೆ.

೧. ಜನಪದ ಹಾಲುಮತ ಮಹಾಕಾವ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ ಭರಮದೇವನು ಶಿವನ ಬಲತೊಡೆಯ ಕಮಲದಲ್ಲಿ ತೋರುತ್ತಾನೆ.

೨. ಎರಡೂ ಕಾವ್ಯಗಳಲ್ಲಿ ಬೀರದೇವನು ಶಿವನ ಅನುಗ್ರಹದಿಂದ ಹುಟ್ಟಿದವನು ಎಂಬ ಮಾತು ಸ್ಪಷ್ಟವಿದೆ. ಹಾಲ್ಮತೋತ್ತೇಜಕ ಪುರಾಣದಲ್ಲಿ ಮಕ್ಕಳಿಲ್ಲದ ಸುರಾವತಿಯ ಮೇಲೆ ಕರುಣೆಗೊಂಡು ಅವಳಿಗೆ ಮಗುವಾಗುವಂತೆ ಆಶೀರ್ವದಿಸುತ್ತಾನೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಭರಮದೇವ ಮತ್ತು ಸೂರಮ್ಮದೇವಿಯರು ಶಿವನ ಬೆವರನ್ನು ಸೇವಿಸಿ ಮಗುವನ್ನು ಪಡೆದರು ಎಂದಿದೆ.

೩. ಹಾಲ್ಮತೋತ್ತೇಜಕ ಪುರಾಣದಲ್ಲಿ ಬೀರಪ್ಪನ ತಂದೆ ತಾಯಿ ಭರಮದೇವ ಮತ್ತು ಸುರಾವತಿ ಎಂದಿದ್ದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ ಅವರು

ಭರಮದೇವ ಮತ್ತು ಸೂರಮ್ಮದೇವಿ ಎಂದಿದೆ.

೪. ಹಾಲ್ಮತೋತ್ತೇಜಕ ಪುರಾಣದಲ್ಲಿ ಸುರವತಿಯ ಅಣ್ಣನು ಹರಿ ಅಥವಾ ಕೃಷ್ಣನಾಗಿದ್ದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ ಅವನು ಕಾಳಿನಾರಾಯಣ–ನೆನಿಸಿದ್ದಾನೆ.

೫. ಹಾಲ್ಮತೋತ್ತೇಜಕದಲ್ಲಿ ಬೀರದೇವನನ್ನು ಸಂರಕ್ಷಿಸಿದವಳು ಅಕ್ಕಮ್ಮನಾಗಿದ್ದರೆ ಹಾಲುಮತ ಮಹಾಕಾವ್ಯದಲ್ಲಿ ಮಾಯಮ್ಮನಾಗಿದ್ದಾಳೆ.

ಬೀರದೇವನ ಹುಟ್ಟಿನ ಸಂಬಂಧದಲ್ಲಿ ಇದುವರೆಗೆ ಶಿವ ಮತ್ತು ವಿಷ್ಣುವಿನ ಉಲ್ಲೇಖ ಸ್ಪಷ್ಟವಾಗಿಯೇ ಇದೆ; ಶಿವನ ಕರುಣೆಯಿಂದ ಬೀರಪ್ಪ ಹುಟ್ಟುತಾನೆ, ಬೀರಪ್ಪನ ಸೋದರಮಾವ ಕೃಷ್ಣ ಅಥವಾ (ಕಾಳಿ) ನಾರಾಯಣ. ಆದರೆ ಈ ಭರಮದೇವ ಸುರಾವತಿಯರು ಯಾರು ? ಇವರು ಪೌರಾಣಿಕ ವ್ಯಕ್ತಿಗಳೇ ? ಅಥವಾ ಚಾರಿತ್ರಿಕ ವ್ಯಕ್ತಿಗಳಾಗಿದ್ದು ಪುರಾಣ ಕಥೆಯೊಂದಿಗೆ ತಳಕುಹಾಕಿಕೊಂಡಿದ್ದಾರೆಯೇ ? ಈ ನಿಟ್ಟಿನಲ್ಲಿ ಇದುವರೆಗೆ ಯಾರು ಯೋಚಿಸಿದಂತಿಲ್ಲ. ಈ ವಿಷಯ ಸ್ಪಷ್ಟತೆಗೆ ನಮಗೆ ನೆರವಾಗಬಲ್ಲ ಎರಡು ಆಕರಗಳೆಂದರೆ ಈ ಹಿಂದೆ ವಿವರಿಸಿದೆ ಜನಪದ ಹಾಲುಮತ ಮಹಾಕಾವ್ಯ ಮತ್ತು ಗೋವಿಂದಮೂರ್ತಿ ದೇಸಾಯಿಯವರ ಒಂದು ಲೇಖನ.

ಬ್ರಹ್ಮನು ವಿಷ್ಣುವಿನ ನಾಭಿಕಮಲದಲ್ಲಿ ಹುಟ್ಟಿದವನು ಎಂಬುದು ಪ್ರಸಿದ್ಧ ಹೇಳಿಕೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಭರಮದೇವನು ಶಿವನ ಬಲತೊಡೆಯಲ್ಲಿದ್ದ ಕಮಲದಲ್ಲಿ ಕಾಣಿಸಿಕೊಂಡನು ಎಂದಿದೆ. ಬ್ರಹ್ಮ ಮತ್ತು ಭರಮದೇವರಿಬ್ಬರೂ ಕಮಲದಲ್ಲಿ ಹುಟ್ಟಿರುವುದು ಮತ್ತು ಆ ಎರಡೂ ಹೆಸರಿನ ಉಚ್ಚಾರಣೆಯಲ್ಲಿರುವ ಸ್ವರಸಾಮ್ಯತೆ ಅವರಿಬ್ಬರನ್ನೂ ಅಭಿನ್ನರನ್ನಾಗಿಸುತ್ತದೆ. (ಬ್ರಹ್ಮದೇವ = ಭರಮದೇವ, ಬ್ರಹ್ಮ = ಭರಮ). ಮುಂದಿನ ಹಂತದಲ್ಲಿ ಅದೇ ಉಚ್ಚಾರ ಸಹಚರಣೆಯಿಂದ ಬ್ರಹ್ಮನ ಹೆಂಡತಿ ಸರಸ್ವತಿಯೇ ಭರಮನ ಹೆಂಡತಿ ಸುರಾವತಿ ಅಥವಾ ಸೂರಮ್ಮದೇವಿಯಾಗಿದ್ದಾಳೆ. (ಸರಸ್ವತಿ = ಸುರಾವತಿ ಸರಸ್ವತಮ್ಮದೇವಿ = ಸೂರಮ್ಮದೇವಿ). ಈ ಎಲ್ಲ ವಿವರಣೆಗಳಿಂದ ಬ್ರಹ್ಮ–ಸರಸ್ವತಿಯರೇ ಬೀರಪ್ಪನ ತಂದೆ ತಾಯಿಗಳೆಂಬುದು ಸ್ಪಷ್ಟಗೊಳ್ಳುತ್ತದೆ.

ಈ ತೀರ್ಮಾನಕ್ಕೆ ಪೂರಕ ಅಂಶಗಳು ಗೋವಿಂದಮೂರ್ತಿ ದೇಸಾಯಿಯವರ ಲೇಖನದಲ್ಲಿ ದೊರೆಯುತ್ತವೆ. "ಇನ್ನೊಂದು ಪುರಾಣ ಕಥೆಯಂತೆ ನರಸಿಂಹನ ಉಗ್ರರೂಪವನ್ನು ತಾಳಲಾರದ ಕೆಲ ಶಿವಭಕ್ತರು ಶಿವನಿಗೆ ದೂರನ್ನಿತ್ತಾಗ ಶಿವನು ವೀರಭದ್ರನಿಂದ ಅವನ ತಲೆ ಕತ್ತರಿಸಿ ತಂದು ತನ್ನ ಕೊರಳಲ್ಲಿ ಧರಿಸಿದನು. ನಂತರ ವೀರಭದ್ರನು ಶಿವನಿಂದ ವರ ಪಡೆದು ಭೂಲೋಕದಲ್ಲಿ ಹುಟ್ಟಲು ಬ್ರಹ್ಮನ ಹೆಂಡತಿ

ಸರಸ್ವತಿಯ ಹೊಟ್ಟೆಯನ್ನು ಸೇರಿದನು. ವಿಷ್ಣುವು, ಸರಸ್ವತಿ ಬಸಿರಿರುವಾಗ ವೃದ್ಧ ಬ್ರಾಹ್ಮಣನ ರೂಪದಲ್ಲಿ ಅವಳನ್ನು ಭೇಟಿಯಾಗಿ ಅವಳಿಗೆ ಹುಟ್ಟಲಿರುವ ಕೂಸನ್ನು ಮುಖ ನೋಡದೇ ಅಡವಿಯಲ್ಲಿ ಬೆಲ್ಲಿಬಿಡು ಎಂದು ಉಪದೇಶಿಸಿದನಂತೆ. ಹೀಗೆ ಸ್ಮಶಾನದಲ್ಲಿ ಒಗೆಯಲ್ಪಟ್ಟ ಕೂಸನ್ನು ಮಾಯವ್ವ ಅಥವಾ ಮಾಯಕ್ಕನು (ವನದೇವತೆ) ಎತ್ತಿಕೊಂಡು 'ವೀರಲಿಂಗ'ನೆಂಬ ಹೆಸರನ್ನಿಟ್ಟು ಬೆಳೆಸಿದಳು.[೩]

ಈ ಪೂರ್ವದಲ್ಲಿ ಹೇಳಿದಂತೆ ಬೀರಪ್ಪನ ತಂದೆ–ತಾಯಿಗಳಾದ ಭರಮದೇವ, ಸುರಾವತಿಯರು ಬ್ರಹ್ಮ ಮತ್ತು ಸರಸ್ವತಿಯರೇ ಎಂಬುದು ಮೇಲಿನ ಉಲ್ಲೇಖದಲ್ಲಿ ಇನ್ನೂ ಸ್ಪಷ್ಟಗೊಳ್ಳುತ್ತದೆ. ಭರಮದೇವ ಮತ್ತು ಸುರಾವತಿಯರಿಗೆ ಬೀರದೇವ ಮಗನಾಗಿ ಹುಟ್ಟುವುದು ಜನಪದ ಹೇಳಿಕೆಯಾದರೆ ವೀರಭದ್ರನು ಬ್ರಹ್ಮನ ಹೆಂಡತಿ–ಸರಸ್ವತಿಯ ಗರ್ಭವನ್ನು ಸೇರುವುದು ಶಿಷ್ಟಪರ ಹೇಳಿಕೆ. ನಾಮ ಸಾದೃಶ್ಯದಿಂದ ಒಂದೇ ಆಗಿರುವ ಈ ಸತ್ಯ ಬೀರದೇವ ಮತ್ತು ವೀರಭದ್ರರ ಸಮೀಕರಣವನ್ನೂ ಖಚಿತಪಡಿಸುತ್ತದೆ. ಬೀರದೇವ ಹಾಗೂ ವೀರಭದ್ರರ ವಿಷಯದಲ್ಲಿ ಇದುವರೆಗೆ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಹಾಗೂ ಗೋವಿಂದಮೂರ್ತಿ ದೇಸಾಯಿಯಂಥವರು ಮಾಡಿದ ತರ್ಕ, ಚರ್ಚೆಗಳಿಗೂ ಇಲ್ಲಿ ಸಮರ್ಥನೆಯಿದೆ.

ಹಾಲ್ಮತೋತ್ತೇಜಕ ಪುರಾಣದಲ್ಲಿ ಬೀರದೇವನನ್ನು ಸಾಕಿದವಳು ಅಕ್ಕಮ್ಮ ಎಂದಿದೆ. ಆದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ, ಈ ವಿಷಯಕವಾಗಿ ಗೋವಿಂದಮೂರ್ತಿ ದೇಸಾಯಿಯವರು ಮಾಡಿರುವ ಪ್ರಸ್ತಾಪದಲ್ಲಿ, ಇವೆಲ್ಲಕ್ಕಿಂತ ಹೆಚ್ಚಾಗಿ ಜನಪದರು ಹೇಳಿಕೊಂಡು ಬಂದಿರುವ ಮಾತು ನಂಬಿಕೆಗಳಲ್ಲಿ ಮಾಯವ್ವನೇ ಬೀರದೇವನನ್ನು 'ಅಕ್ಕ'ನಾಗಿ ಸಾಕಿದಳು ಎಂದಿರುವುದರಿಂದ ಅದನ್ನೇ ನಾವು ಸ್ವೀಕರಿಸಬೇಕಾಗುತ್ತದೆ.

೨೦೦೨ ಹಾಲಕೆನೆ ಪ್ರಸಂ.ಡಾ.ಶ್ರೀರಾಮ ಇಟ್ಟಣ್ಣವರ

---

೩. . ಹಂಪೆಯ ವಿರೂಪಾಕ್ಷ ಬೀರದೇವರೇ (ಲೇಖನ) ಸಂಯುಕ್ತ ಕರ್ನಾಟಕ ೩೦–೫–೧೯೮೩.

ಡೊಳ್ಳಿನ ಹಾಡು

ಕನ್ನಡ ಜಾನಪದ ಗೀತ ಸಾಹಿತ್ಯದ ಒಂದು ಪ್ರಕಾರವಾಗಿ ಡೊಳ್ಳಿನ ಹಾಡುಗಳು ಗುರುತಿಸಲ್ಪಡುತ್ತವೆ. ಡೊಳ್ಳಿನ ಹಾಡಿನ ಸಂಪ್ರದಾಯ ಕರ್ನಾಟಕದ ಬಹುಸಂಖ್ಯಾತ ಕುರುಬ ಜನಾಂಗಕ್ಕೆ ಸಂಬಂಧಿಸಿದ್ದು. ಈ ಹಾಡುಗಳು ಕುರುಬ ಜನಾಂಗದ ದೇವರು, ನಂಬಿಕೆ, ಸಂಪ್ರದಾಯಗಳನ್ನು ಕುರಿತಂತಿವೆ. ಈ ಜನಾಂಗದವರ ಕಲೆಯಾಗಿ ಡೊಳ್ಳುಕುಣಿತ, ದಟ್ಟಿ ಕುಣಿತ ಮುಂತಾಗಿ ಬೇರೆ ಕಲಾಪ್ರಕಾರಗಳಿದ್ದರೂ ಅಗ್ರಸ್ಥಾನ ಸಲ್ಲುವುದು ಇವರ ಡೊಳ್ಳಿನ ಹಾಡಿನ ಮೇಳಗಳಿಗೆ. ಡೊಳ್ಳಿನ ಹಾಡುಗಳ ಅಭ್ಯಾಸಕ್ಕೆ ಪೂರಕವಾಗಿ ನಾವು ಮೊದಲು ಕುರುಬ ಜನಾಂಗದ ಪ್ರಾಚೀನತೆ ಪರಂಪರೆಯನ್ನು ಗುರುತಿಸಬೇಕಾಗುತ್ತದೆ.

ದಕ್ಷಿಣ ಹಿಂದುಸ್ತಾನದ ತುಂಬ ವ್ಯಾಪಿಸಿರುವ ಕುರುಬರು ಉತ್ತರ ಭಾರತದಲ್ಲಿ ಗಡಾರಿಯಾ, ಮಧ್ಯಪ್ರದೇಶದಲ್ಲಿ ಹಟಗಾರರು, ಮಹಾರಾಷ್ಟ್ರದಲ್ಲಿ ಧನಗರರು ಎಂದು ಕರೆಯಲ್ಪಡುತ್ತಾರೆ.

ಕರ್ನಾಟಕದ ತುಂಬ ವ್ಯಾಪಕವಾಗಿ ಹರಡಿಕೊಂಡಿರುವ ಕುರುಬರು ಕಾಡು ಕುರುಬರು, ಜೇನುಕುರುಬರು, ಹಂಡೆ ಕುರುಬರು, ಹತ್ತಿಕಂಕಣದವರು, ಉಣ್ಣಿಕಂಕಣದವರು ಎಂದು ಮುಂತಾಗಿ ಟಿಸಿಲೊಡೆಯುತ್ತಾರೆ. "(ಮುಂಬೈ ಕರ್ನಾಟಕದ) ನಾಲ್ಕು ಜಿಲ್ಲೆಗಳಲ್ಲಿ ಇವರಷ್ಟು (ಕುರುಬರು) ವಸ್ತಿಯು ಬರೆ ಯಾವ ಜಾತಿಯವರದೂ ಇಲ್ಲ. ಇವರು ಈ ಶೀಮೆಯ ಮೂಲನಿವಾಸಿಗಳೆಂದೆಣಿಸಲ್ಪಡುತ್ತಾರೆ".[೧]

"ಈ ಜನಾಂಗವು ಕುರಿಗಳನ್ನು ಸಾಕುತ್ತಿದ್ದಿತೆಂದು ಇವರಿಗೆ ಕುರುಬರೆಂಬ ಹೆಸರು... ಎಂದು ಈಗಿನ ಸಾಮಾನ್ಯವಾದ ಗ್ರಹಿಕೆ. 'ಕುರು' ಎಂದರೆ 'ಎತ್ತರ'ವೆಂಬ ಒಂದು ಅರ್ಥವಿದೆ. ಅದಕ್ಕನುಸರಿಸಿ 'ಕುರುಬ'ನೆಂದರೆ ಎತ್ತರದ ನಾಡಿನಲ್ಲಿ, ಗುಡ್ಡ ಬೆಟ್ಟಗಳಲ್ಲಿ ಇರುವವನೆಂದೂ ಅರ್ಥವಾಗುತ್ತದೆ. ಕುರುಬರಿಗೆ ಮೊದಲು ತಮ್ಮ ಉಪಜೀವನಕ್ಕಾಗಿ ಗುಡ್ಡ-ಬೆಟ್ಟಗಳ ಹುಲ್ಲಿನ ಪ್ರದೇಶಗಳನ್ನು ಹುಡುಕಿಕೊಂಡು ಬದುಕಬೇಕಾಗಿದ್ದಿತೆಂಬುದನ್ನು ನೆನೆದುಕೊಂಡರೆ ಈ ಅರ್ಥವು ಅಸಂಭವನೀಯವೆಂದು ಹೇಳಲಿಕ್ಕಾಗುವುದಿಲ್ಲ".[೨] ಎನ್ನುವ ಶಂ. ಬಾ. ಜೋಶಿಯವರು ತಮಿಳಿನ ಪ್ರಾಚೀನ

---

೧. ಮುಂಬಯಿ ಕರ್ನಾಟಕ ಗ್ಯಾಝೆಟಿಯರ್(೧೯೮೪) ಪುಟ: ೧೬೯

೨. ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಪುಟ:೧೭

'ಶಿಲಪ್ಪಾದಿಗಾರಂ' ಕಾವ್ಯದಲ್ಲಿ ಉಲ್ಲೇಖಿಸಲ್ಪಟ್ಟ ಅಂಡರ್, ಕುರುಂಬರ್ ಎಂಬ ಶಬ್ದಗಳ ಬೆನ್ನು ಹಿಡಿದು ಕುರುಬ ಜನಾಂಗದ ಅಸ್ತಿತ್ವವನ್ನು ಎರಡನೆಯ ಶತಮಾನಕ್ಕೆ ಒಯ್ಯುತ್ತಾರೆ.[೩]

ಈ ಜನಾಂಗದ ಪ್ರಾಚೀನತೆಯನ್ನು ಗುರುತಿಸುವುದರೊಂದಿಗೇ ಡೊಳ್ಳಿನ ಹಾಡುಗಳ ಪ್ರಾಚೀನತೆ ತಳಕು ಹಾಕಿಕೊಳ್ಳುತ್ತದೆ. ಕ್ರಿಸ್ತಶಕದ ಪ್ರಾರಂಭದಿಂದಲೂ ಈ ಸಾಹಿತ್ಯ ಪ್ರಕಾರವೊಂದಿತ್ತು ಎನ್ನಲು ಗಟ್ಟಿಯಾದ ಆಧಾರಗಳು ನಮಗೆ ಬೇಕು. ಬೀರಪ್ಪ, ಮಾಳಿಂಗರಾಯ, ಮಾಯವ್ವ, ಅಮೋಗಸಿದ್ಧ– ಈ ಮುಂತಾದವರು ಹಾಲುಮತದವರ ದೇವರೆಂದು ಪೂಜಿಸಲ್ಪಡುತ್ತಿದ್ದು ಡೊಳ್ಳಿನ ಹಾಡುಗಳು ಆ ದೇವರನ್ನು ಕೀರ್ತಿಸುತ್ತವೆ. ಆದರೆ ಈ ದೇವರನ್ನು ಕುರಿತಂತೆ ಪ್ರಾಚೀನ ಕಾವ್ಯಗಳಾಗಲೀ ಪುರಾಣಗಳಾಗಲೀ ನಮಗೆ ಇಂದು ಉಪಲಬ್ಧವಿಲ್ಲ. ಡೊಳ್ಳಿನ ಹಾಡುಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ ಈ ಕೊರತೆ ಎದ್ದು ಕಾಣುತ್ತದೆ.

ಕುಲದೇವರು :

ಪರಂಪರಾಂಗತ ನಂಬುಗೆಯಂತೆ ಬೀರಪ್ಪ ಈ ಮತದ ಮುಖ್ಯ ದೇವರು. ರೇವಣ್ಣಸಿದ್ಧರು ಬೀರಪ್ಪನ ಗುರು, ಮಾಳಿಂಗರಾಯ ಬೀರಪ್ಪನ ಶಿಷ್ಯ. ಮಾಯವ್ವ ಬೀರದೇವರನ್ನು ಸಲುಹಿದವಳು. ಅಮೋಗಸಿದ್ಧನಿಗೂ ಬೀರದೇವರಿಗೂ ಯಾವ ಸಂಬಂಧವೂ ಇಲ್ಲ.

ಬೀರೇಶನು ವೈಕುಂಠಪುರದರಸು ಹರಿದೇವರ ಸೋದರಳಿಯ, ತಂಗಿ ಸುರಾವತಿಯ ಮಗ. ಭರಮದೇವರು ಬೀರಪ್ಪನ ತಂದೆ. ಬೀರೇಶ ತನಗೆ ಕಂಟಕ ಪ್ರಾಯನಾಗುತ್ತಾನೆ ಎಂಬ ಭವಿಷ್ಯತ್ತಿನ ವಿಷಯವರಿತ ಹರಿದೇವ ಅವನು ಹುಟ್ಟುತ್ತಲೇ ಕೊಲ್ಲುವ ಯೋಚನೆ ಮಾಡುತ್ತಾನೆ. ಕೂಸನ್ನು ಕೊಲ್ಲಲು ಚಾಂಡಾಲರನ್ನು ಕಳಿಸಿದರೆ ಅವರಿಗದು ಆಗಲಿಲ್ಲ. ಬದುಕುಳಿದ ಕೂಸು ಮಾಯವ್ವನ ಉಡಿ ಸೇರುತ್ತದೆ. ಮಾಯವ್ವನ ಆಶ್ರಯದಲ್ಲಿಯೇ ಬೆಳೆಯುತ್ತಿದ್ದ ಬೀರೇಶನಿಗೆ ಶ್ರೀ ರೇವಣಸಿದ್ಧೇಶ್ವರರು ಲಿಂಗವನ್ನು ಅನುಗ್ರಹಿಸಿ ಮಂತ್ರೋಪದೇಶ ಮಾಡಿದರು. ಬೆಳೆದು ದೊಡ್ಡವನಾದ ಬೀರಪ್ಪ ಕನ್ನಿಕಾಮಾಲೆಯನ್ನು ಮದುವೆಯಾದದ್ದು, ಶಿವನಿಂದ ಶಿಷ್ಯ ಮಾಳಿಗರಾಯನನ್ನು ಬೇಡಿ ಪಡೆದದ್ದು ಪ್ರಮುಖ ಅಂಶಗಳು.

ಕೊಣ್ಣೂರಲ್ಲಿ ಕೋಣಾಸುರನ ವಧೆ, ಹಾಲಬಾವಿಯಲ್ಲಿ ಹೆಂಡದ ದೇವಮ್ಮನ ಉದ್ಧಾರ, ಹೂನೂರಿನ ಭೋಜೇಂದ್ರ ಭೂಪಾಲನ ಸತ್ತ ಮಗನನ್ನು ಎಬ್ಬಿಸಿದ್ದು, ಭೂತಾಳ ಸಿದ್ಧೇಂದ್ರನ ಸತ್ತ ಮಗನನ್ನು ಎಬ್ಬಿಸಿದ್ದು ಇವು ಬೀರದೇವರಿಗೆ ಸಂಬಂಧಪಟ್ಟ

---

೩. ಅದೇ ಪುಟ–೩೮.

ಕೆಲವು ಅಲೌಕಿಕ ಘಟನೆಗಳು. ಈ ಶಿವಸಿದ್ಧ ಬೀರ ತನ್ನ ಹಿಂದಣ ಜನ್ಮದಲ್ಲಿ ಶಿವಪದ್ಮನೆನಿಸಿಕೊಂಡು ಕುರಿಕಾಯ್ದ ಕಥೆ ತುಂಬ ಕುತೂಹಲಕಾರಿಯಾದುದು.

ಕಲ್ಯಾಣದಲ್ಲಿ ಬೀರೇಶನ ಶಿಷ್ಯ ವೀರಮಾಳಿಂಗ ಸತ್ತ ಗೂಳಿಯನ್ನು ಬದುಕಿಸಿದ್ದು, ಕೊಣ್ಣೂರಲ್ಲಿ ಅಗ್ನಿಕುಂಡದಲ್ಲಿ ಜಿಗಿದು ಅಗ್ನಿಯನ್ನು ನಂದಿಸಿದ್ದು ಇವು ವೀರಮಾಳಿಂಗನ ಬದುಕಿನಲ್ಲಿ ನಡೆದ ಪವಾಡಗಳು.

ಈ ಗುರು-ಶಿಷ್ಯರಿಗೆ ಸಂಬಂಧಪಟ್ಟ ಘಟನಾವಳಿಗಳಲ್ಲಿ ಪುರಾಣ-ಇತಿಹಾಸಗಳೆರಡೂ ಮಿಳಿತಗೊಂಡಿವೆ. ಇವುಗಳನ್ನು ಬೇರ್ಪಡಿಸಿ ಸತ್ಯವನ್ನು ಬಯಲಿಗೆಳೆಯುವ ಕಾರ್ಯ ನಡೆಯಬೇಕಾಗಿದೆ.

ಅಮೋಗಸಿದ್ಧ ಇಂದಿನ ಹಾಲುಮತಕ್ಕೆ ಗುರುಗಳಾಗಿರುವ ಒಡೆಯರ ಸಂತತಿಯ ಮೂಲಪುರುಷ.[೪] ಅಮೋಗಸಿದ್ಧ ಸೋಮಲಿಂಗೇಶ್ವರನ ಶಿಷ್ಯ. ಸೃಷ್ಟಿ ತಯಾರಿಸಲು ಗುರುವನ್ನು ಕೈಲಾಸದಿಂದ ಕರೆತರುತಿದ್ದ ಅಮೋಗಸಿದ್ಧ ಗುರುವನ್ನು ಹಿಂದಿರುಗಿ ನೋಡಿದ ಅಪರಾಧ ಮಾಡಿದ. ಸೋಮಲಿಂಗೇಶ್ವರ ಮೊಮ್ಮಟ ಗುಡ್ಡದಲ್ಲಿ ಮಾಯವಾದ. ಅಮೋಗಸಿದ್ಧ ಅಲ್ಲಿಯೇ ನಿಂತ. ಅಮೋಗಸಿದ್ಧ ಮದುವೆಯಾದದ್ದು ಅರಕೇರಿಯ ಪದ್ಮಾವತಿಯನ್ನು ಭೂತಾಳ ಸಿದ್ಧ ಅಮೋಗಸಿದ್ಧನ ಶಿಷ್ಯ. ಅಮೋಗಸಿದ್ಧ ಮತ್ತು ಪದ್ಮಾವತಿಯರ ಮಕ್ಕಳು: ಅವದೂಕಸಿದ್ಧ, ಬಿಳೇನಸಿದ್ಧ, ಸೋಮಣ್ಣ ಮುತ್ಯಾ, ಕಂದ ಮುತ್ಯಾ-ಗಂಡುಮಕ್ಕಳು; ರೆಬ್ಬೆವ್ವ ಹೆಣ್ಣುಮಗಳು. ಈ ಐದು ಮಂದಿಯಿಂದ ಮುಂದೆ ಬೆಳೆದ ಸಂತತಿಯೇ ಈಗಿನ ಒಡೆಯರು.

ರೇವಣಸಿದ್ಧ, ಬೀರದೇವರು, ಅಮೋಗಸಿದ್ಧ, ಮಾಳಿಂಗರಾಯ, ಮಾಯವ್ವ ಇವರನ್ನು ಕುರಿತ ಡೊಳ್ಳಿನ ಹಾಡುಗಳು ಸಾಹಿತ್ಯ-ಭಕ್ತಿ ಎರಡನ್ನೂ ಸ್ಫುರಿಸುತ್ತವೆ. ಕುಲದೈವವನ್ನಲ್ಲದೆ ಬೇರೆ ವಿಷಯಗಳನ್ನೊಳಗೊಂಡ ಹಾಡುಗಳು ಇತ್ತಿತ್ತಲಾಗಿ ರಚಿತಗೊಂಡವುಗಳಾಗಿರಬೇಕು.

ಒಂದು ಸಂಪ್ರದಾಯ :

ಡೊಳ್ಳಿನ ಹಾಡುಗಳು ಸಂದರ್ಭದ ದೃಷ್ಟಿಯಿಂದ ಎರಡು ರೀತಿಯಾಗಿ ಹಾಡಲ್ಪಡುತ್ತವೆ. ಮೊದಲನೆಯದು ಊರಾಡುವ ಸಂದರ್ಭದಲ್ಲಿ ಹಾಡುವ ಹರಕೆಯ ಹಾಡು-ಸಂಪ್ರದಾಯವಾಗಿ ಬೆಳೆದುಬಂದದ್ದು. ಎರಡನೆಯದು ದಿಮ್ಮಿಟ್ಟು ಹಾಡುವ ಗೋಷ್ಠಿ ವಿಧಾನ-ದೇವರ ಸೇವೆಯಾಗಿ ಬಂದದ್ದು. ಈ ಎರಡೂ ಸಂದರ್ಭದಲ್ಲಿ ಪ್ರತಿಯೊಂದು ಹಾಡೂ 'ಸ್ವಾಮಿ ನಮ್ಮಯ್ ದೇವರ್ ಬಂದಾವ್..... ಬನ್ನಿರೇ' ಎಂಬ ಪಲ್ಲವಿಯೊಂದಿಗೆ ಪ್ರಾರಂಭವಾಗುತ್ತದೆ. ಈ ಪಲ್ಲವಿಯ ಹಿಂದೆ ಒಂದು ಸಂಪ್ರದಾಯವೇ

೪. ಈ ವಿಷಯವನ್ನು ನನ್ನ ಗಮನಕ್ಕೆ ತಂದವರು ಶ್ರೀ ಅಮೋಗಪ್ಪ, ಮಹದೇವಪ್ಪ, ಒಡೆಯರ ಸಾ.ಕುಂಚನೂರ ತಾ. ಜಮಖಂಡಿ

ಇರಬಹುದೇ ಎಂಬ ಸಂಶಯವನ್ನು ಡಾ. ಜೀ. ಶಂ. ಪರಮಶಿವಯ್ಯನವರು ಎತ್ತಿದ್ದಾರೆ. "ಬೀರದೇವರನ್ನು ಹೊತ್ತು ಡೊಳ್ಳಿನವರು ತಮ್ಮ ಬಂಧು ಬಳಗಗಳ ಊರಿಗೆ ಊರಾಡಲು ಹೋಗುವ ಸಂಪ್ರದಾಯವೇನಾದರೂ ಇದೆಯೇ ?"[೫] ಎಂಬ ಇವರ ಅನುಮಾನ ತುಂಬ ತರ್ಕ ಬದ್ಧವಾಗಿದೆ. ಈ ಅನುಮಾನ ಉತ್ತರ ಕರ್ನಾಟಕದಲ್ಲಿ ಪುಷ್ಟಿ ಪಡೆಯುತ್ತದೆ. ಉತ್ತರ ಕರ್ನಾಟಕದ ಅನೇಕ ದೇವರ ಪಲ್ಲಕ್ಕಿಗಳು ತಮ್ಮ ತಮ್ಮ ಭಕ್ತರ ಊರುಗಳಿಗೆ ಭಿಕ್ಷೆಗೆ ಹೋಗುವುದುಂಟು. ಇದಕ್ಕೆ ಒಳ್ಳೆಯ ಉದಾಹರಣೆ ಕೊಣ್ಣೂರು. ಕೊಣ್ಣೂರಿನ ಕರಿಸಿದ್ಧನ ಪಲ್ಲಕ್ಕಿಗಳು ಊರೂರು ಅಡ್ಡಾಡುತ್ತ ಭಕ್ತರ ಮನೆಗಳಿಗೆ ಹೋಗುತ್ತವೆ. ಯುಗಾದಿಯ ಪಾಡ್ಯೆಯ ನಂತರ ಹೊರಡುವ ಕರಿಸಿದ್ಧನ ಪಲ್ಲಕ್ಕಿಗಳು ಕಾರಹುಣ್ಣಿಮೆಯ ದಿನ ಮರಳಿ ಗುಡಿ ಸೇರುತ್ತವೆ. ಹೀಗೆಯೇ ಉದಗಟ್ಟಿ ಉದ್ದವ್ವನ ಪಲ್ಲಕ್ಕಿಗಳು ನಾಡಮೇಲೆ ಹೋಗುತ್ತವಂತೆ.

ಭಕ್ತರ ಊರಿಗೆ ಹೋಗುವ ದೇವರು ಆ ಊರಿನಲ್ಲಿರುವ ತನ್ನ ಭಕ್ತರ ಮನೆಯಲ್ಲಿ ಒಂದೊಂದು ವಸ್ತಿ ಉಳಿಯುವುದುಂಟು. ಆ ಮನೆಯಲ್ಲಿಯೇ ಪಲ್ಲಕ್ಕಿಯ ಹಿಂದೆ ಬಂದಿರುವ ಪೂಜಾರಿಗಳನ್ನೆಲ್ಲ ಉಣಿಸಿ ತೃಪ್ತಿಪಡಿಸಲಾಗುತ್ತದೆ. ಮರುದಿನ ಮುಂಜಾನೆ ಪಲ್ಲಕ್ಕಿ ಮನೆಯಿಂದ ಹೊರಟ ಸಂದರ್ಭದಲ್ಲಿ ಭಕ್ತ ತನ್ನ ಶಕ್ತ್ಯಾನುಸಾರ ದೇವರಿಗೆ ಕಾಣಿಕೆ ಕೊಡುತ್ತಾನೆ. ಆಗ ದೇವರಿದ್ದ ಪಲ್ಲಕ್ಕಿಯನ್ನು ಭಕ್ತನ ಮನೆಗೆ ಎದುರಾಗಿ ನಿಲ್ಲಿಸಿಕೊಂಡು ಪೂಜಾರಿಗಳು ಹರಕೆಯ ಹಾಡೊಂದನ್ನು ಹಾಡುತ್ತಾರೆ. ಈ ಹರಕೆಯ ಹಾಡುಗಳು 'ಸ್ವಾಮಿ ನಮ್ಮಯ್ ದೇವರ್ ಬಂದಾವ ಬನ್ನಿರೇ' ಎಂಬ ಪಲ್ಲವಿಯೊಂದಿಗೆ ಪ್ರಾರಂಭಗೊಳ್ಳುತ್ತವೆ. ಪಲ್ಲಕ್ಕಿಯನ್ನು ಮನೆಯೆದುರು ನಿಲ್ಲಿಸಿಕೊಂಡು ಆಶೀರ್ವಾದ ಪಡೆಯಲು ಭಕ್ತನನ್ನು ಕರೆಯುವ ಸಂದರ್ಭದಲ್ಲಿ ಈ ಪಲ್ಲವಿ ತುಂಬ ಅರ್ಥಪೂರ್ಣವಾಗಿ ತೋರುತ್ತದೆ. ಸಂದರ್ಭದ ಅರ್ಥಪೂರ್ಣತೆಗೆ ಹರಕೆಯ ಹಾಡೊಂದನ್ನು ನಾವಿಲ್ಲಿ ಗಮನಿಸಬಹುದು;

ಸ್ವಾಮಿ ನಮ್ಮಯ್ ದೇವರ ಬಂದಾವ ಬನ್ನಿರೇ
ಗುರುವೆ ನಮ್ಮಯ್ ದೇವರ ಬಂದಾವ ಬನ್ನಿರೇ.
ಬಾಂವುಳ್ಳ ಭಕ್ತನ ಮನಿಯಲ್ಲಿ ರಾಯಭಾರಿಯ ಮರವೇನ
ರಾಯಭಾರಿಯ ಮರಕಪ್ಪ ರಾಜದ್ಹಕ್ಕಿಗಳ ಕೂಡ್ಯಾವ
ಪಕ್ಕನಿಲ್ಲದ ಪಾರಿಗೋಳ ಲೆಕ್ಕನಿಲ್ಲದ ಗಿಣಿ ಹಿಂಡ
ಲೆಕ್ಕನಿಲ್ಲದ ಗಿಣಿ ಹಿಂಡ ಕೂಡಿ ಹಾಲ ಹಣ್ಣವ ಮೇದಾವ
ಹಾಲ ಹಣ್ಣವ ಮೇದಾವಲ್ಲೋ ಭಕ್ತಗ ಹರಕಿಯ ಕೊಟ್ಟಾವೊ.
ಆಳಮಕ್ಕಳ ಉಂಡ ಮನಿಯಾಗ ಹಾಲ ಕಾವಲ್ಯಾಗ ಹರಿಯಲಿ
ಪೂಜೇರಿ ಉಂಡ ಮನಿಯೊಳಗ ತುಪ್ಪದ ಕಾವಲಿ ಹರಿಯಲಿ
ನನ್ನ ಗುರವ ಉಂಡ ಮನಿಯಾಗ ಹೊನ್ನ ರಾಶಿಯ ಹೊಯ್ಯಲೊ

೫. ಡಾ. ಬಸವರಾಜು ನೆಲ್ಲಿಸರ ಅವರ 'ಡೊಳ್ಳಿನ ಹಾಡು' ಪುಸ್ತಕಕ್ಕೆ ಬರೆದ ಮುನ್ನುಡಿ ಪುಟ.೮

ಕರಿ ಕಂಬಳಿ ಧರಮಾರೋ ಭಕ್ತಗ್ಹರಕಿಯ ಕೊಟ್ಟಾರೋ
ಅಂಗೈಯಷ್ಟ ಹೊಲವ ಮಾಡಿ ಬಂಗಾರ ಬಿತ್ತಿ–ಬೆಳಿಯಲಿ
ಹರಿ ಎಂಬೂಶಬ್ದ ಹೊಲವಾಗಿರಲಿ. ಮೇಲಗೈಯನಿನ ಮನಿಯೊಳಗ
ಆಸಿವಂತನ ಆಗೋಮಗನ ಗಂಟಲಗಾಣ ಆಗಲ್ಯೋ
ವೈರೀ ಹಸ್ತ ಒಡಿಯಾಲಿಮಗನ ನಿನ್ನ ಹಸ ಮೇಲಾಗಲೋ
ಕರೀ ಕಂಬಳಿಧರಮಾರೋ ಭಕ್ತಗ್ಹರಕಿಯ ಕೊಟ್ಟಾರೊ
ಹೀರಿಬಳ್ಳಿಹಂಗ ಹಬ್ಬಲಿ ನಿನ್ನ ಮನಿ ಹಿರೀತಾನ ಮುಂದಾಗಲಿ
ಕವಡಿಕಿ ಬಳ್ಳಿಹಾಂಗ ಹಬ್ಬಲಿ ನಿನ್ನ ಮನಿ ಗೌಡಿಕೇಳ ಅನುವಾಗಲಿ
ವಾಲಿಗೆ ವಾಲಿಗೆ ಚಿಗಿಯಲಿ ನಿನಮನಿ ಬಾಲೇರ ಜೋಗುಳ ಹಾಡಲಿ.
ಕುಂಬಳ ಬಳ್ಳಿ ಕುಡಿ ಸಾಗಲಿ ನಿನಮನಿ ರಂಭೇರ ಜೋಗುಳ ಹಾಡಲ್ಯೋ
ತೊಟ್ಟಲಿಟ್ಟ ತೂಗಲಿ ನಿನಮನಿ ಬಟ್ಟಲಿಟ್ಟಬೀರಲಿ.
ಗಂಗವ್ವ ಗೌರವ್ವನೆಂಬು ಜೋಡೆರಡ ಹಗೆಯ ಹಾಕಲಿ
ನಿಂಬೆವ್ವ ನೀಲವ್ವನೆಂಬು ಜೋಡೆರಡ ಹೆಣ್ಣಮಕ್ಕಳು
ಕಾಮಣ್ಣ ಭೀಮಣ್ಣನೆಂಬ ಜೋಡೆರಡ ಗಂಡ ಮಕ್ಕಳು
ರಾಮಣ್ಣ ಲಕ್ಷ್ಮಣನೆಂಬೂ ಜೋಡೆರಡ ಹಗೆಯ ಹಾಕಲಿ
ರಾಮಣ್ಣ ಲಕ್ಷ್ಮಣನೆಂಬ ಜೋಡೆರಡ ಬಣಮಿ ಒಟ್ಟಲಿ
ಮಾರಾಯ ನನ್ನ ಕರೀ–ದೇವರ ಉಂಡ ಮೆರದ ಹೊಂಟಾನೊ
ಉಂಡ ಮೆರದ ಹೊಂಟೀನ ದೇವರ ಹ್ವಾದಿನ ಹೊಂಟೀನ ಅಂತಾನ
ಬಾಂವುಳ್ಳವನೊ ಏನನ್ನ ಭಕ್ತ ಏನಂತ ಹೇಳುತ್ತ್ಯೆದಾನೊ
ಇಂದ ಹ್ವಾದರ ಏನ ನನ್ನ ಗುರುವ ನಾಳಿಗಿ ಹೋಗರಂತಾನೊ
ಮುಂದಿನ ಊರ ಬಂಡಾರ ಬಂದಾವ ನಿಂದರಾಕ ನಾವ್ ಬಾರದೊ.

(ಹೇಳಿದವರು: ಕರೆಪ್ಪ ಪೂಜೇರ, ಬೀಳಗಿ)

ಮೊದಮೊದಲು ಇಂತಹ ಹರಕೆಯ ಹಾಡುಗಳು ಮಾತ್ರ ಇದ್ದವೆಂದು ತೋರುತ್ತದೆ. ಕ್ರಮೇಣ ತಮ್ಮ ದೈವವನ್ನು ಕೀರ್ತಿಸಬೇಕು, ತಮ್ಮ ದೈವದ ಕಥೆಯನ್ನು ಹೇಳಬೇಕು. ಹಾಡಬೇಕು ಎಂಬ ಭಾವ ಬಲಿತು ಹಾಲುಮತದ ಅನೇಕರು ಪೂಜಾರಿಗಳಲ್ಲದವರೂ – ಡೊಳ್ಳಿನ ಹಾಡುಗಳಿಗೆ ಹುಟ್ಟುಹಾಕಿರಬೇಕು. ಹೀಗೆ ಕ್ರಮೇಣ ಹುಟ್ಟಿಕೊಂಡ ಡೊಳ್ಳಿನ ಹಾಡುಗಳು ಎಂಥ ವಿಷಯವನ್ನೇ ಹೊತ್ತಿರಲಿ ಪೂಜಾರಿಗಳ ಬಾಯಿಂದ ಹೊರಟ 'ಸ್ವಾಮಿ ನಮ್ಮಯ್ ದೇವರ ಬಂದಾವ್ ಬನ್ನಿರೇ' ಎಂಬ ಪಲ್ಲವಿ ಎಲ್ಲ ಹಾಡುಗಳಿಗೂ ಮೊದಲಾಯಿತು.

ಊರಾಡುವ ಸಂದರ್ಭದ ಈ ಪಲ್ಲವಿಯನ್ನು ಗೋಷ್ಠಿ ಸಂದರ್ಭಕ್ಕೆ ಹೊಂದಿಸಿ–

ಕೊಳ್ಳುವುದು ಆಭಾಸವಾಗಿ ತೋರಿ ಇತ್ತಿತ್ತಲಾಗಿ ಕೆಲವು ಹಾಡುಗರು 'ಗುರುವೆ ನಮ್ಮಯ್ ದೇವರಿಗೆ ಶರಣನ್ನೀರೆ' ಎಂಬ ಪಲ್ಲವಿಯೊಂದಿಗೆ ಹಾಡು ಪ್ರಾರಂಭಿಸುತ್ತಿದ್ದಾರೆ.

ಡೊಳ್ಳಿನ ಹಾಡುಗಳ ಸ್ವರೂಪ :

ಡೊಳ್ಳಿನ ಹಾಡಿನ ಮೇಳದಲ್ಲಿ ಡೊಳ್ಳು ಸಹವಾದ್ಯವಾಗಿ ತುಂಬ ಪರಿಣಾಮ–ಕಾರಿಯಾಗಿರುವುದರಿಂದ ಈ ಹಾಡುಗಳಿಗೆ "ಡೊಳ್ಳಿನ ಹಾಡುಗಳು" ಎಂಬ ಹೆಸರು ರೂಢಿಯಲ್ಲಿದೆ. ಈ ಹಾಡುಗಳಲ್ಲಿ ಸ್ತುತಿಪರ ಹಾಡು ಮಾತ್ರ ಚಿಕ್ಕದಾಗಿದ್ದು, ಉಳಿದ ಹಾಡುಗಳು ಸಾಮಾನ್ಯವಾಗಿ ದೀರ್ಘವಾಗಿರುತ್ತವೆ. ಡೊಳ್ಳಿನ ಹಾಡುಗಳು ಬಹುತೇಕ ಕಥಾವಾಹಕಗಳು. ಕಥೆ ಇರದ ಹಾಡುಗಳೂ ಇವೆ. ಆದರೆ ಅವು ಸಂಖ್ಯೆಯಲ್ಲಿ ಕಡಿಮೆ. ಸ್ತುತಿ, ಮುಖ್ಯ ಹಾಡು, ಹರಕೆಯ ಪದ ಯಾವುದೇ ಇರಲಿ ಕೊನೆಯಲ್ಲಿ 'ಹಾಲಮ್ಮ : ಮೇಲೊಂದ ಗಿರಿಯೊ ಗಿರಿಗೊಂದ ಕ್ವಾಣಗನೂರದೇವೊ' ಎಂದೊ 'ಹೆಚ್ಚೆ ಹೆಚ್ಚೆಗೆ ಪಾವಡ ಮಾಡ್ಯಾನ ಗುಚ್ಚಿಮಾಯವ್ವನ ತಮ್ಮಾನೋ' ಎಂದೊ ಮುಕ್ತಾಯ ಪಡೆಯುತ್ತವೆ.

ಸ್ತುತಿಪದಗಳು ಸಾಮಾನ್ಯವಾಗಿ ಕುಲದೈವವನ್ನು ಕುರಿತಿರುತ್ತವೆ. ಕರಿಸಿದ್ದೇಶ್ವರನನ್ನು ಕುರಿತಾಗಿರುವ ಹಾಡಿನ ಈ ಕೆಲವು ಸಾಲುಗಳನ್ನು ನಾವೀಗ ನೋಡಬಹುದು;

ಮುತ್ತಿನ ಗದ್ದಿಗಿಮ್ಯಾಗ ಮುರಗಿ ಮುಂಡಾಸ ಸುತ್ತಿ
ಮುತ್ತ್ಯಾ ಕುಂತಾನ ಗುರು ಕರಿಯಪ್ಪನೋ
ನಾಗಮುರಿಗಿ ಬೆತ್ತ ಬೀಸುವ ಚವುರವ
ಮುತ್ತ್ಯಾ ಕುಂತಾನ ಗುರು ಕರಿಯಪ್ಪನೋ
ನಡಿನ್ಯಾಗ ನಡಕಟ್ಟ ಹೊಳಿಯುವ ಉಡದಾರ
ಸೀಕೆದ ಉಂಗರನಿಟ್ಟ ಕರಿಯಪ್ಪನೋ
ಕ್ವಾರ ಮೀಸಿ ಗೀರ ಗಂಧ ಹಣಿಮ್ಯಾಗ
ಹೊಳವ ಜ್ಯೋತಿ ಮುಂದ ಕರಿಯಪ್ಪನೋ
ಬಲಕ ತೂಗು ಮಂಚ ಎಡಕ ಪೂಜೇರಿ ಕುಂತ
ಭಕ್ತರಿಗೆ ಭಾಗ್ಯೆ ಕೊಟ್ಟ ಕರಿಯಪ್ಪನೊ

ಹೀಗೆಯೇ ತಾವು ಆರಾಧಿಸುವ ದೈವದ ಗುಣರೂಪಗಳನ್ನು ಎತ್ತಿ ಹೇಳುವ ದೇವತಾಸ್ತುತಿಯ ಡೊಳ್ಳಿನ ಹಾಡುಗಳು ಸಾಕಷ್ಟಿವೆ.

ಮುಖ್ಯ ಹಾಡು ಸಾಮಾನ್ಯವಾಗಿ ದೀರ್ಘವಾಗಿರುತ್ತದೆ. ಎರಡು ಅಥವಾ ನಾಲ್ಕು ಸಾಲಿಗೆ ಒಂದರಂತೆ ಒಂದೊಂದು ನುಡಿ ಇರುತ್ತದೆ. ಬಿಡಿ ಕಥೆಗಳು ಅಥವಾ ಕಥೆಯಿರದ

ದೀರ್ಘ ವಿಷಯಗಳು ಒಂದೊಂದೇ ಹಾಡಿನಲ್ಲಿ ಮುಕ್ತಾಯ ಪಡೆಯುತ್ತವೆ. ಆದರೆ ಬೀರದೇವರ ಚರಿತ್ರೆಯಂಥ ಸುದೀರ್ಘ ವಿಷಯವನ್ನು ಎತ್ತಿಕೊಂಡಾಗ ಹಾಡು ಎರಡಾಗಿ, ಮೂರಾಗಿ ಒಡೆಯುವುದುಂಟು. ಘಟನಾವಳಿಗಳ ಕ್ರಮದಲ್ಲಿಯೇ ಹಾಡುಗಳು ಸಾಗುತ್ತವೆ. ಮುಂದೆ ಕಥೆ ಉಳಿದಿದ್ದರೆ ಹಿಂದಿನ ಹಾಡಿನ ಅಂತ್ಯದಲ್ಲಿ ಒಂದು ಹಂತ ಮುಗಿದ ಸೂಚನೆಯಿರುತ್ತದೆ. ಈ ಸಂದರ್ಭದಲ್ಲಿ "ಇಲ್ಲಿಗಿ ಒಂದ ಸಂದೇಳ ಗುರುವ ಹಾಡತೀವ ಪದ ಮುಂದೇಳೊ" ಎಂಬುದಾಗಿ ಬರುವ ಮಾತು ಹಿಂದಿನ ಹಾಡು ಒಂದು ಘಟ್ಟಕ್ಕೆ ಬಂದು ನಿಂತುದನ್ನು ಹೇಳುವುದಲ್ಲದೆ ಮುಂದಿನ ಹಾಡಿನ ಬಗೆಗೆ ಕುತೂಹಲ ಉಳಿಯುವಂತೆ ಮಾಡುತ್ತದೆ.

ದೊಡ್ಡವಾದ ಕೆಲವು ಡೊಳ್ಳಿನ ಹಾಡುಗಳಲ್ಲಿ 'ವಚನ'ವನ್ನು ಬಳಸಿಕೊಳ್ಳುವುದಿದೆ. 'ವಚನ'ವೆಂದರೆ ವಿಷಯವನ್ನು ಗದ್ಯದಲ್ಲಿ ಹೇಳುವ ರೀತಿ.' ಡಾ. ಎಂ. ಎಸ್. ಸುಂಕಾಪುರ ಮತ್ತು ಡಾ. ಶಿವಾನಂದ ಗುಬ್ಬಣ್ಣವರ ಇವರ ಸಂಪಾದನೆಗಳಲ್ಲಿ ವಚನಗಳನ್ನು ಹೊಂದಿರುವ ಡೊಳ್ಳಿನ ಹಾಡುಗಳನ್ನು ನೋಡಬಹುದು. ಹಾಡಿನ ಏಕತಾನತೆಯನ್ನು ತಪ್ಪಿಸುವುದಕ್ಕೋ ಸಂದರ್ಭದ ಸ್ಪಷ್ಟ ವಿವರಣೆಗೋ ಈ ವಚನವನ್ನು ಹೆಣೆಯುತ್ತಿರಬಹುದು. ಮಹಾಭಾರತಕ್ಕೆ ಸಂಬಂಧಪಟ್ಟ ಡೊಳ್ಳಿನ ಹಾಡೊಂದರಲ್ಲಿ ಅರ್ಜುನ ತನ್ನ ಪೌರುಷವನ್ನು ವಿವರಿಸುತ್ತಾನೆ :

"ಮಹಾವೀರ ಪಾರ್ಥ ರಣಶೂರ ಎಂಬ ನಾಮ ಕೇಳಿರಿ ನನಗ ಬಂದೈತಿ, ಹಿಂಗಂತ ಬಿರದ ಸಾರತೈತಿ. ಹಿತ ಜೋಧ ಮಾಡಿ ಸರಿಯಾಗಿ ನಿಂತ ಸಾರಥಿ ಭೀಷ್ಮನ ನಾಸಿಕ ಹರಿದು ಸಂಹಾರ ಮಾಡಿದೆ. ಹಾಗೂ ಕೌರವನ ಬಲ ಮಡಿಯುವಂತೆ ಮಾಡಿ ಹಸ್ತಿನಾವತಿ ವಶಪಡಿಸಿಕೊಂಡೆ." [೬]

ಮುಗ್ಧ ಭಾಷೆಯನ್ನು ಬಳಸಿಕೊಂಡ ಇಂಥ ವಚನಗಳನ್ನು ಲಾವಣಿ ಸಂಪ್ರದಾಯದಲ್ಲಿಯೂ ಕಾಣುತ್ತೇವೆ.

ಮುಖ್ಯವಾದ ಹಾಡಿಗೆ ಪಲ್ಲವಿಯಲ್ಲಿ ಒಂದು ಪೀಠಿಕೆಯಿರುತ್ತದೆ. ಪ್ರಾರಂಭದಲ್ಲಿ ಬಹಳಷ್ಟು ಹಾಡುಗಳು ಕೇಳುಗರೊಂದಿಗೆ ಸಂಭಾಷಿಸುತ್ತವೆ;

ಗುರುಹಿರಿಯರಿಗೆ ಶರಣು ಮಾಡುವೆನು
ಕರುಣದಿಂದ ಕೇಳರಿ ಕುಂತಾ
ಮರಣರಹಿತ ಮಹಾದೇವನ ಭಜಿಸುತ
ಹೇಳುವೆ ಮುಂದಿನ ವೃತ್ತಾಂತ [೭]

* * *

---

೬ 'ದೇವರ್ ಬಂದಾವ್ ಬನ್ನಿರೇ' ಸಂ.ಡಾ. ಶಿವಾನಂದ ಗುಬ್ಬಣ್ಣವರ ಪುಟ. ೧೮೫

೭ ಜೀವನ ಜೋಕಾಲಿ–ಡೊಳ್ಳಿನ ಹಾಡು' ಸಂ.ಡಾ.ಎಂ.ಎಸ್. ಸುಂಕಾಪುರ ಪುಟ–೭

ಗುಲ್ಲ ಮಾಡದೆನ್ನ ಸೊಲ್ಲ ಕೇಳರಿ
ನಿಂತು ಕೇಳುವೆನು ಕೈ ಮುಗದಾ
ಮುಂಡಾಸುರನೆಂಬ ಮುಂಡ ದೈತ್ಯನ
ರುಂಡ ಕಡಿದ ರೇವಣಸಿದ್ಧ [೯]

ಈ ಬಗೆಯ ಪ್ರಾರಂಭದಿಂದ ಸಭಿಕರಿಗೂ ತನಗೂ ಮಧ್ಯದಲ್ಲಿ ಒಂದು ಬಗೆಯ ಆತ್ಮೀಯ ಸೇತುವೆ ನಿರ್ಮಾಣಗೊಳ್ಳುತ್ತದೆಂಬ ಪರಿಜ್ಞಾನ ಹಾಡು ಕಟ್ಟುವವನಿಗಿದೆ. ಹೀಗೆ ಸಭಿಕನೊಂದಿಗೆ ಸಂಭಾಷಿಸುತ್ತಿರುವ ಪ್ರಾರಂಭದ ಮಾತುಗಳಲ್ಲೇ ವಸ್ತುವೂ ಅಡಕವಾಗಿರುವುದನ್ನು ಗಮನಿಸಬೇಕು;

ಅರಿಯದ ಅರ್ಥ ಕೇಳಿಲ್ಲ ತಮ್ಮಾ
ಅಗಾದ ನಮಗೇನೂ ಆಗಿಲ್ಲಾ
ಕುರಿಗಳು ಧರಣಿಗೆ ಬಂದ ಮಜಕುರ
ವರ್ಣಿಸಿ ಹೇಳುವೆ ತಿಳಿ ಮೊದಲಾ [೯]

*　　*　　*

ಭಕ್ತಿವಂತರೆಲ್ಲಾ ಶಿಸ್ತಿಲೆ ಕೂಡಿರಿ
ಚಿತ್ತವಿಟ್ಟ ಕೇಳರಿ ಕತಿ ಒಂದಾ
ಏಳುಕೊಳ್ಳದ ರೇಣುಕೆ ಮಹಾತ್ಮೆಯ
ಕತಿ ಹೇಳುವೆ ನಾ ನಿಮ್ಮುಂದಾ. [೧೦]

ಡೊಳ್ಳಿನ ಹಾಡಿನ ಎಲ್ಲಾ ಕರ್ತೃಗಳೂ ಇಂದು ಸ್ಪಷ್ಟವಿಲ್ಲ. ಪರಂಪರಾಗತವಾಗಿ ಬಂದಿರುವ ಕೆಲವು ಹಳೆಯ ಹಾಡುಗಳ ಕೊನೆಗೆ ಕರ್ತೃವಿನ ಯಾವ ಉಲ್ಲೇಖವಿಲ್ಲ. ಆದರೆ ಇತ್ತೀಚೆಗೆ ರಚಿಸ್ಪಟ್ಟ ಹಾಡುಗಳ ಕೊನೆಯಲ್ಲಿ ಕರ್ತೃವಿನ ಊರು, ಹೆಸರಿನ ಉಲ್ಲೇಖ ದೊರೆಯುತ್ತದೆ.

ನಾಗರಹಳ್ಳಿಯ ಶರಣಬಸವನ ಶಿಷ್ಯ
ಯಲ್ಲಣ್ಣ ಕವಿಗಾರ ಇರತಾನ [೧೧]

*　　*　　*

ಕ್ಷಿತಿಯೊಳು ಹುಲಕುಂದ ಪತಿ ರಾಮೇಶ್ವರ
ಭಕ್ತ ಸಿದ್ಧರಾಯನ ಅಕ್ಷರಾ

---

೯. ಅದೇ ಪುಟ – ೫೮
೯. ಅದೇಪುಟ – ೭೨
೧೦. ದೇವರ ಬಂದಾವ್ ಬನ್ನಿರೇ ಸಂ.ಡಾ.ಶಿವಾನಂದ ಗುಬ್ಬಣ್ಣವರ ಪುಟ ೧೮೫
೧೧. ಜೀವನ ಜೋಕಾಲಿ–ಡೊಳ್ಳಿನ ಹಾಡು ಸಂ.ಡಾ.ಎಂ.ಎಸ್. ಸುಂಕಾಪುರ ಪುಟ– ೭

ಇಲ್ಲಿಗಿ ಒಂದ ಸಂದೇಳ ಗುರುವೆ ಹಾಡಿದವರ
ಪದ ಮುಂದ್ಕೇಳೋ. [೧೨]

ಎಂಬ ಸಾಲುಗಳಲ್ಲಿ ಕವಿಗಳ ಊರು, ಹೆಸರು ಸ್ಪಷ್ಟವಾಗಿವೆ.

ಡೊಳ್ಳಿನ ಹಾಡಿನ ಸೃಷ್ಟಿ ಮತ್ತು ಪ್ರಸಾರ :

ಡೊಳ್ಳಿನ ಹಾಡುಗಳು ಕೆಲವು ನಿರಕ್ಷರಿಗಳಿಂದ ಕವಿಯಿಂದ ಕವಿಗೆ ಬಂದಿರುವಂತೆಯೇ ಈಗಲೂ ಇವು ರಚನೆಗೊಳ್ಳುತ್ತಿವೆ. ಮೂಲತಃ ಡೊಳ್ಳಿನ ಹಾಡು ಕಟ್ಟುವವನು ಕೇವಲ ಕವಿಯಾಗಿರಬಹುದು, ಒಮ್ಮೊಮ್ಮೆ ಕ್ವಚಿತ್ತಾಗಿ ಆ ಕವಿ ಹಾಡುಗನೂ ಆಗಿರಬಹುದು. ಒಂದು ಮಾತು ಸತ್ಯ ; ಡೊಳ್ಳಿನ ಹಾಡಿಗೆ 'ಕವಿಗಾರ'ನಾಗಿ ಒಂದೆಡೆ ಕರ್ತೃ ಒಬ್ಬನಿರುತ್ತಾನೆ. ಈತ ಬರೆಯಬಲ್ಲವನಾಗಿದ್ದರೆ ಹಾಡಿನ ಮೇಳದವರು ಇಂತಿಂಥ ಒಂದು ಕಥೆಯನ್ನೊಳಗೊಂಡ ಹಾಡನ್ನು ಕಟ್ಟಿ ಕೊಡಲು ಕೇಳಿಕೊಂಡಾಗ ಈ ಕವಿ ತಾನು ಕೇಳಿದ ಪರಂಪರಾಗತ ಹೇಳಿಕೆಗಳನ್ನು ಅವಲಂಬಿಸಿ ಅಥವಾ ಕ್ವಚಿತ್ತಾಗಿ ತನ್ನಲ್ಲಿರುವ ಪುಸ್ತಕಗಳನ್ನೋ ಹಸ್ತಪ್ರತಿಗಳನ್ನೋ ಅವಲಂಬಿಸಿ ಹಾಡುಕಟ್ಟಿ ಕೊಡುವುದುಂಟು ಇದನ್ನು ಹವ್ಯಾಸವೆಂದು ಮಾಡುವವರು ಕೆಲವರಾದರೆ, ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದ ಅಪರೂಪದ ವ್ಯಕ್ತಿಗಳೂ ಸಿಗುತ್ತಾರೆ. ಅಂಥ ಅಪರೂಪದ ವ್ಯಕ್ತಿಗಳಲ್ಲಿ ಯಾದವಾಡದ (ಬೆಳಗಾವಿ ಜಿಲ್ಲೆ) ರಾಮಚಂದ್ರ ಶೇರಖಾನೆ ಒಬ್ಬರಾಗಿದ್ದರು. ಯಾರೇ ಬಂದು ಒಂದು ವಿಷಯ ಹೇಳಿ ಕವಿತೆ ಬರೆದುಕೊಡಲು ಕೇಳಿಕೊಂಡರೆ ಸಾಕು, ರಾಮಚಂದ್ರ ಬರೆದು ಕೊಡುತ್ತಿದ್ದರು. ಯಾದವಾಡದಲ್ಲಿ ಕಾಯಂ ಆಗಿ ಒಂದು ಮೇಳಕ್ಕೆ ಹಾಡು ಬರೆದು ಕೊಡುತ್ತಿದ್ದುದಲ್ಲದೇ ಊರಿಂದೂರಿಗೆ ಹಾಡು ಕಲಿಸಲೂ ಹೋಗುತ್ತಿದ್ದರು. ಹಾಲು ಮತದ ಬಗೆಗೆ ಚೆನ್ನಾಗಿ ಓದಿಕೊಂಡಿದ್ದ ರಾಮಚಂದ್ರ ಅವರಿಗೆ ರಾಮಾಯಾಣ, ಮಹಾಭಾರತಗಳಲ್ಲೂ ಪರಿಶ್ರಮ ಇತ್ತು. ಕಲಿಸಲು ಹೋದ ಊರುಗಳಲ್ಲಿ ಸಾಮಾನ್ಯವಾಗಿ ತಾವು ಬರೆದ ಹಾಡುಗಳನ್ನೇ ಕಲಿಸುತ್ತಿದ್ದರು. ಒಂದು ಮೇಳವನ್ನು ಸುಮಾರು ಎರಡು ಮೂರು ತಿಂಗಳಲ್ಲಿ ತಯಾರಿಸುತ್ತಿದ್ದರು. ಅದಕ್ಕೆ ಸುಮಾರು ಐದುನೂರು ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದರು.

ಹೀಗೆ ಕವಿಯೊಬ್ಬನಿಂದ ಒಂದು ಮೇಳ ಹಾಡುಗಳನ್ನು ಕಲಿತುಕೊಂಡ ಮೇಲೆ ಈ ಹಾಡುಗಳು ಮುಂದೆ ಮೇಳದಿಂದ ಮೇಳಕ್ಕೆ ಪ್ರಸಾರಗೊಳ್ಳುತ್ತವೆ; ಮುಂದುವರಿಯುತ್ತವೆ.

ಹಾಡಿನ ಮೇಳದಲ್ಲಿ ಬಹುಪಾಲು ಜನ ನಿರಕ್ಷರಿಗಳು. ಹಾಡುಗಳನ್ನು ಬರೆದಿಟ್ಟುಕೊಳ್ಳುವುದಕ್ಕೆ ಅಥವಾ ಬರೆದ ಹಾಡುಗಳನ್ನು ಮೇಳಗಳಿಗೆ ಕಲಿಸಲಿಕ್ಕೆ ಮೇಳದಲ್ಲಿ ಒಬ್ಬನಾದರೂ ಅಕ್ಷರವಂತನಿರುತ್ತಾನೆ. (ಇವನ ಶಿಕ್ಷಣ ಬಹಳ ಮಾಡಿ ಪ್ರಾಥಮಿಕ ಮಟ್ಟದ್ದು.) ಬಹುಶಃ ಈ ಅಕ್ಷರವಂತನೇ ಮೇಳದ ಮುಖ್ಯಸ್ಥ ಇರುತ್ತಾನೆ.

---

೧೨. ಅದೇಮಟ - ೭೭

ಡೊಳ್ಳಿನ ಹಾಡಿನ ಗೋಷ್ಠಿ :

ಡೊಳ್ಳಿನ ಹಾಡಿನ ಗೋಷ್ಠಿಗೆ 'ದಿಮ್ಮು ಇಡು'ವುದು ಎಂಬ ಪರ್ಯಾಯ ಹೆಸರಿದೆ. ಈ ಗೋಷ್ಠಿಗಳು ಪ್ರಮುಖವಾಗಿ ಎರಡು ಸಂದರ್ಭಗಳಲ್ಲಿ ನಡೆಯುತ್ತವೆ; ಒಂದು – ಕುಲದೈವದ ಉತ್ಸವದ ದಿನ ರಾತ್ರಿ, ಎರಡು–ಪಾಲಕಿಯೊಂದಿಗೆ ಊರಾಡಲು ಪೂಜಾರಿಗಳು ಹೋದ ಸಂದರ್ಭದಲ್ಲಿ ದೇವರನ್ನು ಭಕ್ತ ತನ್ನ ಮನೆಗೆ ಕರೆದುಕೊಂಡ ರಾತ್ರಿ. ಮೊದಲನೆಯದರಲ್ಲಿ ಅಹ್ವಾನಿತ ಮೇಳಗಳು ಭಾಗವಹಿಸುತ್ತವೆ. ಎರಡನೆಯದರಲ್ಲಿ ಪಾಲಕಿಯೊಂದಿಗಿದ್ದ ಪೂಜಾರಿಗಳು ಭಾಗವಹಿಸುತ್ತಾರೆ; ಅವರಿಗೆ ಮಧ್ಯ ಮಧ್ಯ ಒಂದಿಷ್ಟು ವಿಶ್ರಾಂತಿ ಕೊಡಲು ಆ ಊರಿನ ಮೇಳದವರು ಭಾಗವಹಿಸುತ್ತಾರೆ.

ಉತ್ಸವಗಳಲ್ಲಿ ಆಹ್ವಾನಿಸುವ ಮೇಳಗಳಿಗೆ ಮುಂಚಿತವಾಗಿ ತಿಳಿಸಬೇಕಾಗುತ್ತದೆ. ಮುಂಚಿತವಾಗಿ ತಿಳಿಸುವ ಈ ಕ್ರಮಕ್ಕೆ ಜಾನಪದರು 'ಬಟ್ಟು ಕೊಡು'ವುದು ಎನ್ನುತ್ತಾರೆ. ಬಟ್ಟು ಕೊಡಲು ಹೋದವನು ಎಳ್ಳೆದೆಲೆಯೊಂದಿಗೆ ಎರಡು ಅರಿಷಿಣ ಬೇರನ್ನು ಕೊಟ್ಟು ನಮ್ಮೂರಿಗೆ ಇಂಥ ದಿನ ಹಾಡಲು ಬರಬೇಕೆಂದು ಅಹ್ವಾನಿಸುತ್ತಾನೆ. ಮೇಳದವರು ಒಮ್ಮೆ ಬಟ್ಟು ಹಿಡಿದರೆ ತಪ್ಪಿಸುವುದಿಲ್ಲ. ಮೊದಮೊದಲು ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಅಹ್ವಾನಿಸಿದವರ ಊರಿಗೆ ಹೋಗಿ ಹಾಡಿ ಬರುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಪ್ರತಿಷ್ಠಿತ ಮೇಳದವರು ಸಂಭಾವನೆಯನ್ನು ಮುಂಚಿತವಾಗಿಯೇ ಗೊತ್ತುಪಡಿಸುತ್ತಿದ್ದಾರೆ.

ಗೋಷ್ಠಿಗಳು ರಾತ್ರಿ ಊಟವಾದ ತರುವಾಯವೇ ಜರುಗುತ್ತದೆ. ಗೋಷ್ಠಿ ಸಮಯದಲ್ಲಿ ಮೇಳಗಳು ಒಂದಕ್ಕಿಂತ ಹೆಚ್ಚಿದ್ದರೆ ಆಹ್ವಾನಿಸಿದವರ ನಿರ್ದೇಶನದಂತೆ ಪಾಳಿಪ್ರಕಾರ ಹಾಡಬೇಕಾಗುತ್ತದೆ.

ಡೊಳ್ಳಿನ ಹಾಡಿನ ಗೋಷ್ಠಿಯಲ್ಲಿ ಮುಂದೆ ಹಾಡುವವರು ಇಬ್ಬರು, ಹಿಂದೆ ಹಾಡುವವರು ಇಬ್ಬರು. ಹಿಂದೆ ಹಾಡುವವರು ಇಬ್ಬರಿಗಿಂತ ಹೆಚ್ಚೂ ಇರಬಹುದು. ಮುಂಚಿನ ಕಾಲದಲ್ಲಿ ಮುಮ್ಮೇಳ ಹಿಮ್ಮೇಳದವರಿಬ್ಬರೂ ಕುಳಿತು ಹಾಡುತ್ತಿದ್ದರು. ಆದರೆ ಡೊಳ್ಳಿನ ಹಾಡಿನ ಹವ್ಯಾಸ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಮುಮ್ಮೇಳದವರು ನಿಂತು ಹಾಡುತ್ತಿದ್ದರೆ, ಹಿಮ್ಮೇಳದವರು ಕುಳಿತು ಹಾಡುತ್ತಿದ್ದಾರೆ. ಹಿಮ್ಮೇಳದವರು ವಾದ್ಯಗಳನ್ನು ಹಿಡಿದಿರುತ್ತಾರೆ. ಡೊಳ್ಳು ಈ ಮೇಳದ ಪ್ರಮುಖ ವಾದ್ಯ. ಇದರ ಸಂಗಡ ತಾಳ ಇರುತ್ತದೆ. ಕೊಳಲು ಇರಬಹುದು, ಇರಲಿಕ್ಕಿಲ್ಲ. ಆಧುನಿಕ ಹಾಡುಗರು ಜನರಂಜನೆಗೆ ಕಾಲುಪೇಟಿ, ಟೋಕರಾ, ತಬಲಾದಂಥ ವಾದ್ಯಗಳನ್ನೂ ಉಪಯೋಗಿಸುತ್ತಿದ್ದಾರೆ.

ಮುಮ್ಮೇಳದವರು ಹಾಡನ್ನು ಪ್ರಾರಂಭಿಸುವ ಮೊದಲು ಹಿಮ್ಮೇಳದ ಡೊಳ್ಳಿನವ 'ದಿಮ್ಮಹಿಡಿ'ಯುತ್ತಾನೆ. ಅದಕ್ಕೆ ತಾಳಿನವ ಸಾಥಿ ಕೊಡುತ್ತಾನೆ. ಮೊದಲು ಮಂದಗತಿಯಲ್ಲಿ ಸಾಗಿದ ತಾಳ ಬರಬರುತ್ತಾ ದುಡುಕಿಗೆ ಜಾರುತ್ತದೆ. ಈ ದುಡುಕಿಯ ಗತಿಯಲ್ಲೇ ಒಂದು ಸುತ್ತು ಬಾರಿಸಿ ತರುವಾಯ ಹಿಮ್ಮೇಳ ವಾದ್ಯ ತಾಳಿನ ಸಾಮಾನ್ಯ ನಡೆಗೆ ಬರುತ್ತದೆ. ಈ ಹಂತದಲ್ಲಿ ಮುಮ್ಮೇಳದವರು 'ಸ್ವಾಮೀ ನಮ್ಮಯ್ ದೇವರ್ ಬಂದಾವ ಬನ್ನಿರೆ' ಎಂದು ಪ್ರಾರಂಭಿಸುತ್ತಾರೆ. ಈ ಪಲ್ಲವಿಯನ್ನು ಹಿಮ್ಮೇಳದವರೂ ಮುಮ್ಮೇಳದವರೊಂದಿಗೆ ಸಣ್ಣಗೆ ಅನ್ನುತ್ತಿರುತ್ತಾರೆ. ಈ ಪಲ್ಲವಿಯನ್ನು ಹಾಡುವಾಗ ಮೇಳದವರೆಲ್ಲ ಡೊಳ್ಳುಮುಟ್ಟಿ ನಮಸ್ಕರಿಸುತ್ತಾರೆ.

ಮುಮ್ಮೇಳದವರು ಹಾಡುವ ಹಾಡು ಚರಣಕ್ಕೊಂದಾವರ್ತಿ ಹಿಮ್ಮೇಳದವರಿಂದ ಪುನರಾವರ್ತನೆಗೊಳ್ಳುತ್ತದೆ. ಕೆಲವು ಹಾಡುಗಳನ್ನು ಹಾಡುವಾಗ ಹಿಮ್ಮೇಳದವರು ಮುಮ್ಮೇಳದವರ ಎಲ್ಲ ಚರಣಗಳನ್ನೂ ಪುನರುಚ್ಚರಿಸದೆ ನುಡಿಗೊಂದಾವರ್ತಿ ಪಲ್ಲವಿಯನ್ನೇ ಅನ್ನುತ್ತಹೋಗುತ್ತಾರೆ. ಮುಮ್ಮೇಳದವರು ಹಾಡುವಾಗ ಹಾಡಿನ ಭಾವ ಸ್ಪಷ್ಟವಾಗಲೆಂಬ ಉದ್ದೇಶವಿದ್ದರೆ ಹಿಮ್ಮೇಳದವರು ಹಾಡುವಾಗ ವಾದ್ಯ ಪರಿಕರಗಳ ಕಲಾತ್ಮಕತೆಯನ್ನು ಸಭಿಕರಿಗೆ ತೋರಿಸುವ ಉದ್ದೇಶವಿರುತ್ತದೆ. ಹಿಮ್ಮೇಳದಿಂದ ಮೇಳಕ್ಕೆ ರಂಗೇರಿದಾಗ ಮೇಳದಲ್ಲಿಯೇ ಇರುವ ಒಬ್ಬ 'ಹೌದಾ' ಎಂದೋ 'ಹೌದೊ' ಎಂದೋ ಸಿಳ್ಳುಹಾಕಿಯೊ ವಾತಾವರಣದಲ್ಲಿ ಮತ್ತಷ್ಟು ಚೈತನ್ಯ ತುಂಬುತ್ತಾನೆ.

ಎಲ್ಲ ಮೇಳದವರು ಪ್ರಾರಂಭದಲ್ಲಿ ಸ್ತುತಿಪದ್ಯ ಹಾಡುತ್ತಾರೆ. ಅದು ಮುಗಿದ ಕೂಡಲೇ ಮುಖ್ಯ ಹಾಡೊಂದನ್ನೆತ್ತಿಕೊಳ್ಳುತ್ತಾರೆ. ಹಾಡು ಪೂರೈಸಿ 'ಹಾಲು ಮತಕ ಮೇಲೊಂದ ಗಿರಿಯೊ.....' ಅಂದು ಮುಗಿಸಿದಮೇಲೆ ಮುಮ್ಮೇಳ ಹಿಮ್ಮೇಳದವರು ಹಾಡುವುದನ್ನು ನಿಲ್ಲಿಸುತ್ತಾರೆ. ಆದರೆ ವಾದ್ಯ ಬಾರಿಸುವುದನ್ನು ನಿಲ್ಲಿಸುವುದಿಲ್ಲ. ಹಾಡುವುದನ್ನು ನಿಲ್ಲಿಸಿದ ಮೇಲೆ ವಾದ್ಯದವರು ದುಡಿಕಿಯಲ್ಲಿ ಒಂದು ಸುತ್ತು ಬಾರಿಸಿ, ಕೊನೆಗೆ ತಾಳದಲ್ಲಿ ಮುಕ್ತಾಯ ಹಾಕಿ ಗಪ್ಪನೆ ನಿಲ್ಲಿಸುತ್ತಾರೆ. ತರುವಾಯ ಡೊಳ್ಳು ಮುಟ್ಟಿ ನಮಸ್ಕರಿಸಿ ಬಿಡುಗಡೆಯ ವಿಶ್ರಾಂತಿ ಪಡೆಯುತ್ತಾರೆ. ಈ ಮೇಳದವರು ಹಾಡು ಹಾಡುತ್ತಿರುವಂತೆ ಆಗೀಗ ಪೂಜಾರಿಗಳು ಬಂದು ಹಾಡುಗರ ಹಣೆ, ಗಲ್ಲಗಳಿಗೆ ಬಂಡಾರ ಬಳಿಯುತ್ತಾರೆ. ಹಾಗೆಯೇ ಮೇಳದ ಮೇಲೆ ಬಂಡಾರ ತೂರುವುದೂ ಉಂಟು. ಊರಿನ ಹಿರಿಯರು, ಉಮೇದಿನವರು ಮೇಳಕ್ಕೋ ಮೇಳದ ಹಾಡುಗರಿಗೋ ಆಹೇರು ಮಾಡುತ್ತಾರೆ. ಈ ಮೇಳಗಳು ಇಡೀ ರಾತ್ರಿ ನಡೆಯುತ್ತವೆ. ಮುಂಜಾನೆ ಮಂಗಳಾರತಿಯೊಂದಿಗೆ ಮುಕ್ತಾಯ ಹೊಂದುತ್ತವೆ.

ಪಲ್ಲಕ್ಕಿಯೊಂದಿಗೆ ಬರುವ ಪೂಜಾರಿಗಳು ಭಕ್ತರ ಮನೆಯ ಅಂಗಳದಲ್ಲಿ ರಾತ್ರಿ ನಡೆಸುವ ಗೋಷ್ಠಿ ಇದಕ್ಕಿಂತ ಭಿನ್ನವಾಗಿರುವುದಿಲ್ಲ. ಆದರೆ ಪೂಜಾರಿಗಳು ಮರುದಿನ ಮುಂದಿನ ಊರಿಗೆ ಪಲ್ಲಕ್ಕಿ ಹೊತ್ತು ಹೋಗಬೇಕಾಗಿರುವುದರಿಂದ ಮಧ್ಯರಾತ್ರಿ ಸರಿಯುತ್ತಲೇ ಮಂಗಳ ಹಾಡುತ್ತಾರೆ.

ಡೊಳ್ಳಿನ ಹಾಡಿನ ವೈವಿಧ್ಯತೆ :

ಡೊಳ್ಳಿನ ಹಾಡುಗಳು ಇಂದು ಸಾಕಷ್ಟು ವೈವಿಧ್ಯಮಯವಾಗಿ ಸೃಷ್ಟಿಗೊಳ್ಳುತ್ತಿವೆ, ಹಾಡಲ್ಪಡುತ್ತಿವೆ. ಮೊದಮೊದಲು ಕೇವಲ ಕುಲದೇವರಿಗೆ ಮಾತ್ರ ಸೀಮಿತವಾಗಿದ್ದ ಡೊಳ್ಳಿನ ಹಾಡುಗಳು ಇಂದು ನಾನಾ ಬಗೆಯ ವಸ್ತುಗಳನ್ನು ಗರ್ಭೀಕರಿಸಿಕೊಂಡಿರುವುದನ್ನು ಹಳೆಯ ತಲೆಮಾರಿನವರೇ ಒಪ್ಪಿಕೊಳ್ಳುತ್ತಿದ್ದಾರೆ. ಮತ ಸಂಬಂಧಿ ದೇವರನ್ನಲ್ಲದೆ ಅನ್ಯದೇವರನ್ನು ಸ್ತುತಿಸುವ, ಕೀರ್ತಿಸುವ ಉದಾರತನ ಡೊಳ್ಳಿನ ಹಾಡುಗಳಿಗಿದೆ. ರೇವಣಸಿದ್ಧ, ಬೀರದೇವರು ಮುಂತಾದವರಿಗೆ ಸಂಬಂಧಪಟ್ಟ ಕತೆಗಳನ್ನಲ್ಲದೆ ರಾಮಾಯಣ, ಮಹಾಭಾರತಗಳನ್ನೂ ಕಥೆಗಳಿಗಾಗಿ ಹೆಕ್ಕುತ್ತಿರುವುದು ಇಂದಿನ ಡೊಳ್ಳಿನ ಹಾಡುಗಳ ವೈಶಿಷ್ಟ್ಯ. ಪುರಾಣದ ಕಥೆಗಳನ್ನಲ್ಲದೆ ಸಾಮಾಜಿಕ ಕಥೆಗಳನ್ನೂ ಇವರು ಹಣೆದಿದ್ದಾರೆ.

ಸೃಷ್ಟಿಯ ಉತ್ಪತ್ತಿ ವಿಕಾಸವನ್ನು ಕುರಿತಾಗಿಯೂ ಹೇರಳ ಡೊಳ್ಳಿನ ಹಾಡುಗಳು ದೊರೆಯುತ್ತವೆ.

ತಂದೆಗಳಿರಾ ನಿಮಗೆ ವಂದಿಸಿ ಪೇಳುವೆ
ಕಂದನೆಂದು ಇಡಬೇಕ ಪ್ರೀತಿ
ಪ್ರೀತಿಯಿಂದ ನೀವು ಕೇಳರಿ ಚೆಂದಾಗಿ
ಸೃಷ್ಟಿ ಮೊದಲ ಹುಟ್ಟಿದ ರೀತಿ.

ಆದಿಯಲ್ಲಿ ಆಕಾರ ಇದ್ದಿದ್ದಿಲ್ಲ
ನಿರಾಕಾರ ಇತ್ತೊ ಬರಿ ಬಯಲಾ
ವಿದ್ಯಾಧರ ಸುರ ಸಿದ್ಧಸಾಧ್ಯರು
ಯಕ್ಷ ಗರುಡ ಕಿಂಪುರುಷರು ಇಲ್ಲಾ
ಸತ್ತಾವೀಸ ನಕ್ಷತ್ರ ರಾಸಿಗಳು
ಸಪ್ತ ಸಮುದ್ರದ ಗುರುತಿಲ್ಲ. [೧೩]

---

೧೩. ಜೀವನ ಜೋಕಾಲಿ–ಡೊಳ್ಳಿನ ಹಾಡು ಸಂ.ಡಾ.ಎಂ.ಎಸ್. ಸುಂಕಾಪುರ ಪುಟ – ೪೬

ಹೀಗೆ ಸೃಷ್ಟಿಯ ಆದಿಸ್ಥಿತಿಯಿಂದ ಆರಂಭಗೊಳ್ಳುವ ಈ ಹಾಡು ಮುಂದಿನ ಹಂತದಲ್ಲಿ ಸೃಷ್ಟಿಯ ಬೆಳವಣಿಗೆಯನ್ನು ವಿವರವಾಗಿ ಹೇಳುತ್ತದೆ. ಇಂಥ ವಿಷಯದ ಹಾಡುಗಳು ಅನೇಕ ವೇಳೆ ಸವಾಲ್–ಜವಾಬದ ರೀತಿಯನ್ನು ಪಡೆದುಕೊಂಡು ಡೊಳ್ಳಿನ ಹಾಡಿನ ವಿಸ್ತಾರವನ್ನು ಹೆಚ್ಚಿಸಿವೆ. ಈ ಮುಂದಿನ ಹಾಡು ಪ್ರಶ್ನಾವಳಿಯನ್ನೇ ಮುಂದಿಡುತ್ತದೆ:

ದೇವಿ ನಮ್ಮಯ್ ದೇವರ ಬಂದಾವ ಬನ್ನೀರೆ
ಗುರುವೆ ನಮ್ಮಯ್ ದೇವರ ಬಂದಾವ ಬನ್ನೀರೆ

ಅಂಡಜ ಪಿಂಡಜ ತತ್ತಿಯ ಪಡದಂಥಾ ಪಕ್ಷಿಯ ಗುರತ್ಯಾವದ ಹೇಳಣ್ಣ
ತತ್ತಿ ಒಡದ ನೀರಾತ ನೀರಿಗಿ ಬೇರುಂಟ ನೀರಿನ ಮಾರ್ಯಾವದ ಹೇಳಣ್ಣ
ಮುಗಿಲಿನ್ನ ಮುಗಿದಿತ್ತ ಮುಗಿಲಿಗೇನಾಧಾರ ಇತ್ತ ಏಸ ಗಾವದಿತ್ತ ಹೇಳಣ್ಣ
ಆಕಾಸ ಅಂಬೂದು ಅದ್ಭುತ ಕಾಣಸ್ತೈತಿ ಲೋಕದ ನುಂಗೀತ ನೋಡಣ್ಣ
ಪಕ್ಕನಿಲ್ಲದ ಪಕ್ಷಿ ಪಾತಾಳದಲ್ಲಿತ್ತ ಆಕಾಸಕ ಹಾರೂದ ನೋಡಣ್ಣ
ಆಕಾಸ ಮ್ಯಾಲೊಂದ ಜ್ಯೋತಿ ಬೆಳಕವ್ವ ಕಂಡ್ಯಾ ಯಾತರ ಮೇಲಿತ್ತೊ
ಹೇಳಣ್ಣ
ಹನ್ನೆರಡ ವಾರಿಯ ಮೂವತ್ತೆರಡ ಕಾಯಿಯ ಮರತೇಕ ಮರಯಾವುದ
ಹೇಳಣ್ಣ
ಬಯಲ್ದಿಂದ ಮುಗಿಲಿತ್ತ ಮುಗಿಲಿಗ್ಯೇನ ಆಧಾರ ಇತ್ತ ಏಸ ಗಾವ ಇತ್ತ
ಹೇಳಣ್ಣ
ಭೂಮಿ ಹೊತ್ತ ಮೂಡಿ ಭೂಲೋಕದಲ್ಲಿದ್ದ ಅಂವಗೇನ ಆಧಾರ ಹೇಳಣ್ಣ
ಬಣ್ಣಕ ಚಿನ್ನ ಲೇಸ ಚಿನ್ನಕ ಬಣ್ಣ ಲೇಸ ಬಣ್ಣದ ಗುರುತ್ಯಾವದ ಹೇಳಣ್ಣ

ಅಂತರಂಗದ ವಿಷಯವನ್ನು ಕೆದಕುವ ಹಾಡುಗಳಿಗೂ ಈ ವಲಯದಲ್ಲಿ ಕೊರತೆಯಿಲ್ಲ :

ಅಂತರಂಗದ ಸಂತಿಯ ಬಾಜಾರ
ನೋಡ ನೋಡ ಹುಡಿಕ್ಯಾಡಿ
ಸಂತಿ ತೀರಿತೋ ನಿಶ್ಚಿಂತಾದಿತೋ,
ನಡಿ ಹೋಗುಣ ತಿರಗಿ. [೧೫]

ಮೂರು ದಿನದ ಸಂತೆ ಎನ್ನುವ ಬದುಕಿನ ತಾತ್ಕಾಲಿಕತೆಯನ್ನು ಈ ಸಾಲುಗಳು

೧೪. ಹೇಳಿದವರು: ಕರೆಪ್ಪ ಪೂಜೇರ ಬೀಳಗಿ (ರಚನೆ:ಲಕ್ಷ್ಮಿ ಅಪ್ಪಣ್ಣ ಮಾಸ್ತರ ಕೊಣ್ಣೂರ)

೧೫. ಹೇಳಿದವರು : ಸಿದ್ಧಪ್ಪ ಬಿದರಿ ಬೀಳಗಿ

ಸಮರ್ಥವಾಗಿ ಹಿಡಿದಿಟ್ಟಿವೆ.

ಈ ರೀತಿ ವಿಷಯ ವೈವಿಧ್ಯದಿಂದ ಕೂಡಿದ ಡೊಳ್ಳಿನ ಹಾಡುಗಳು ಒಂದು ಜನಾಂಗ ಬದುಕಿದ ರೀತಿಯ ಪ್ರತಿಬಿಂಬವಾಗಿವೆ. ಹಳೆಯ ಹಾಡುಗಳು ಮರೆಯಾಗುತ್ತಿದ್ದು ಅವುಗಳ ಸಂಗ್ರಹ, ಸಂಪಾದನೆಗಳು ವ್ಯಾಪಕ ರೀತಿಯಲ್ಲಿ ನಡೆಯಬೇಕಾಗಿದೆ. ಕುರುಬ ಜನಾಂಗದ ಇಂಥ ಹಾಡು-ಕಲೆ-ಮತಾಚರಣೆಗಳ ಒಡಲಲ್ಲಿ ಚದುರಿಹೋಗಿರುವ ಅನೇಕ ಜಾನಪದ ಅಂಶಗಳನ್ನು ಸಂಯೋಜಿಸಿ ಈ ಜನಾಂಗ ನಡೆದುಬಂದ ದಾರಿಯನ್ನು ಸ್ಪಷ್ಟವಾಗಿ ಗುರುತಿಸುವ ಬಹುದೊಡ್ಡ ಕೆಲಸ ನಮ್ಮ ಇಂದಿನ ಜಾನಪದ ವಿದ್ವಾಂಸರ ಮುಂದಿದೆ.

ಗೆಳೆತನ ವಿಭಾವ ಸಂ.ಡಾ.ಬಸವರಾಜ ಮಲಶೆಟ್ಟಿ

~~~*****~~~
~~~

ಚಿಕ್ಕಲಿಗರ ಸೋಗು

ಕನ್ನಡ ಜಾನಪದ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸಂಗ್ರಹ, ಸಂಪಾದನೆಗಳು ಬಿರುಸಾಗಿ ಸಾಗಿವೆ. ಅಧ್ಯಯನದಲ್ಲಿ ಶಾಸ್ತ್ರೀಯದೃಷ್ಟಿ ಮೊಳೆತಿದೆ. ಆದರೆ ಜಾನಪದ ಅಭ್ಯಾಸಿಗಳ ದೃಷ್ಟಿ ಇದುವರೆಗೆ 'ಚಿಕ್ಕಲಿಗರ ಸೋಗಿ' *ನತ್ತ ಹರಿದಂತೆ ಕಾಣಲಿಲ್ಲ. ಅನೇಕ ಜನಪದ ಕಲೆಗಳಂತೆ ಪ್ರಕೃತ ಕಲೆಯೂ ನಶಿಸಿಹೋಗುತ್ತಿದೆ. ವಿಕೃತಗೊಂಡೂ ಬಹಳ ದಿನ ಕಳೆದುವು. ಕೇವಲ ಒಂದು ಜನಾಂಗಕ್ಕೆ ಮಾತ್ರ ಸೀಮಿತವಾಗಿದ್ದ ಚಿಕ್ಕಲಿಗರ ಸೋಗು, ಕಾಲಕ್ರಮೇಣ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಆದರೆ ಪ್ರಸಾರ–ಪ್ರದೇಶ ಮಾತ್ರ ಪರಿಮಿತವಾಗಿಯೇ ಉಳಿಯಿತೆಂದು ತೋರುತ್ತದೆ. ವಿಜಾಪುರ ಜಿಲ್ಲೆಯ ಮಹಾಲಿಂಗಪುರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ 'ಚಿಕ್ಕಲಿಗರು' ಎಂಬುದೊಂದು ಜನಾಂಗ ಅಸ್ತಿತ್ವ ಪಡೆದುಕೊಂಡಿದೆ. ಇದು ಅಲೆಮಾರಿ ಜನಾಂಗ. ಎತ್ತಿನ ಕೋಡು ಸವರುವುದು, ಕೊಳಗ ಕಡಿಯುವುದು, ಎಮ್ಮಿ ಬೋಳಿಸುವುದು ಇವರ ಉದ್ಯೋಗ. ಈ ಉದ್ಯೋಗದೊಂದಿಗೆ ಹಳ್ಳಿ ಹಳ್ಳಿ ತಿರುಗುತ್ತಿದ್ದ ಇವರು ತಮ್ಮದೇ ಆದ ಕೊಡುಗೆಯನ್ನು ಜಾನಪದಕಲೆಗೆ ಇತ್ತರು.

ಚಿಕ್ಕಲಿಗರು ತಮ್ಮ ಉದ್ಯೋಗದ ಪ್ರಚಾರದ ಮಾಧ್ಯಮವಾಗಿ ಈ ಕಲೆಯನ್ನು ಬೆಳೆಯಿಸಿಕೊಂಡರೋ ಅಥವಾ ಇದೂ ಒಂದು ಅವರಿಗೆ ಹೊಟ್ಟೆಹೊರಕೊಳ್ಳುವ ಸಾಧನವಾಗಿದ್ದಿತೋ ಹೇಳುವುದು ಕಷ್ಟ. ಚಿಕ್ಕಲಿಗರ ಸೋಗು ಇತ್ತೀಚಿನ ದಿನಮಾನಗಳಲ್ಲಿ ಕಡಿಮೆಯಾಗುತ್ತಿರುವುದರಿಂದ ಹಾಗೂ ಅದು ತನ್ನ ಮುಂಚಿನ ಸ್ವರೂಪವನ್ನು ಕಳೆದುಕೊಳ್ಳುತ್ತಿರುವುದರಿಂದ ಈ ಜಾನಪದಕಲೆಯ ಉಗಮ, ಉದ್ದೇಶ ಕುರಿತಾದ ನಿಖರ ಹೇಳಿಕೆ ಕಷ್ಟಸಾಧ್ಯ.

ಗಂಡಸರು ತಮ್ಮ ಉದ್ಯೋಗಕ್ಕಂಟಿಕೊಂಡು ಹಳ್ಳಿಗಳಲ್ಲಿ ಓಣಿಓಣಿ ತಿರುಗುತ್ತಿರುವಾಗ ಆ ಕುಟುಂಬಗಳಿಗೆ ಸಂಬಂಧಿಸಿದ ಹೆಂಗಸರು ಈ ಸೋಗು ಹಾಕುತ್ತಿದ್ದರಂತೆ. ಇದರಲ್ಲಿ ಪ್ರಮುಖವಾಗಿ ಎರಡು ಅಂಗಗಳನ್ನು ಕಾಣಬಹುದು. ಒಂದು ನಟನೆ, ಇನ್ನೊಂದು ಹಾಡು. ಮುಂದೆ ಇಬ್ಬರು ಹೆಣ್ಣುಮಕ್ಕಳು ಹಾಡುತ್ತಿದ್ದರು. ಇವರು ಸೆರಗನ್ನು ಉಪರಾಟಿಯಾಗಿ (ಗುಜ್ಜರಂತೆ) ಹೊತ್ತು ಆ ಸೆರಗಿನ ಅಂಚನ್ನು ನಡುವಿಗೆ ಸಿಕ್ಕಿಸುತ್ತಿದ್ದರು. ಇವರಿಬ್ಬರೂ ಒಂದು ಮೊಳದಳತೆಯ ಕಟ್ಟಿಗೆಯನ್ನೋ ದಂಟನ್ನೋ

* ಇದನ್ನು 'ಚಿಕ್ಕಲಿಗರ ವೇಷ' ಎಂದೂ ಕರೆಯಬಹುದು. ಆದರೆ ಆಡುನುಡಿಯಾಗಿ ಬಳಕೆಯಲ್ಲಿರುವ 'ಚಿಕ್ಕಲಿಗರ ಸೋಗು' ಎಂಬುದನ್ನೇ ಲೇಖನದುದ್ದಕ್ಕೂ ಬಳಸಲಾಗಿದೆ

ಕೈಯಲ್ಲಿ ಹಿಡಿಯುತ್ತಿದ್ದರು. ಇವರ ಹಿಂದೊಬ್ಬ ತುಂತುಣಿ ಹಿಡಿದುಕೊಂಡಿರುತ್ತಿದ್ದ. ಜಾಕೀಟು ಹಾಕಿ, ಧೋತ್ರ ಉಟ್ಟು ತಲೆಗೆ ರುಮಾಲು ಸುತ್ತಿರುತ್ತಿದ್ದ ಇವನು, ಹೆಣ್ಣು ಮಕ್ಕಳು ಹಾಡುತ್ತಿದ್ದಂತೆ ಹಿಂದಿನಿಂದ ಜೀ ಜೀ ಎಳೆಯುತ್ತಿದ್ದ. ಇವರು ಮನೆ ಮನೆಗೆ ಹೋಗಿ ಹಾಡಿ ಜೋಳವನ್ನೋ ಹಣವನ್ನೋ ತೆಗೆದುಕೊಳ್ಳುತ್ತಿದ್ದರು. ವಿಷಯ ನಿರೂಪಣೆಯಲ್ಲಿ ಇವರ ಹಾಡುಗಳು ನಾನಾ ಬಗೆಯಾಗಿವೆ. ಶೃಂಗಾರ, ಕೌಟುಂಬಿಕ, ವಿಡಂಬನಾತ್ಮಕ ಮುಂತಾಗಿ ಹಲವು ವಿಧದ ಹಾಡುಗಳಿಗೆ ಇಲ್ಲಿ ಎಡೆ ದೊರೆತಿದೆ. ಕಾಲಕ್ಕೆ ತಕ್ಕಂತೆ ಇವರು ಹಾಡುಗಳನ್ನು ಹೊಸೆಯುತ್ತಿದ್ದರು. ಕಾಂಗ್ರೆಸ್ಸು, ಖಾದಿಗಳನ್ನು ಕುರಿತಾಗಿಯೂ ದೇಶದ ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಇವರು ಹಾಡುತ್ತಿದ್ದರಂತೆ.

ಇವರು ಹಾಡುತ್ತಿದ್ದ ಹಾಡುಗಳು ಹೆಚ್ಚಾಗಿ ಶೃಂಗಾರ ಮತ್ತು ಹಾಸ್ಯರಸಗಳಿಗೆ ಪೋಷಕಗಳಾಗಿರುತ್ತಿದ್ದುದರಿಂದ ಮರುಳಗೊಂಡ ಜನ, ಇವರು ಇದ್ದಲ್ಲೆಲ್ಲ ಗುಂಪುಗೂಡಿ ನಿಲ್ಲುತ್ತಿದ್ದರು. ಇವರು ಓಣಿಗುಂಟ ಸಾಗಿದಂತೆಲ್ಲ ಜನಸ್ತೋಮ ಇವರನ್ನು ಹಿಂಬಾಲಿಸುತ್ತಿತ್ತು. ಹಾಡಿಗೆ ತಕ್ಕಂತೆ ಹೆಜ್ಜೆ ಹಾಕುತ್ತ ಕಟ್ಟಿಗೆಯನ್ನು ತೋರು ಬೆರಳು ಮತ್ತು ಹೆಬ್ಬೆರಳುಗಳ ಮಧ್ಯೆ ತೂಗುಬಿಟ್ಟು ಉಳಿದ ಮೂರೂ ಬೆರಳುಗಳನ್ನು ಮೇಲಕ್ಕೆಬ್ಬಿಸಿ, ತಮ್ಮಷ್ಟಕ್ಕೆ ತಾವೇ ಸುತ್ತುವರಿದು ಭಾವಕ್ಕೆ ತಕ್ಕಂತೆ ಧ್ವನಿಯ ಏರಿಳಿತ ನೀಡಿ ಹಾಡುತ್ತಿದ್ದರೆ ನೋಟಕರ ರೆಪ್ಪೆ ಅಲುಗಾಡುತ್ತಿರಲಿಲ್ಲ. ಮುಂದೆ ಹಾಡುವವರು ತಿರುಗಿದತ್ತ ತಿರುಗಿ, ನಟಿಸಿದಂತೆ ನಟಿಸಿ ನಡುನಡುವೆ ಹಾಸ್ಯದ ಚಟಾಕಿ ಹಾರಿಸುವ ತುಂತುಣಿಯವನೂ ಗಮನಸೆಳೆಯುತ್ತಿದ್ದ. ಇವರ ಸೋಗಿನಲ್ಲಿ ಹಾಡು ಮುಖ್ಯವೇ ಹೊರತು ನಟನಾಕೌಶಲ್ಯವಲ್ಲ. ಅಂತೂ ಸಂಜೆ, ಮುಂಜಾವುಗಳಲ್ಲಿ ಬಯಸಿದರೆ ಸಿಗಲಾರದಂಥ ಮನರಂಜನೆ ಮನೆಬಾಗಿಲಿಗೆ ಬಂದು ಹಳ್ಳಿಗರೆದುರು ನಿಲ್ಲುತ್ತಿತ್ತು. ಇದು ಇಷ್ಟು ಮೂಲದಲ್ಲಿದ್ದ ಚಿಕ್ಕಲಿಗರ ಸೋಗಿನ ಸ್ವರೂಪ. ಇಲ್ಲಿ ಗೀಗೀ ಮೇಳದ ಪ್ರಭಾವವಿರುವಂತೆ ಕಾಣುತ್ತದೆ. ಸಾಕ್ಷಿಯಾಗಿ ತುಂತುಣಿ ಮತ್ತು ಹಿಮ್ಮೇಳದವನ ಜೀ ಜೀ ಸ್ವರ ಎರಡೇ ಸಾಕು. ಲಾವಣಿಸಂಪ್ರದಾಯದ ಒಂದು ಪರಿಚ್ಛಾಯೆ ಎನ್ನುವಂತೆ ಚಿಕ್ಕಲಿಗರು ತಮ್ಮದೇ ಆದ ರೀತಿಯಲ್ಲಿ ಈ ಪ್ರಭೇದವನ್ನು ರೂಢಿಸಿಕೊಂಡಂತೆ ತೋರುತ್ತದೆ. ಲಾವಣಿಪದಗಳಲ್ಲಿರುವ ಸಾಹಿತ್ಯಸೌರಭವಾಗಲಿ, ಆ ಮೇಳಗಳಲ್ಲಿ ಕಾಣುವ ಗಂಭೀರ ಡೌಲಾಗಲಿ ಇಲ್ಲಿ ಸಿಗಲಿಕ್ಕಿಲ್ಲ. ಆದರೆ ಮನ ಹಿಡಿಸಿದಷ್ಟು ಮೊರದಲ್ಲಿ ಜೋಳ ನೀಡಿ ಕಣ್ತುಂಬ ಮನರಂಜನೆ ಪಡೆಯುವವರಿಗೆ ಇವರು ಹೇಗಿದ್ದರೂ ಚೆಂದ.

ಆದರೆ ಕಾಲಾಂತರದಲ್ಲಿ ಇದು ಕೇವಲ ಅಣಕವಾಗಿ ಮಾರ್ಪಟ್ಟು, ಮೂಲ ಸ್ವರೂಪ ಮಾಯವಾದದ್ದು ದುರ್ದೈವದ ಸಂಗತಿ. ಈ ಸೋಗು ಕಾಲಗತಿಸಿದಂತೆ ಕೇವಲ ಚಿಕ್ಕಲಿಗರಿಗೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ. ಮಹಾಲಿಂಗಪುರದ ಸುತ್ತಮುತ್ತಲಿನ ಹಳ್ಳಿಯ ಚಿಕ್ಕಲಿಗೇತರ ಉತ್ಸಾಹಿ ತರುಣರನೇಕರ ಅನುಕರಣೆಗೆ ಮೊದಲುಮಾಡಿ ದೊಡ್ಡ

ದೊಡ್ಡ ಹಬ್ಬಗಳಲ್ಲಿ ತಮ್ಮ ಖುಷಿಗೆ ಒಂದು ಮಾಧ್ಯಮವನ್ನಾಗಿ ಮಾಡಿಕೊಂಡರು. ಈ ಕಲೆ ಇವರಿಗೆ ಕೇವಲ ಅಣಕಾಗಿ ನಿಂತಿತು. ಕೇವಲ ಅವಹಾಸ್ಯವೇ ಮುಖ್ಯವಾಗಿ ಕೇವಲ ಬೀದಿಮನರಂಜನೆ ಎನಿಸಿತು. ಈಗ ಚಿಕ್ಕಲಿಗರ ಸ್ತ್ರೀಯರಂತೆ ಉಳಿದ ಸ್ತ್ರೀಯರು ಭಾಗವಹಿಸುವುದಿಲ್ಲ. ಗಂಡಸರಲ್ಲೇ ಒಬ್ಬರು ಸ್ತ್ರೀವೇಷ ಹಾಕುತ್ತಾರೆ. ಹರಕುಸೀರೆ (ಉತ್ತರ ಕರ್ನಾಟಕದ 'ಪಡಕಿ')ಯನ್ನು ಉಟ್ಟು, ಸೆರಗನ್ನು ಉಪರಾಟಿಯಾಗಿಯೇ ಹೊದೆಯುತ್ತಾರೆ. ಇನ್ನೊಂದು ವಿಶೇಷವೆಂದರೆ ಕುಪ್ಪಸವನ್ನು ಹಿಂದುಮುಂದಾಗಿ ತೊಡುವುದು. ಹಾಗೆ ತೊಟ್ಟ ಕುಪ್ಪಸವನ್ನು ಉದ್ದೇಶಪೂರ್ವಕ ಸಭಿಕರಿಗೆ ಕಾಣುವಂತೆ ಮಾಡಲು ಪ್ರಯತ್ನಿಸುವುದೊಂದು ಮೋಜಿನ ಸಂಗತಿ. ಇವರಿಗೂ ಕೈಯಲ್ಲಿ ಕಟ್ಟಿಗೆಯೋ ದಂಟೋ ಇರುತ್ತದೆ. ಇನ್ನು ಹಿಮ್ಮೇಳದವನು ಅಂಗಿತೊಡದೆ ಹರಕು ಜಾಕೀಟೊಂದನ್ನು ಹಾಕಿಕೊಂಡು, ಅದಕ್ಕೆ ಬಿರಡಿ ಇಲ್ಲದೆ ಹಾಗೆ ಬಿಟ್ಟಿರುತ್ತಾನೆ. ಒಬ್ಬ ಧೋತ್ರವನ್ನು (ಗಂಡು ಗಚ್ಚೆ ಹಾಕಿ) ಮೇಲೆ ಸಿಕ್ಕಿಸಿರುತ್ತಾನೆ. ನಗೆತರುವ ಮುಖ್ಯಭೂಷಣವಸ್ತುವೆಂದರೆ ಇವನು ತಲೆಗೆ ಸುತ್ತಿರುವ ಹರಕುಸೀರೆ. ಮೊಳಕಾಲಿಗೆ ಬಡಿಯುವಷ್ಟುದ್ದು ಬಿಟ್ಟಿರುವ ಶಮನ, ಪ್ರೇಕ್ಷಕರಿಂದ 'ಶಬ್ಬಾಶ್' ಹೇಳಿಸಿಕೊಳ್ಳುತ್ತದೆ. ಇವನ ತುಂತುಣಿಯೋ ! ಒಂದು ಹರಕು ಮಾವಿನ ಕರಂಡಿಗೆಯನ್ನೋ ಸಿಂದಿಹೆಡಿಗೆಯನ್ನೋ ತೆಗೆದುಕೊಂಡು ಅದಕ್ಕೊಂದು ಬಡಿಗೆ ಸಿಕ್ಕಿಸಿ ಒಂದು ಚರಿಯನ್ನು ಬಿಗಿದರೆ ಸುಶ್ರಾವ್ಯ ಸಂಗೀತದ ವಾದ್ಯವಾಯಿತೆಂದು ನಾವು ಕಲ್ಪಸಿಕೊಳ್ಳಬೇಕು!! ಹಾಡು ಹೇಳುತ್ತ ಸ್ತ್ರೀವೇಷಧಾರಿಗಳು ಹುಬ್ಬುಹಾರಿಸುವುದು, ಇನ್ನಿತರ ಅಂಗಚೇಷ್ಟೆ ಮಾಡುವುದು, ಗುರುತಿನವರನ್ನು ಕುರಿತು ಉತ್ಥಾನ ಶೃಂಗಾರದ ಮಾತುಗಳನ್ನಾಡುವುದು – ಇವೆಲ್ಲ ಮಕ್ಕರಹರೆ ತುಳುಕುತ್ತಿರುವವರಿಗೆ ಮಹದಾನಂದ ನೀಡುತ್ತವೆ.

ಈ ರೀತಿ ಇಂದು ಇವರು ಸೋಗು ಹಾಕುವುದು ಕೇವಲ ಹಬ್ಬಗಳಲ್ಲಿ, ಉದ್ಯೋಗವೆಂದು ಖಂಡಿತ ಅಲ್ಲ. ವಿಶೇಷವಾಗಿ ಯುಗಾದಿಯಲ್ಲಿ ಈ ಮುಂಚೆ ಹೇಳಿದ ಪ್ರದೇಶದಲ್ಲಿ ಈ ಸೋಗಿನ ಪರಮೋಚ್ಚ ಮಟ್ಟವನ್ನು ಗುರುತಿಸಬಹುದು.

ಚಿಕ್ಕಲಿಗರ ಹಾಡುಗಳು ಭಾವನಿರೂಪಣೆಯಲ್ಲಿ ತ್ರಿಪದಿಗಳನ್ನು ಹೋಲುತ್ತವೆ. ಮೊದಲು ಸ್ತ್ರೀಯರೇ ಹಾಡುತ್ತಿದ್ದರು ಎಂಬ ಕಾರಣವಾಗಿ ಹೀಗಾಗಿರಬೇಕು. ಈ ಗೀತಗಳು ಬಹುಪಾಲು, ಹೆಣ್ಣಿನ ಆಶೆ–ಅನಿಸಿಕೆಗಳನ್ನೇ ಹಿಡಿದಿಟ್ಟಿವೆ. ತ್ರಿಪದಿಗಳಂತೆ ಬಿಡಿಬಿಡಿಯಾದ ಪದ್ಯಗಳಿವು. ಕ್ವಚಿತ್ತಾಗಿ ಒಂದೇ ಭಾವ ೩–೪ ಪದ್ಯಗಳವರೆಗೆ ಹರಿದುಕೊಂಡು ಹೋಗಬಹುದು. ನಾನಿಲ್ಲಿ ಸಂಗ್ರಹಿಸಿ ವಿಶ್ಲೇಷಿಸಿದ ಹಾಡುಗಳು ಎಂದು ಹುಟ್ಟಿಕೊಂಡವು ಎಂಬ ನಿಷ್ಕರ್ಷೆಗಾಗಲಿ, ಇವೆಲ್ಲ ಮೂಲತಃ ಚಿಕ್ಕಲಿಗರೇ ಹಾಡುತ್ತಿದ್ದ ಹಾಡುಗಳೋ ಅಥವಾ ತೀರ ಇತ್ತೀಚೆಗೆ ಹುಟ್ಟಿಕೊಂಡವುಗಳೋ ಎಂಬಂತಹ ಖಚಿತ ಅಭಿಪ್ರಾಯಕ್ಕಾಗಲಿ ಈಗಿರುವ ಸಾಧನಸಾಮಗ್ರಿ ಸಾಲದು. ಮೊದಮೊದಲು

ಗಂಭೀರಭಾವದ ಹಾಡುಗಳನ್ನು ಚಿಕ್ಕಲಿಗರು ಹಾಡುತ್ತಿರಬಹುದಾದರೂ ಚಿಕ್ಕಲಿಗರಲ್ಲದವರಿಂದ ಅಣಕು ಮೊದಲಾದ ಮೇಲೆ ನಗೆಯೇ ಹಾಡುಗಳ ಕೇಂದ್ರ ವಸ್ತುವಾಯಿತು. ಹೀಗೆಂದು ಇವನ್ನು ತಳ್ಳಿಹಾಕುವಂತಿಲ್ಲ. ಸಾಹಿತ್ಯ ಹೇಗೇ ಇರಲಿ, ಇವರೂ ಜನಪದ ಜೀವನದ ಒಂದಂಗವಾಗಿ ತಮ್ಮ ಅನಿಸಿಕೆಗಳಿಗೆ ಪ್ರತಿರೂಪ ಕೊಟ್ಟು ಪ್ರತಿಭಾಶಕ್ತಿಯನ್ನು ಇಂದಿಗೂ ತೋರ್ಪಡಿಸುತ್ತಿರುವುದು ಮೆಚ್ಚಬೇಕಾದ ವಿಷಯ. ರೂಪ ವ್ಯತ್ಯಾಸವಾಗಿದ್ದರೂ ಮುಂಚಿನ ಹೆಸರನ್ನೇ (ಚಿಕ್ಕಲಿಗರ ಸೋಗು–ಚಿಕ್ಕಲಿಗರ ಹಾಡು) ಉಳಿಸಿಕೊಂಡು ಬಂದು ಅಭ್ಯಾಸಕ್ಕಿತ್ತ ಪ್ರೇರಣಶಕ್ತಿಯನ್ನು ಕಡೆಗಣಿಸುವಂತಿಲ್ಲ.

ಕೌಟುಂಬಿಕ: ವ್ಯಕ್ತಿ–ಕುಟುಂಬ–ಸಮಾಜ ಈ ಮೂರೂ ಜೀವನವನ್ನು ರೂಪಿಸುವಲ್ಲಿ ಬಹು ಪ್ರಮುಖ ಪಾತ್ರವಹಿಸುತ್ತವೆ. ಕುಟುಂಬದಲ್ಲಿ, ಸಮಾಜದಲ್ಲಿ ಬಾಳುತ್ತಿರುವ ವ್ಯಕ್ತಿಯ ಗುಣ–ಸ್ವಭಾವಗಳ ಅಭಿವ್ಯಕ್ತಿ, ಪಡೆದ ಅನುಭವಗಳಿಂದ ನಾನಾ ವಿಧವಾಗಿ ರೂಪಿತಗೊಂಡು ಪರಿಸರದ ಹಲವು ಮುಖದ ದರ್ಶನ ಒದಗುತ್ತದೆ. ಸಂತೋಷ, ಕೋಪ, ಈರ್ಷೆ ಮೊದಲಾದ ಗುಣಗಳೆಲ್ಲ ಕೇವಲ ಎದೆಯ ಗಹ್ವರದಲ್ಲಿ ಉಳಿಯುವುದಿಲ್ಲ. ಜಾನಪದರ ಎದೆಯಾಳದಿಂದ ಹೊರಟ ಅನಂತ ಭಾವನೆಗಳು ನಾದ ಸಹಿತ ಹಾಡುಕಟ್ಟಿ ನಿತ್ಯ ಗುಣಗುಣಿಸುವಂತೆ ಮಾಡುತ್ತವೆ. ಒಂದು ಕಡೆಗೆ ನಿಶ್ಚಿತವಾಗಿ ನಿಲ್ಲಲಾರದೆ, ಸುವ್ಯವಸ್ಥಿತವಾದ ಬದುಕು ಸಾಗಿಸಲಾರದ ಈ ಜನತೆ, ತಮ್ಮ ದುಡಿತಕ್ಕೆ ತಕ್ಕ ಪ್ರತಿಫಲ ನೀಡಿ ಸಲಹುವ ಹಳ್ಳಿ ಸಮಾಜವನ್ನು ಕಣ್ಣಿಟ್ಟು ಗಮನಿಸಿ. ಅದರಲ್ಲಡಗಿರುವ ಭಾವತರಂಗಗಳನ್ನು ಬಯಲಿಗೆಳೆದಿದೆ.

ಅಣ್ಣತಮ್ಮಾರೊಳಗ ಸಣ್ಣಾಕಿ ನಾ ತಂಗಿ
ಉಣ್ಣಾಕಿ ತಿನ್ನಾಕಿ ಹಗಲೆಲ್ಲಾ
ಉಣ್ಣಾಕಿ ತಿನ್ನಾಕಿ ಹಗಲೆಲ್ಲಾ
ಪಿರ್ತಿ ಎನಮ್ಯಾಲಾ

ಎನ್ನುವ ಈ ಪದ್ಯದಲ್ಲಿ ಚಿಕ್ಕವಳ ಅಭಿಮಾನದ ಮನೋಧರ್ಮ ಯಾವೊಂದು ಅಲಂಕಾರದ ಆಡಂಬರವಿಲ್ಲದೆ ಎಷ್ಟೊಂದು ಶಕ್ತಿಯುತವಾಗಿ ಮೂಡಿನಿಂತಿದೆ ! ಮನೆಯಲ್ಲಿ ನಾಲ್ಕೈದುಜನ ಅಣ್ಣತಮ್ಮಂದಿರಿರಬಹುದು. ಇವಳು ಚಿಕ್ಕವಳು. ತಂದೆ–ತಾಯಿಗಳಿಗೆ, ಅಣ್ಣ–ಅಕ್ಕಂದಿರಿಗೆ ಚಿಕ್ಕವಳೆಂದರೆ ಅಕ್ಕರೆ. ಇವಳು ಏನು ಉಟ್ಟುತೊಟ್ಟರೂ ಎಷ್ಟು ತಿಂದರೂ ಇವರಿಗೆ ಸಾಕಿಲ್ಲ. ಅವಳಿಗೊದಗುವ ಸೌಕರ್ಯ ಸಲುಗೆ ಮತ್ತಾರಿಗೂ ದೊರೆಯುವುದಿಲ್ಲ. ಕುಳಿತರೂ ನಿಂತರೂ ಎಲ್ಲರ ಪ್ರೀತಿಯ ದೃಷ್ಟಿ ಇವಳ ಮೇಲೆ ಹರಿದಾಡಿ ಎಲ್ಲರ ಕಣ್ಮಣಿಯಾಗಿ ಬೆಳೆಯುತ್ತಾಳೆ. ಬೆಳೆದು ದೊಡ್ಡವಳಾಗಿ ಗಂಡನಮನೆಗೆ ಹೋಗುವವರೆಗೂ ಇವಳು ಆ ಮನೆಯ ಅಚ್ಚೈಯ ಮಗಳು. ಇಂಥವಳು ಹೇಳುವ ಈ

ಹಾಡು ಸಹಜಾಭಿವ್ಯಕ್ತಿಗೊಂದು ಸೊಗಸಾದ ನಿದರ್ಶನ.

ದೂರದ ಗಂಡನ ಮನೆಯಲ್ಲಿದ್ದ ಹೆಣ್ಣುಮಗಳೊಬ್ಬಳು ಹೆಮ್ಮೆಯಿಂದ ತನ್ನ ತೌರಿನವರನ್ನು ಕುರಿತು ಓರಿಗೆಯವರ ಮುಂದೆ ಹೀಗೆ ಹೇಳುತ್ತಾಳೆ :

ವಾರಿಗಿ ಗೆಳತ್ಯಾರ ಮುಂದ ನಾರಿ ಹೇಳತಾಳ
ನನ್ನ ತವರ ದೂರ
ನನ್ನ ತವರ ದೂರ
ಕರಿಯಾಕ ಬಂದಾರ ತವರವರ

ಮೇಲುನೋಟಕ್ಕೆ ಈ ಪದ್ಯ ಬರಡಾಗಿ ಕಂಡರೂ ಕೊನೆಯ ಭಾಗ ಧ್ವನಿಪೂರ್ಣವಾಗಿ ನಿಂತಿದೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಮಾತು ಸತ್ಯವಾದರೂ ತೌರಿನತ್ತ ಇವಳ ಸೆಳೆತ ಇದ್ದೇ ಇರುತ್ತದೆ. ತಾಯಿ ಇರುವವರೆಗೆ, ತಾಯಿ ತೀರಿದ ಮೇಲೂ ಅಣ್ಣ-ತಮ್ಮಂದಿರಲ್ಲಿ ಹೃದಯವಂತಿಕೆ ಇದ್ದರೆ ತೌರಿನ ಪ್ರೀತಿಯ ಝರಿ ಬತ್ತುವುದಿಲ್ಲ. ಅಂತೆಯೇ ತಾನು ಇಷ್ಟು ದೂರವಿದ್ದರೂ ಕರೆಯಲು ಬಂದಿದ್ದಾರೆ ಎಂಬ ಒಂದೇ ಒಂದು ಮಾತಿನಲ್ಲಿ, ಮುಂದೆ ತನ್ನ ತೌರಿನ ಕಳ್ಳ-ಬಳ್ಳಿಯಲ್ಲಿ ಬೆರೆತು ಪಡೆಯಬಹುದಾದ ಸುಖಾನುಭವವೆಲ್ಲ ಅಡಗಿ ಕುಳಿತಿದೆ.

ಕರುಣೆಯ, ಕಕ್ಕುಲಾತಿಯ ಪರಮಸೀಮೆಯನ್ನು ತಲುಪಬಲ್ಲ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಈರ್ಷೆ, ಕೋಪ, ಅಸಹನೆ – ಇವುಗಳೂ ಅಷ್ಟೇ ಸಹಜವಾಗಿ ಮನೆ ಮಾಡಿಕೊಂಡು ಆಡಳಿತ ಸಾಗಿಸುತ್ತವೆ.

ಆರ ತಿಂಗಳ ಹಿಂದ ಕೊಟ್ಟಿನ್ನಿ ನಾನು
ಆರಪಾವ ಹಿಟ್ಟಾ
ಆರಪಾವ ಹಿಟ್ಟಾ
ಇನ್ನ ಆದ್ರೂ ಕೊಡಲಿಲ್ಲ ಪಡಿಸೆಂಟಾ

ಇವಳ ಈ ಅಸಹನೆಗೆ ಕಾರಣವೆಷ್ಟು ಚಿಕ್ಕದು ! ಹಿಟ್ಟು ಕಡಿಮೆ ಬಿದ್ದಾಗ ಓಣಿಯಲ್ಲಿ ಯಾವಳೋ ಒಬ್ಬಳು ಇವಳ ಕಡೆಯಿಂದ ಕೇವಲ ಅರಪಾವು ಹಿಟ್ಟು 'ಕಡ' ಒಯ್ದಿದ್ದಾಳೆ. ಆರು ತಿಂಗಳಾದರೂ ಹಿಂದಿರುಗಿಸಿಲ್ಲ (ಅವಳೂ ಗಟ್ಟಿ!). ನಿಯತ್ತಿಲ್ಲದ ಅವಳ ನಡತೆ, ಇವಳಿಗೆ ಬೇಸರ ತಂದಿದೆ. ಪರಿಣಾಮವಾಗಿ ಅಸಹನೆ ಭುಗಿಲ್ಲೆಂದು ಹಳ್ಳಿಗೆ ವಿಶಿಷ್ಟವಾದ ಮುತ್ತೊಂದು ಬಾಯಿಂದ ಉದುರಿ ದೇಶಿಯತೆಯ ನಿಜವಾದ ಅರಿವು ಹಾಡು ಕಟ್ಟುವ ಕೈಗೆ ಚೆನ್ನಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ.

ಮೊದಲಗಿತ್ತಿಯಾಗಿ ಮನೆಗೆ ಬರುವವಳು ಹಾಸಿಗೆ ಸುರಳಿ, ಕೊಡಪಾನಗಳ ಸಂಗಡ ಟ್ರಂಕೊಂದನ್ನು ಗಂಡನಮನೆಗೆ ತರುತ್ತಾಳೆ. ಅದರಲ್ಲಿ ಅವಳ ಸೀರೆ, ಕುಪ್ಪಸ, ವಸ್ತು-ಒಡವೆ. ಟ್ರಂಕಿಗಿರುವ ಮಟ್ಟಕೀಲಿ ಅವಳ ಖಾಸಾ ಆಸ್ತಿಯನ್ನು ಸದಾಕಾಲ ಕಾಯುತ್ತದೆ. ಯಾರೂ ಅದನ್ನು ಮುಟ್ಟವಂತಿಲ್ಲ. ನಿಜಸಂಗತಿ ಹೀಗಿದ್ದರೂ ತೌರ ಮನೆಗೆ ಬಂದಿದ್ದವಳೊಬ್ಬಳು

ತೌರಮನಿಗೊಸ್ತಾ ತರಲಿಲ್ಲ ನಾನು
ತಂಗಿಗಿ ಇಡಿಸ್ಯಾಳವ್ವ ತಗದ ಕೀಲಿ
ತಂಗಿಗಿಇಡಿಸ್ಯಾಳವ್ವ ತಗದ ಕೀಲಿ
ಎಂಥಾ ಹೊಯ್‌ಮಾಲಿ

ಎಂದು ಚಡಪಡಿಸುತ್ತಿದ್ದಾಳೆ. ಗಂಡನ ಮನೆಯವರ ಮೇಲೆ ವಿಶ್ವಾಸವಿಟ್ಟು ಒಡವೆಗಳನ್ನಿಟ್ಟ ಟ್ರಂಕನ್ನು ಅಲ್ಲಿಯೇಬಿಟ್ಟು ತೌರಿಗೆ ಬಂದಳು. ಅವಳ ಒಡವೆಗಳನ್ನು ಯಾರೂ ಎತ್ತಿ ಮಾರಿಲ್ಲ, ಹಾಳೂಮಾಡಿಲ್ಲ. ಓರೆಗಿತ್ತಿ ತನ್ನ ತಂಗಿಗೆ ಕೀಲಿ ಮುರಿದು ಇವಳ ಒಡವೆ ಇಡಿಸಿದ್ದೇ ಈ ಕೋಪಕ್ಕೆ ಕಾರಣ. ತಾನಿಲ್ಲದಾಗ ಕೀಲಿಮುರಿದು ಒಡವೆ ಬಳಸಿದರೆ ತಡೆದುಕೊಂಡಾಳೆ ? 'ಹೊಯ್‌ಮಾಲಿ' ಎಂದು ಬೈದು ಹಗರಣಕ್ಕೆ ಪೀಠಿಕೆ ಹಾಕುತ್ತಾಳೆ. ಹಳ್ಳಿಯ ಹೆಣ್ಣುಮಕ್ಕಳ ಜೀವನದ ಸ್ವಲೋಕನೀತಿ ಚೆನ್ನಾಗಿ ಪ್ರತಿಪಾದನೆಗೊಂಡಿದೆ ಇಲ್ಲಿ.

ಜಾತ್ರೆಯೆಂದರೆ ಹಳ್ಳಿಗರಿಗೆ ಎಲ್ಲಿಲ್ಲದ ಸಡಗರ. 'ಊರಿನ ಸೊಕ್ಕು ಮುರಿಯಲು ಜಾತ್ರೆ ಮಾಡಬೇಕು, ಗಂಡಿನ ಸೊಕ್ಕು ಮುರಿಯಲು ಮದುವೆ ಮಾಡಬೇಕು' ಎಂಬ ಮಾತಿದ್ದರೂ ಹಳ್ಳಿಗರಿಗೆ ಇವುಗಳಲ್ಲೇ ಅಖಂಡತೃಪ್ತಿ. ವರ್ಷವಿಡಿ ದುಡಿಯುವ ಜೀವಿಗಳಿಗೆ ನಾಲ್ಕಾರುದಿನ ಬಿಡುವು ದೊರೆಯುವುದು ಜಾತ್ರೆಯ ಸಂದರ್ಭದಲ್ಲಿ. ಹೊಸ ಅರಿವೆಯುಟ್ಟು ನಕ್ಕು ನಲಿಯುವುದು ಈ ಕಾಲದಲ್ಲಿ ಮಾತ್ರ. ಮನೆಯವರು ತಂದುಕೊಡುವ ಅರಿವೆಗಳಲ್ಲದೆ ತಮ್ಮ ಸ್ವಂತ ಹಣದಿಂದಲೂ ಅರಿವೆ ಹೊಲಿಸಿಕೊಳ್ಳುವರು. ವರ್ಷವಿಡಿ ಪ್ರಯತ್ನಮಾಡಿ ಅಷ್ಟಿಷ್ಟು 'ಇಡಗಂಟು' ಮಾಡಿಕೊಂಡು ವರ್ಷದ ಕೊನೆಯಲ್ಲಿ ಅದನ್ನು ಹೊರಹಾಕಿ ಮನಮೆಚ್ಚುವ ಅರಿವೆ ಹಾಕಿಕೊಳ್ಳವುದು, ವಸ್ತ್ರ-ಒಡವೆ ಮಾಡಿಸಿಕೊಳ್ಳುವುದು ಸರ್ವೇ ಸಾಮಾನ್ಯ.

ಜಾತರಿ ಮುಂದ ಜಮಾ ಮಾಡಿ ನಾ
ಜರದ ಕುಬಸ ಬೇಕ ತೊಡಲಾಕ
ಜರದ ಕುಬಸ ಬೇಕ ತೊಡಲಾಕ

ಬಿಚ್ಚಿ ಉಡಲಾಕ

ಜರದ ಕುಪ್ಪಸ ತೊಟ್ಟು ಸಂತೋಷಪಡಲು ತಾನೇ ಸ್ವತಃ ಹಣವನ್ನು ಜಮಾ ಮಾಡಿಕೊಂಡಿದ್ದಾಳೆ ಇಲ್ಲಿ. ಇನ್ನು ಆ ಸಂಭ್ರಮದ ಸಾರ್ಥಕತೆಯಾಗುವುದು ಜಾತ್ರೆಯಲ್ಲಿ. ಜಾತ್ರೆಗಾಗಿ ನಾನಾ ರೀತಿಯ ತಿಂಡಿ–ತಿನಿಸುಗಳ ಮೆರವಣಿಗೆ ಹೇಗೆ ಸಾಗಿದೆ ನೋಡಿ :

ಕರದ ಕರಚಿಕಾಯಿ ಕಂಬಳಿ ಮೂಲ್ಯಾಗ ಹಾಕಬ್ಯಾಡ
ಇಲಿಗಿಲಿ ಕಡದಿತ ಮಂದೀದು
ಇಲಿಗಿಲಿ ಕಡದಿತ ಮಂದೀದು
ದಗದ್ಹೆಂತಾದು

ಮಾದೇಲಿ ಉಂಡಿ ಮತ್ತಟ ಮಾಡಿಕ್ವಾ
ಒತಾಟಿ ಕುತಕೊಂಡ ತಿನ್ನೂದು
ಒತಾಟಿ ಕುತಗೊಂಡ ತಿನ್ನೂದು
ಅದಕೇನಾಗೂದು

ಚಜ್ಜಿರೊಟ್ಟಿ ಚವಳಿಕಾಯಿ ಎಣ್ಣೆಹಚ್ಚಿದಬದನಿಕಾಯಿ
ಈಗ ಬೇಕ ಒಂದ ಯೇಳೆಂಟಾ
ಈಗ ಬೇಕ ಒಂದ ಯೇಳೆಂಟಾ
ಹತ್ತ ಹದಿನೆಂಟಾ

ಈ ಪದ್ಯಗಳಲೆಲ್ಲ ಚಿಕ್ಕಲಿಗರ ಜೀವನರೀತಿ ಸಿಗುವುದಿಲ್ಲ. ಬದಲಾಗಿ ಒಕ್ಕಲಿಗರ ಬದುಕಿನ ಸುಖ–ಸಂತೋಷಗಳೇ ಕಳೆಗೂಡಿ ನಿಂತಿವೆ.

ಶೃಂಗಾರ : ಸಾಮಾನ್ಯವಾಗಿ ಶೃಂಗಾರ ಎಲ್ಲ ಸಾಹಿತ್ಯಪ್ರಕಾರಗಳಲ್ಲಿ ಮೊಗದೋರಿದೆ. ಕೆಲ ಸಾಹಿತ್ಯಗಳಿಗಂತೂ ಅದೇ ಮೈಯಾಗಿದೆ. ಗಂಡು–ಹೆಣ್ಣಿನ ಆಕರ್ಷಣೆಗೆ ಶೃಂಗಾರ ಮೂಲವಾದಾಗ ಬೇಟ ಪ್ರಾರಂಭವಾಗಿ ಕಂಡದ್ದೆಲ್ಲ ಗಂಡಿಗೆ ಹೆಣ್ಣಾಗುತ್ತದೆ, ಹೆಣ್ಣಿಗೆ ಗಂಡಾಗುತ್ತದೆ. ಉಕ್ಕುವ ಯೌವನಕ್ಕೆ ಎಷ್ಟು ತಡೆಹಾಕಿದರೂ ಅದು ತನ್ನ ಒಡನಾಡಿಯನ್ನು ಹುಡುಕಿಕೊಂಡು ಹೋಗುತ್ತದೆ. ಈ ವಯಸ್ಸಿನ ರೂಪ–ಯೌವನಗಳ ತೀಕ್ಷ್ಣತೆ–ಪರಿಣಾಮ ಕೆಳಗಿನ ಪದ್ಯದಲ್ಲಿ ಕೆನೆಗಟ್ಟಿ ನಿಂತಿದೆ.

ಕಳಿ ನೋಡಿ ನಾ ಕಡಗೊಂಡ ಬಿದ್ದಿನವ್ವ
ಕಣ್ಣಿಗಿ ಬಂದಿತ ಬವಳೀಕಿ

ಕಣ್ಣಿಗಿ ಬಂದಿತ ಬವಳೀಕಿ
ನಿತ್ತ ಉಸರ್ಹಾಕೀ

ಇಡೀ ನುಡಿಯ ಯಾವ ಮೂಲೆಯಲ್ಲಿಯೂ ಭಾವ ಸೋಲುವುದಿಲ್ಲ. ಪ್ರತಿಯೊಂದು ಶಬ್ದವೂ ಪದ್ಯದ ಮೂಲಭಾವವನ್ನು ಪುಷ್ಟೀಕರಿಸುತ್ತಿದೆ. ತನ್ನ ಪ್ರೇಮಿಯ ಮುಖದಲ್ಲಿ ಚಿಮ್ಮುವ ಕಳೆಯನ್ನು ಕಂಡಾಗ ಇವಳಿಗೆ ಮತ್ತು ಬಂದಂತಾಯಿತು. ಸುತ್ತಲಿನ ಪ್ರಪಂಚದ ಚಾಲನೆಯೆಲ್ಲ ನಿಂತಂತೆ. ಮೈತಿಳಿದು ಎಚ್ಚರಾದಾಗ ಹಾಕುವ ಉಸಿರು, ವಿರಹವನ್ನು ಸಮರ್ಥವಾಗಿ ಪ್ರತಿನಿಧಿಸುತ್ತದೆ. ಅವನಿನ್ನೂ ತನಗೆ ದಕ್ಕಿಲ್ಲ. ಸಮಾಜದ ಕಟ್ಟೋ ತನ್ನೊಳಗಿನ ಅಂಜಿಕೆಯೋ ಅಂತೂ ಎರಡು ಒಂದಾಗಿಲ್ಲ. ಆದರೆ ಅವನನ್ನು ಕಂಡಾಗ ಉಂಟಾಗುವ ಹೃದಯದ ಬಡಿತ, ಮೈಮರೆತ, ನಿಡಿದಾದ ಉಸಿರ ತುಂಬಿರುವ ಅನುರಾಗದ ಗುಟ್ಟನ್ನು ಬಯಲು ಮಾಡುತ್ತವೆ. ಹೇಳಲಾರದ ಭಾವ, ತಾಳಲಾರದ ಕಾತರ. ಹೆಣ್ಣಿನ ಕೋಮಲವಾದ ಒಳಮನಸ್ಸು ಒದ್ದಾಡುವ ರೀತಿ ಚಿತ್ರವಾಗಿ ನೋಟಕರ ಮುಂದೆ ನಿಲ್ಲುತ್ತದೆ.

ಹೆಣ್ಣಿನ ಭಾವಮೃದುತ್ವ ಹೀಗಿದ್ದರೆ, ಎಲ್ಲ ಬಿಟ್ಟು ನಿಂತ ಗಂಡುಗೂಳಿ ಗುಟುರು ಹಾಕುತ್ತಿದೆ –

ಜಗ್ಗತನ ನಾರಿ ನಿನ್ನ ಜಗ್ಗತನ ಪೋರಿ ನಿನ್ನ
ಜಗ್ಗತನ ಪೋರಿ ನಿನ್ನ ಜನದಾಗ
ಜಗ್ಗತನ ಪೋರಿ ನಿನ್ನ ಜನದಾಗ
ಜನ್ಮ ಸಾಕೀಗ.

ಇವನು ಮೊದಲು ತಾನು ಕಣ್ಣಿಟ್ಟವಳನ್ನು ಪ್ರೇಮ (?)ಕ್ಕಾಗಿ ಅಹ್ವಾನಿಸಿರಬೇಕು. ಅವಳು ಹೂಂಗೊಟ್ಟಿಲ್ಲ. ಇವನು ಹತ್ತಾರು ಬಾರಿ ಹಲ್ಕಿರಿದು ಕೇಳಿ ನೋಡಿರಬೇಕು. ಆದರವಳು ಸೊಪ್ಪು ಹಾಕಿಲ್ಲ. ಮೇಲಾಗಿ ಇವನ ಮನಸ್ಸಿಗೆ ಪೆಟ್ಟಾಗದಂತೆ ಚುಚ್ಚು ಮಾತನಾಡಿರಬೇಕು ಇವಳು. ಈಗ ಪ್ರೇಮದ ತಂಗಾಳಿ ನಿಂತು, ಸೇಡಿನ ಕಾವು ಶಬ್ದ ರೂಪ ಪಡೆದಿದೆ ಇಲ್ಲಿ. ಅಥವಾ ಕೊನೆಯದಾದ ಅಂಜಿಕೆಯ ಅಸ್ತ್ರವೂ ಇದಾಗಿರಬೇಕು. 'ಜಗ್ಗತನ ನಿನ್ನ' ಎನ್ನುವ ಮಾತೇ ಮೇಲಿಂದ ಮೇಲೆ ಮನಾರಾವರ್ತನೆಗೊಳ್ಳುತ್ತಿದೆ. ಇಷ್ಟು ಚಿಕ್ಕಪದ್ಯದಲ್ಲಿ ಅವನು ಗಂಡಸುತನಕ್ಕೆ ಸಾಕ್ಷಿಯಾಗಿ ತೋರಿಸಬೇಕಾದ ಉಳಿದ ಮಾರ್ಗ ಅದೊಂದೇ. ತಲೆತುಂಬ ಅದೇ ತುಂಬಿರುವುದರಿಂದ ಬೇಸರಿಸದೆ ಬರುವ ಒಂದೇ ಮಾತು ಪದ್ಯಕ್ಕೆ ಕಳೆಕಟ್ಟಿದೆ. ಇವನು ಜಗ್ಗುವುದು ಜನರಲ್ಲೇ ಹೊರತು ಎಲ್ಲೋ ಮೂಲೆಯಲ್ಲಿ, ಯಾರು ಇರಲಾರದಲ್ಲಿ ಅಲ್ಲ. ಅದರ ಪರಿಣಾಮವೇನಾಗುತ್ತದೆ

ಎಂಬುದೂ ಅವನಿಗೆ ಗೊತ್ತು. ಆದರೆ ಜೀವದ ಹಂಗು ಅವನಿಗಿಲ್ಲ. ಮುಂದೆ ಏನಾದರಾಗಲಿ, ಇಂದು ತಾನು ಅವಳನ್ನು ಅವಮಾನಗೊಳಿಸಬೇಕೆಂಬ ಒಂದೇ ಒಂದು ಗುರಿ ಜಾನಪದ ಗಂಡಿನ ಒರಟುತನವನ್ನು ಬಿಚ್ಚಿ ತೋರಿಸಿದೆ.

ಮದುವೆಯಾದರೂ ಮುರಿಯದ ಮುಂಚಿನ ಸಂಬಂಧ ಕೆಳಗಿನ ಪದ್ಯದಲ್ಲಿ ಒಡೆದುತೊರುತ್ತಿದೆ.

ಹುಬ್ಬಳ್ಳಿ ಜಾತರಿ ಒಂದ ಹುಚ್ಚೆದ್ದ ಮಾಡುವಾಗ
ಜಾತರ್‍ಯಾಗ ಬರಬ್ಯಾಡ ನಮ್ಮಾವಾ
ಜಾತರ್‍ಯಾಗ ಬರಬ್ಯಾಡ ನಮ್ಮಾವಾ
ಮನ್ಯಾಗ ಅದಾನ ಹೆಬ್ಬಾಂವಾ

ಮದುವೆಯಾಗಿ ಗಂಡನೊಂದಿಗೆ ಬಾಳುತ್ತಿದ್ದವಳೊಬ್ಬಳನ್ನು ಮುಂಚಿನ ಪ್ರೇಮಿ ಹುಬ್ಬಳ್ಳಿ ಜಾತ್ರೆಯಲ್ಲಿ ಸಂಧಿಸಿ ಮಾತನಾಡಲು ಹವಣಿಸುತ್ತಾನೆ. ಇವಳಲ್ಲಿಯೂ ಮುಂಚಿನ ವಾಸನೆ ಇನ್ನೂ ಹೋಗಿಲ್ಲವೆಂಬುದು ಅವಳಾಡುವ ಮಾತಿನಿಂದಲೇ ಸ್ಪಷ್ಟವಾಗುತ್ತದೆ. ನಿಷ್ಠುರವಾಗಿ ಅವನನ್ನು ದೂರವಿರಿಸಲಾರಳು. ಬದಲಾಗಿ ಗಂಡನನ್ನು ಹೆಬ್ಬಾವೆಂದು ಹೆಸರಿಟ್ಟು ಭಂಗಿಸಿ, ಇವನಲ್ಲಿ ತನ್ನ ಒಲವನ್ನು ತೋರಿಸುತ್ತಾಳೆ. ಒಲವು ಎಷ್ಟಿದ್ದರೂ ಕಟ್ಟಿದ ಕೊರಳತಾಳಿ ನಿರ್ಬಂಧನ ಕಲ್ಪಿಸಿಕೊಡುತ್ತದೆ. ಆದ್ದರಿಂದಲೇ ಜಾತ್ರೆಯಲ್ಲಿ ನಮ್ಮ ಮಾತುಕತೆ ನಡೆದರೆ ಸುದ್ದಿ ಹರಡುತ್ತದೆ. ಅಪವಾದ ಹೊತ್ತು ಬಾಳುವುದು ಹೇಗೆ ? ಎಂಬರ್ಥದ ಹಿನ್ನಲೆಯಲ್ಲಿ ತನ್ನ ಪ್ರಿಯಕರನಿಗೆ ಪ್ರೀತಿಯ ತಾಕೀತು ಮಾಡುತ್ತಾಳೆ. ಹಳ್ಳಿಗಳ ಯಾವುದೋ ಒಂದು ಮೂಲೆಯಲ್ಲಿ ತೆರೆಯ ಮರೆಯಲ್ಲಿ ಸಾಗುವ ಇಂಥ ಕಾಮಜೀವನ ಸತ್ಯಕ್ಕೆ ದೂರವೇನಲ್ಲ. ಜಾನಪದ ಪ್ರತಿಭೆ ಅದನ್ನೂ ಗುರುತಿಸಿದೆ.

ವಿಡಂಬನಾತ್ಮಕ : ಸಮಾಜದ ಸಲ್ಲದ ರೀತಿನೀತಿ ಸಾಹಿತಿಯ ವಿಡಂಬನೆಗೆ ಆಹಾರ. ಈ ದಿಸೆಯಲ್ಲಿಯೂ ಚಿಕ್ಕಲಿಗರ ಹಾಡುಗಳ ಹರಹು ಹೆಚ್ಚಿದೆ. ಚಹದ ಚಟ ಹೀನವೆಂಬ ನಂಬುಗೆಯ ಹಿನ್ನಲೆಯಲ್ಲಿ ಬೆಳೆದುಬಂದಿರುವ ಈ ಹೀನ ಸನ್ನಿವೇಶ ಕಣ್ಣಿಗೆ ಕಟ್ಟುವಂತಿದೆ;

ಹೊಟ್ಟೆ ತುಂಬಲಾರ್ಕ ಹಟೇಲಕ ಹೋಗತಾರ
ಕಪ್ಪಬಸಿ ತೊಳಿಲಾಕ
ಕಪ್ಪಬಸಿ ತೊಳಿಲಾಕ
ಗಟಾರದಾನ ಚುಟ್ಟಾ ಸೇದಲಾಕ

ಹೊಟೆಲ್‌ಗಳಲ್ಲಿ ಚಹ ಕುಡಿಯುವುದೆಂದರೆ ದುಡ್ಡು ಹಾಳಾಗಲು ದಾರಿ ಎಂಬ ಅನಿಸಿಕೆ ಹಳ್ಳಿಗರಲ್ಲಿ. ಒಮ್ಮೆ ಆ ಚಟಕ್ಕೆ ಅಂಟಿಕೊಂಡರೆ ಮನೆಯ ಅನ್ನ ಮೈಗಾಗುವುದಿಲ್ಲ ಎಂಬ ಬಲವಾದ ನಂಬಿಗೆ ಅವರದು. ದುಡ್ಡಿಲ್ಲದವರಿಗೂ ಈ ಚಟ ಮೈಯುಂಡರೆ ಚಹದಂಗಡಿಯಲ್ಲಿ ಕೊಡುವುದೇನು ? ಕೊಡುವ ಹಣಕ್ಕೆ ಬದಲಾಗಿ ಕಪ್ಪಬಸಿ ತೊಳೆದು ಕೂಲಿ ಸಲ್ಲಿಸಬೇಕು. ಮನುಷ್ಯ ಈ ಮಟ್ಟಕ್ಕಿಳಿದರೆ ಒಂದು ಬೀಡಿಗೂ ಹಣ ಉಳಿಯಲಾರದು. ಕೊನೆಗೆ ಗಟಾರಿನ ಚುಟ್ಟವೇ ಗತಿಯಾಗುವ ನತದೃಷ್ಟನ ಪ್ರಾಪ್ತವಾಗುತ್ತದೆ.

ಬ್ಯಾಸಿಗಿ ಬಿಸಲಿಗಿ ಬೇಸಿ ಅಂತ ಹೇಳಿ
ತೊಡತಾರ ಮಲಮಲಾ
ತೊಟ್ಟ ಖಾದಿ ಅಂಗಿ ಕೂರಿ ಆಗಿಕ್ಯಾರ
ಕಡಿತಾವ ಮೈಯೆಲ್ಲಾ

ಎನ್ನುವ ಪದ್ಯದಲ್ಲಿ ಖಾದಿಯ ಬಗ್ಗೆ ನವಿರಾದ ವಿಡಂಬನೆ ಇದ್ದರೆ, ಮುಂದಿನದು ಖಾದಿ ತೊಟ್ಟವರ ಬಗೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ಜರದ ಪಟಕಾದವರನ ಕರದ ಕುಂಡ್ರಸತಾರ
ಓದ ಕುರ್ಚಿದ ಮ್ಯಾಲಾ
ಖಾದಿ ಟೊಪಿಗ್ಯಾವರನ ದಾದಮಾಡುದಿಲ್ಲ
ಎಂಥಾ ಕಾಡುಕಾಲಾ

ಸ್ವಾತಂತ್ರ್ಯಪೂರ್ವದಲ್ಲಿ ಹುಟ್ಟುದ ಹಾಡು ಇದಾಗಿರಬೇಕು. ಅಧಿಕಾರಕ್ಕೆ ಬಾಯಿ ಬಿಟ್ಟು ಹೇಳಿದಷ್ಟು ಕೇಳಿಕೊಂಡು ಹೋಗುವ ಜರದಪೇಟಾ ಸುತ್ತುವ ಸಂಸ್ಥಾನಿಕರೆಂದರೆ, ಸಮಯಸಾಧಕ ಬ್ರಿಟೀಷರಿಗೆ ಬಲುಪ್ರೀತಿ. ತಮ್ಮ ಸ್ವಾರ್ಥಕ್ಕಾಗಿ ಅವರನ್ನೊಯ್ದು ಕುರ್ಚಿಯ ಮೇಲೆ ಕೂಡ್ರಿಸಿ, ಸನ್ಮಾನದ ನಟನೆಮಾಡುತ್ತಿದ್ದರೆ ಅದೇ ವೇಳೆಗೆ ಖಾದಿ ತೊಟ್ಟವರೆಂದರೆ ಬ್ರಿಟೀಷರಿಗೆ ಕಣ್ಣುರಿ. ನಾಡಿನ ಗೌರವ ಕಾಯುವ ಭರದಲ್ಲಿ ತಮಗೆ ಯಾವ ವೇಳೆಯಲ್ಲಿ ಎಂಥ ಆತಂಕ ಒಡ್ಡುತ್ತಾರೋ ಎಂಬ ಭಯ. ಕಾರಣವಾಗಿ ಇಂಥ ದೇಶಭಕ್ತರತ್ತ ಬ್ರಿಟೀಷರು ತೋರುವುದು ಕೇವಲ ನಿರ್ಲಕ್ಷ್ಯ ಅಸೂಯೆ.

ಮುಂದೆ ಸಂಗ್ರಹಿಸಿದ ಹಾಡುಗಳು ಒಂದಕ್ಕೊಂದು ಸಂಬಂಧವಿದ್ದು, ಒಂದೇ ಭಾವವನ್ನು ಪ್ರಕಟಿಸುತ್ತವೆ. ತುದಿ ಮೊದಲ್ಗೊಂಡು ಎಲ್ಲ ಪದ್ಯಗಳನ್ನು ಈಕ್ಷಿಸಿದರೆ ಸುವ್ಯವಸ್ಥಿತವಾದ ಪ್ರಾರಂಭವಾಗಲಿ ಮುಕ್ತಾಯವಾಗಲಿ ಇದ್ದುದು ಕಂಡು ಬರುವುದಿಲ್ಲ.

ಹುಬ್ಬಳ್ಳಿ ಊರಾಗ ಹುಚ್ಚೆದ್ದು ಕುಣಿತಾಳ
ಹುಳಬಿದ್ದ ಹುಚ್ಚುತನಕ
ಹುಬ್ಬಳ್ಳಿ ಹುಡುಗುರು ದುಬ್ಬಕ ಒದ್ದರ
ಓಡ್ಯಾಳ ಧಾರವಾಡ ತನಕ

ಧಾರವಾಡದಾಗ ದರ್ಪ ಇಳಿಸ್ಯಾಳಾತ
ಎಲ್ಲಾರನು ಅಂಜಸುದಕ
ಧಾರವಾಡ ಹುಡುಗರು ದೌಡಿಗಿ ಒದ್ದರ
ಓಡ್ಯಾಳ ಬೆಳಗಾಂಯಿ ತನಕ

ಬೆಳಗಾಂಯಿ ಶಾಮರ ತಿರಿಗ್ಯಾಡಿ ಹೇಳತಾಳ
ಬಾಳಬಾಳ ಬೆಳಕ
ಬೆಳಗಾಂಯಿ ಹುಡುಗುರು ಬೆಳಗಿ ಬಿಟ್ಟರ
ಓಡ್ಯಾಳ ಗದಗಿನ ತನಕ

ಗದಗಿನೂರಾಗ ಗದಬಡಿಸಿ ಹುಡಕತಾರ
ಬಿದ್ದಾಳ ಗದ್ದಲಕ
ಗದುಗಿನ ಹುಡುಗೂರು ಗದ್ದಕ ಒದ್ದರ
ಓಡ್ಯಾಳ ಯಾದವಾಡ ತನಕ

ಯಾದವಾಡ ಹುಡೂಗೂರು ಎಚ್ಚರಂತ ಹೇಳಿ
ಹಾಕ್ಯಾರ ಹಳ್ಳಕ

ಈ ಪದ್ಯಗಳು ಗೀಗೀ ಪದಗಳಲ್ಲಿ ಬರುವ ನಾಗೇಶಿಯನ್ನು ಕುರಿತು ಹರದೇಶಿ ಹಾಡುವ ಹಾಡಿನ ಪ್ರತಿರೂಪದಂತೆ ಕಾಣುತ್ತವೆ. ಇದಕ್ಕಿಂತಲೂ ಹೆಚ್ಚಿನ ಯಾವೊಂದು ಭಾವವೂ ಈ ಪದ್ಯಗಳೊಡಲಿನಿಂದ ಹೊರಬರುವುದಿಲ್ಲ. ಯಾವುದೋ ಲಾವಣಿಯ ಒಂದು ಚೌಕದ ಭಾಗ ಈ ಪದ್ಯಗಳಾಗಿರಲೂ ಸಾಕು. ಈ ಸಂಶಯಕ್ಕೆ ಕಾರಣವೆಂದರೆ ಲಾವಣಿಗಳಲ್ಲಿಯ ಒಂದೊಂದು ಭಾಗವನ್ನು ತುಂಡಿಸಿ ಸ್ವತಂತ್ರಪದ್ಯಗಳೆಂಬಂತೆ ಈ ಚಿಕ್ಕಲಿಗರ ಹಾಡುಗಳ ಮಧ್ಯೆ ಸೇರಿಸುತ್ತಿದ್ದರು ಎಂದು ಎರಡೂ ಸಾಹಿತ್ಯದ ಪರಿಚಯವುಳ್ಳವರು ಹೇಳಿದ್ದಾರೆ. ಗೀಗೀ ಮೇಳಗಳು ಅದೇ ಭಾಗದಲ್ಲಿ ಹೆಚ್ಚಿರುವುದು ಮೇಲಿನ ಹೇಳಿಕೆಯಲ್ಲೇ ತಥ್ಯವನ್ನು ಅರಸಲು ಪ್ರಚೋದನೆ ಕೊಡುತ್ತದೆ. ಯಾವುದಕ್ಕೂ ಇನ್ನಷ್ಟು ಚಿಕ್ಕಲಿಗರ ಹಾಡುಗಳ ಸಂಗ್ರಹ ಅಗತ್ಯ. ಹಾಗೇ ಲಾವಣಿಗಳಲ್ಲಿ ಈ ಪದ್ಯಗಳೇನಾದರೂ ಸಿಕ್ಕುತ್ತವೆಯೇ ಎಂಬ ಅಭ್ಯಾಸದ ಹಿನ್ನಲೆಯಲ್ಲಿ ಶೋಧನೆ

ಮುಂದುವರಿಯಬೇಕು. ಆಮೇಲೆ ಚಿಕ್ಕಲಿಗರ ಹಾಡುಗಳಲ್ಲಿ ಸ್ವಂತಿಕೆ ಎಷ್ಟೆಂಬುದು ನಿರ್ಧಾರವಾಗಬೇಕು.

ಉದಾಹರಿಸಿದ ಎಲ್ಲ ಚಿಕ್ಕಲಿಗರ ಹಾಡುಗಳನ್ನು ಸಾಹಿತ್ಯಕದೃಷ್ಟಿಯಿಂದ ಸಮಾಲೋಚಿಸಿದಾಗ ಇಲ್ಲೆಲ್ಲ ಕಲ್ಪನೆ ಕಡಿಮೆ ಎನಿಸುತ್ತದೆ. ಹಳ್ಳಿಯ ಬದುಕಿನ ನೈಜತೆಯೇ ಈ ಹಾಡುಗಳ ಜೀವಾಳ. ವರ್ಣನಾವಿಧಾನದಲ್ಲಿ ಅಂಥ ಮೆಚ್ಚಬೇಕಾದುದೇನಿಲ್ಲ. ಎಲ್ಲ ಜಾನಪದಗೀತಗಳಲ್ಲಿಯಂತೆ ಅನುಪ್ರಾಸ, ಅಂತ್ಯಪ್ರಾಸಗಳು ಇಲ್ಲಿಯೂ ಗಣನೀಯ.

ಮುಂದಿನ ಅಭ್ಯಾಸಿಗಳಿಗೆ ಈ ಲೇಖನ ತೋರುಬೆರಳಾದರೆ ಈ ನಿಟ್ಟಿನಲ್ಲಿ ಪ್ರಾರಂಭದ ನನ್ನ ಈ ಶ್ರಮ ಸಾರ್ಥಕವಾಯಿತೆಂದು ಬಗೆಯುತ್ತೇನೆ.

೧೯೭೭ ಕರ್ನಾಟಕ ಭಾರತಿ-೯-೩ ಪ್ರಸಂ.ಡಾ.ಎಂ.ಎಸ್. ಸುಂಕಾಪುರ

~~~*****~~~
~~~

ಗೀಗೀ ಪದ : ಅನ್ವಯಿಕ ದೃಷ್ಟಿ

೧

ಜಾನಪದ ಕಲೆ–ಸಾಹಿತ್ಯಗಳ ಸಂಬಂಧದ ಅನ್ವಯಿಕ ದೃಷ್ಟಿಯಿರಿಸುವಲ್ಲಿ ಒಂದು ಸ್ಪಷ್ಟ ಕಾರಣ ಕೊಡಬಹುದು; ಜಾನಪದದ ಒಳ್ಳೆಯ ಕಲೆ–ಸಾಹಿತ್ಯಗಳು ಬದುಕಿಗೆ ಸಂಗತ (relevant)ವಾಗಿ ಉಳಿಯಬೇಕು. ಸಾಧ್ಯವಾದರೆ ಮುಂದುವರಿಯಬೇಕು. ಸಂಗಡವೇ ವಿಕೃತವಾದುದನ್ನು ಕಳೆದುಕೊಂಡು ಒಳ್ಳೆಯದೆನ್ನುವುದು ಜಾನಪದ ಬದುಕಿಗೆ ಅನ್ವಯವಾಗಬೇಕು. ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಈ ಜಾನಪದ ಕಲೆ–ಸಾಹಿತ್ಯಗಳ ಪಾತ್ರವನ್ನು ಅರಿಯುವುದು ಮುಖ್ಯವೆನಿಸುತ್ತದೆ.

ನಾವು ಎಷ್ಟೇ ಪ್ರಯತ್ನಪಟ್ಟರೂ ಕೆಲವು ಹಾಡು–ಕಲೆಗಳು ಕಾಲಾಂತರದಲ್ಲಿ ಉಳಿಯುವುದಿಲ್ಲ. ಬೀಸುಕಲ್ಲಿನ ಹಾಡು, ಹಂತಿ ಹಾಡುಗಳು ಕ್ರಿಯೆಯನ್ನವಲಂಬಿಸಿ ಬೆಳೆದ ಹಾಡುಗಳು. ಹಿಟ್ಟಿನ ಗಿರಣಿ ಬಂದಮೇಲೆ ಬೀಸುಕಲ್ಲು ಯಾರಿಗೆ ಬೇಕು? ಇನ್ನು ಮುಂದಿನ ದಿನಮಾನಗಳಲ್ಲಿ ಬೀಸುಕಲ್ಲನ್ನು ಮ್ಯೂಸಿಯಂನಲ್ಲಿ ನೋಡಬೇಕು ಅಷ್ಟೇ. ಹಾಗೆ ರಾಶಿಮಸಿನ್ನು ಬಂದ ಮೇಲೆ ಇದಕ್ಕೆ ಸಂಬಂಧಿಸಿದ ಹಂತಿಕಣ್ಣಿ, ಮೆಟ್ನಾಲಿ, ರಾಗೋಲು, ಗ್ವಾರಿ ಮುಂತಾದವುಗಳೆಲ್ಲ ಎಲ್ಲಿ ಬಿದ್ದಿವೆಯೋ? ಈ ಕ್ರಿಯೆಗಳನ್ನವಲಂಬಿಸಿ ಬೆಳೆದ ಹಾಡುಗಳು ಇಂದು ಕಣ್ಮರೆಯಾಗುತ್ತಿವೆ. ಇವುಗಳನ್ನು ನಾವು ಪುಸ್ತಕಗಳಲ್ಲಿ, ಟೇಪ್‌ರೆಕಾರ್ಡ್‌ನಲ್ಲಿ, ವಿಡಿಯೋ ಕ್ಯಾಸೆಟ್‌ಗಳಲ್ಲಿ ಕೇಳಬಹುದಷ್ಟೇ. ಈ ಹಾಡುಗಳಿಗೆ ಒದಗಿದ ಗತಿಯೇ ಹಚ್ಚಿಬಟ್ಟು, ಕೌದಿಯಂಥ ಕಲೆಗಳಿಗೆ ಬಂದಿದೆ. ಹಚ್ಚಿಬಟ್ಟು ಕೆಳವರ್ಗದವರ ಸಂಕೇತವೆಂಬಂತೆ ಗುರುತಿಸಲ್ಪಡುವದರಿಂದ ನಾವಾರೂ ಆ ಮೂಲಕ ನಮ್ಮನ್ನು . ಪ್ರದರ್ಶನಕ್ಕಿಟ್ಟುಕೊಳ್ಳಲಾರೆವು. ಕೌದಿಯಲ್ಲಿ ನಮ್ಮ ಮುಂದಿನ ತಲೆಮಾರಿನವರಾರೂ ಮಲಗಲು ಸಿದ್ದರಾಗುವುದಿಲ್ಲ. ಹೀಗೆ ಇವುಗಳ ನಾಶ ಅನಿವಾರ್ಯ. ಈ ಅವನತಿಯನ್ನು ನಾವು ಅಂಗೈ ಹಚ್ಚಿ ತಡೆಯಲಾರೆವು. ಆದರೆ ಎಲ್ಲ ಕಲೆ ಸಾಹಿತ್ಯ ಪ್ರಕಾರಗಳು ಹೀಗೇ ನಾಶ ಹೊಂದುವದಿಲ್ಲ. ಅಥವಾ ನಾಶ ಹೊಂದಗೊಡಬಾರದು. ಕೆಲವು ಪ್ರಕಾರಗಳಿಗೆ ಹೊಸ ಆವಿಷ್ಕಾರ ಕೊಡಬಹುದು. ಸಧ್ಯ

ಗೀಗೀ ಪದಗಳನ್ನು ಆಧುನಿಕ ಜೀವನಕ್ಕೆ ಅನ್ವಯಿಸುವ ಸಾಧ್ಯತೆಗಳನ್ನು ವಿವರಗೊಳಿಸುವ ಮೂಲಕ ಈ ಬಗೆಯ ಅನೇಕ ಕಲೆಗಳಿಗೆ ಅನ್ವಯಿಕತೆಯನ್ನು ಹೇಗೆ ವಿಸ್ತರಿಸಬಹುದೆಂಬುದನ್ನು ನೋಡಬಹುದು.

೨

ಒಂದು ಕಾಲಕ್ಕೆ ನಮ್ಮ ಜಾನಪದ ಬದುಕಿಗೆ ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ – ಅತ್ಯಂತ ಜನಮನ್ನಣೆಯನ್ನು ಗಳಿಸಿದ ಎರಡು ಪ್ರಕಾರಗಳೆಂದರೆ ಬಯಲಾಟಗಳು ಮತ್ತು ಗೀಗೀ ಪದಗಳು. ಜಾತ್ರೆ, ಓಕುಳಿಗಳಲ್ಲಿ ಗೀಗೀ ಹಾಡುಗಳು ದಟ್ಟಿಸಿ ಗ್ರಾಮೀಣರ ಮೇಲೆ ವಿಶೇಷ ಪ್ರಭಾವ ಬೀರಿದ ಕಾಲವೊಂದಿತ್ತು. ಸಿನೇಮಾ, ನಾಟಕಗಳಿಗಿಂತ ಮೊದಲು ಬಯಲಾಟಗಳೊಂದಿಗೆ ಗೀಗೀ ಮೇಳಗಳೇ ಜನರ ಮನರಂಜನಾ ಕೇಂದ್ರವಾಗಿದ್ದವು. ಆದರೆ ಸ್ವಾತಂತ್ರ್ಯಾನಂತರದಲ್ಲಿ ಆಧುನಿಕತೆ ಕಾಲಿಟ್ಟಂತೆ ನಗರ ಜೀವನ ಪ್ರಭಾವ ಹಳ್ಳಿಗಳಲ್ಲಿ ಆಕ್ರಮಿಸಿಕೊಂಡಂತೆ ಗೀಗೀ ಪದಗಳ ಮುಂಚಿನ ಪ್ರಭಾವ ಕ್ರಮೇಣ ಇಳಿಮುಖವಾಗತೊಡಗಿತು. ಸಧ್ಯ ಮುಂಚಿನ ಮೇಳಗಳ ಕಾಲುಭಾಗ ಕೂಡ ಈಗ ಉಳಿದಿಲ್ಲ. ಉಳಿದ ಮೇಳಗಳಲ್ಲೂ ನಿರುತ್ಸಾಹದ ಕಪ್ಪುಛಾಯೆ ಹರಡಿ ಗೀಗೀ ಮೇಳಗಳು ಶಕ್ತಿ ಗುಂದಿವೆ.

ಆದರೆ ಗೀಗೀ ಪದಗಳು ಒಂದು ಕಾಲಕ್ಕೆ ತೀರ ಜನಾಕರ್ಷಣೆಗೆ ಕಾರಣವಾದ ಒಂದು ಪ್ರಕಾರವಾಗಿತ್ತು. ಅದರ ವಿಷಯ ವೈವಿಧ್ಯವೇ ಬೆರಗೊಳಿಸುವಂಥದು. ಈ ಗೀಗೀ ಪದಗಳನ್ನು ನಿರೂಪಣಾತ್ಮಕ ಮತ್ತು ಸಂವಾದಾತ್ಮಕ ಎಂದು ಎರಡು ರೀತಿಯಾಗಿ ವರ್ಗೀಕರಿಸಿಕೊಳ್ಳಬಹುದು. ನಿರೂಪಣಾತ್ಮಕ ಪದಗಳನ್ನು ಮೂರು ವಿಭಾಗವಾಗಿಸಿ ಕಥನ ನಿರೂಪಣೆ (ಪೌರಾಣಿಕ, ಚಾರಿತ್ರಿಕ, ಸಾಮಾಜಿಕ), ರಸ ನಿರೂಪಣೆ (ಶೃಂಗಾರ, ಹಾಸ್ಯ) ತತ್ವ ನಿರೂಪಣೆ, (ಶಾಸ್ತ್ರ, ಅನುಭಾವ) ಎಂದು ವರ್ಗೀಕರಣ ಮಾಡಿಕೊಳ್ಳಬಹುದು. ಸಂವಾದಾತ್ಮಕ ಲಾವಣಿಗಳು ಹರದೇಶಿ–ನಾಗೇಶಿ, ಸವಾಲ್–ಜವಾಬ್, ತೋಡಿ–ತೋಡಿ ಎಂದು ಮೂರು ಬಗೆಯಾಗುತ್ತವೆ. ಆದರೆ ಈ ಎಲ್ಲ ವೈವಿಧ್ಯತೆಯ ಸೊಬಗನ್ನು ಅಸ್ವಾದಿಸುವವರ ಸಂಖ್ಯೆ ಕರಗಿ ಹೋಗುತ್ತಿದೆ. ಇಂದು ಜನಪದ ಅಭ್ಯಾಸಿಗಳು ಗೀಗೀ ಪದದ ಶಕ್ತಿಯನ್ನು ಆಧುನಿಕ ಬದುಕಿಗೆ ಸಮೀಕರಿಸಿ ದುಡಿಸಿಕೊಳ್ಳಬೇಕು. ಇದರ ಮೂಲಕ ಒಂದು ಹೊಸ ಆಯಾಮವನ್ನೇ ಈ ಮೇಳ ಪ್ರಕಾರಕ್ಕೆ ಕೊಟ್ಟಂತಾಗುತ್ತದೆ.

೩

ಒಂದು ಕಾಲಕ್ಕೆ ಕಥನ ನಿರೂಪಣೆ, ರಸ ನಿರೂಪಣೆಗಳಿಗೆಲ್ಲ ಮೈಗೊಟ್ಟ ಗೀಗೀ

ಪದಗಳನ್ನು ಇಂದು ಹೊಸ ಭಾವನೆಗೆ ದುಡಿಸಿಕೊಳ್ಳುವುದು ಸಾಧ್ಯವಿದೆ. ಅನ್ವಯಿಕ ದೃಷ್ಟಿಯೆಂಬುದು ಜಾನಪದ ಅಭ್ಯಾಸದಲ್ಲಿ ಒಂದು ವೈಜ್ಞಾನಿಕ ನಿಲುವಾಗಿ ಇಂದು ಬೆಳೆದಿದೆ. ಇದಕ್ಕೂ ಬಹಳ ಹಿಂದೆ ನಮ್ಮ ದೇಶದ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಈ ವೈಜ್ಞಾನಿಕ ಅರಿವಿಲ್ಲದೆ ಗೀಗೀ ಪದವನ್ನು ಸ್ವಾತಂತ್ರ್ಯಾಂದೋಲನಕ್ಕೆ ಅನ್ವಯಿಸಿಕೊಂಡು ಹಾಡಿದ್ದು ಒಂದು ಸಾಧನೆ ಎಂದು ಹೇಳಬೇಕು. ಒಂದು ವಿಶೇಷವನ್ನಿಲ್ಲೀಗ ಗಮನಿಸಬೇಕು. ಸ್ವಾತಂತ್ರ್ಯ ಚಳುವಳಿ, ಖಾದಿ ಪ್ರಚಾರ ಮುಂತಾದವುಗಳನ್ನು ಕುರಿತಾದ ಅಭಿವ್ಯಕ್ತಿ ಒಂದು ಆಂತರಿಕ ಒತ್ತಡವಾಗಿ ಬೆಳೆದು ಬಂದದ್ದು. ಈ ಬಗೆಯ ಹಾಡುಗಳ ಸೃಷ್ಟಿಗೆ ಕಾರಣನಾದ ಹುಲುಕುಂದ ಭೀಮೇಶನನ್ನು ಇಲ್ಲಿ ಸ್ಮರಿಸಬೇಕು. ಮುಂಚಿನ ಸಾಂಪ್ರದಾಯಿಕ ಹಾಡುಗಳಿಗೆ ಹೊಯ್‌ಕಯ್ಯಾಗಿ ಈ ಹಾಡುಗಳು ವಸ್ತು, ಬಂಧ ಎರಡೂ ದೃಷ್ಟಿಯಿಂದ ಬಿಗಿಯಾಗಿ ಬಂದವು. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಅಥವಾ ಸ್ವಾತಂತ್ರ್ಯ ದೊರೆತ ಎರಡು–ಮೂರು ವರ್ಷಗಳವರೆಗೆ ಈ ಹಾಡುಗಳಿಗಿದ್ದ ಜನಪ್ರಿಯತೆ ಮುಂದೆ ಉಳಿಯಲಿಲ್ಲ. ಇವು ಸಾಂದರ್ಭಿಕ ಗೀಗೀ ಪದಗಳಾದ್ದರಿಂದ ಉದ್ದೇಶ ಈಡೇರಿಕೆಯನಂತರ ಕ್ರಮೇಣ ಜನಮನದಿಂದ ದೂರವಾದವು. ಸ್ವಾತಂತ್ರ್ಯಾನಂತರದ ಗೀಗೀ ಪದಗಳಾಗಲಿ ಆ ಮುಂಚಿನ ಗೀಗೀ ಪದಗಳಾಗಲೀ ಇಂದು ಹಳ್ಳಿಗಳೂ ಕೂಡ ನಗರ ಪ್ರಭಾವಕ್ಕೆ ಒಳಗಾಗುತ್ತಿರುವ ಈ ಸಂಕ್ರಮಣ ಸ್ಥಿತಿಯಲ್ಲಿ – ಬೇಡವಾಗಿದ್ದರೂ ಕೂಡ ಇವುಗಳನ್ನು ಆಧುನಿಕ ಜೀವನದ ನಾನಾ ಭಾವಗಳಿಗೆ ಅನ್ವಯಿಸಿಕೊಂಡು ಈ ಪ್ರಕಾರವನ್ನು ಮುಂದುವರಿಸಿಕೊಂಡು ಹೋಗಬಹುದೆಂದು ತೋರುತ್ತದೆ.

೪

ಗೀಗೀ ಪದಗಳ ಛಂದಸ್ಸು, ಪ್ರಾಸಬದ್ಧತೆ ಇವೆರಡಕ್ಕೂ ಮಿಗಿಲಾಗಿ ಆಡುನುಡಿಯ ಸೊಗಡು – ಎಲ್ಲ ಕಾರಣವಾಗಿ ಈ ಪ್ರಕಾರವನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವಲ್ಲಿ ಯಾವ ಅಭ್ಯಂತರವೂ ತೋರುವುದಿಲ್ಲ. ಕುಟುಂಬ ಯೋಜನೆ, ಸಾಕ್ಷರತೆ, ಮದ್ಯಪಾನ ನಿಷೇಧಗಳಂಥ ಆಧುನಿಕ ಪ್ರಜ್ಞೆಗಳಿಗೆ ಗೀಗೀ ಪದಗಳನ್ನು ಬಳಸಿಕೊಳ್ಳಬಹುದು. ಇದು ಸಮಾಜ ಸುಧಾರಣೆಯ ಒಂದು ಸ್ತರ. ಇದನ್ನು ಗೀಗೀ ಪದದಂಥ ಕಲೆಯ ಮುಖಾಂತರ ಇನ್ನೂ ಗ್ರಾಮೀಣ ಜನರ ಸಮೀಪಕ್ಕೆ ಒಯ್ಯಬಹುದು. ಒಂದು ಮೇಳದ ಮುಖಾಂತರ ಗೀಗೀ ಪದಗಳು ಅಭಿವ್ಯಕ್ತಗೊಳ್ಳುತ್ತವೆ. ಡಪ್ಪು, ತಾಳ, ತುಂತುಣಿ ಇವುಗಳಿಂದ ಹೊರಡುವ ಒಂದು ಬಗೆಯ ನಾದ ಮಾಧುರ್ಯ ಹಾಡಿನ ಮೂಲವಸ್ತುವನ್ನು ಜನಮನಕ್ಕೆ ಆಕರ್ಷಕ ಶೈಲಿಯಲ್ಲಿ ಮುಟ್ಟಿಸುವುದರಲ್ಲಿ ಸಂದೇಹವಿಲ್ಲ. ತಾವು ನಿತ್ಯವೂ ಬಳಸುವ ಆಡು ನುಡಿ ಇಲ್ಲಿರುವುದರಿಂದ ಜನಕ್ಕೆ ತೀವ್ರವಾಗಿ ಮುಟ್ಟುತ್ತದೆ.

ಇಲ್ಲಿ ಒಂದು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ರಚನೆಗೊಂಡ ಹಾಡುಗಳನ್ನು ಮೇಳಗಳು ಜನರಿಗೆ ಸುಲಭವಾಗಿ ಮುಟ್ಟಿಸಬಹುದು. ಆದರೆ ಈ ಬಗೆಯ ಹಾಡುಗಳ ಸೃಷ್ಟಿಯದೇ ಒಂದು ಸಮಸ್ಯೆ. ಉತ್ತರ ಕರ್ನಾಟಕದಲ್ಲಿ ಗೀಗೀ ಪದಗಳ ಮೇಳಗಳು ವಿಜೃಂಭಿಸುತ್ತಿದ್ದ ಕಾಲದಲ್ಲಿ ಗೋಪಾಳ-ದುರದುಂಡಿ, ಮದರಖಂಡಿ ಯಲ್ಲಪ್ಪ, ಜನವಾಡ ನಾನಪ್ಪ, ಮಲಾಬದಿ ಮಲ್ಲಪ್ಪ ಇವರೆಲ್ಲ ವಿಪುಲವಾಗಿ ಗೀಗೀ ಪದಗಳನ್ನು ಸೃಷ್ಟಿಸಿದರು. ಗೀಗೀ ಪದಗಳು ಹೀಗೆಯೇ ಇರಬೇಕೆಂಬ ರೀತಿಯಲ್ಲಿ ಅದರ ವಸ್ತು ಬಂಧಗಳು ನಿರ್ದಿಷ್ಟವಾದವು. ಸಾವಿರಾರು ಸಂಖ್ಯೆಯಲ್ಲಿ ಹುಟ್ಟಿದ ಅಂಥ ಪದಗಳನ್ನು ಇಂದಿಗೂ ಉಳಿಸಿಕೊಂಡಿರುವ ಮೇಳಗಳು ಹಾಡುತ್ತಿವೆ. ಹಿಂದಿನ ಪದಗಳ ಎಲ್ಲಾ ಬಗೆಯ ಪರಿಕಲ್ಪನೆ ಇಂದಿನವರೆಗೆ ಗಾಢವಾಗಿರುವುದೇ ಅದರಿಂದ ಹೊರಬರಲು ತಡೆಯಾಗಿದೆ. ವಸ್ತುವನ್ನು ಬದಲಿಸಿಕೊಳ್ಳಬಹುದೇ ? ಛಂದೋಬಂಧವನ್ನು ಸಡಿಲಿಸಬಹುದೇ ? ಏನು ಬದಲಿಸಿದರೆ ಜನ ಏನಂದಾರು ? ಎಂಬುದು ಇಂದಿನ ಲಾವಣಿ ರಚನಾಕಾರರನ್ನು ಕಾಡುತ್ತಿದೆ. ಆದ್ದರಿಂದಲೇ ಹೊಸ ವಿಷಯಗಳನ್ನು ಕುರಿತಾಗಿ ಬರೆಯುವಾಗ ಅವರ ಲೇಖನಿ ಸರಾಗವಾಗಿ ಓಡದೇ ಒಂದು ಬಗೆಯ ಮುಜುಗರ ಅವರನ್ನು ಕಾಡುತ್ತದೆ. ಈ ಅವಸ್ಥೆಯಲ್ಲಿ ಅವರಿಗೆ ಒಂದು ಮಾರ್ಗದರ್ಶನ ಬೇಕಾಗಿದೆ.

ಈ ಮಾರ್ಗದರ್ಶನದ ವಿಷಯದಲ್ಲಿ ಒಂದು ಮಾತನ್ನು ಗಮನಿಸಬೇಕು, ಯಾವುದೇ ಜನಪದ ಕಲೆಗೆ ಅದರಲ್ಲಿ ಪರಿಣತಿ ಹೊಂದಿದವರು ಮಾರ್ಗದರ್ಶನ ನೀಡಬಹುದು, ಪರಿಷ್ಕರಣದ ಅಂಶಗಳನ್ನು ಎತ್ತಿ ಹೇಳಬಹುದು. ಗೀಗೀ ಪದದ ವಿಷಯದಲ್ಲಿಯೂ ಅಷ್ಟೇ, ಗೀಗೀ ಪದಕ್ಕೆ ಅಳವಡಿಸಬಹುದಾದ ಆಧುನಿಕ ವಿಷಯಗಳನ್ನು ಮೊದಲು ಅವರಿಗೆ ಎಳೆ ಎಳೆಯಾಗಿ ಬಿಡಿಸಿ ಹೇಳಿ ಮನದಟ್ಟು ಮಾಡಿಕೊಟ್ಟು ಈ ವಿಷಯದಲ್ಲಿ ಅವರಿಗೆ ಪ್ರೀತಿ ಹುಟ್ಟುವಂತೆ ಮಾಡಬೇಕು. ಎರಡನೆಯ ಹಂತದಲ್ಲಿ ಗೀಗೀ ಪದದ ಮುಂಚಿನ ಛಂದೋಬಂಧದಂತೆಯೇ ತಮ್ಮ ಹಾಡುಗಳು ಇರಬೇಕೆಂಬ ಭ್ರಮೆಯನ್ನು ಹೋಗಲಾಡಿಸಿ ಈ ವಿಷಯಗಳಿಗೆ ಹೊಂದುವಂತೆ ಬಂಧಗಳು ಸರಳಗೊಳ್ಳಬಹುದು ಎಂಬ ಕಲ್ಪನೆಯನ್ನು ಅವರಿಗೆ ತಂದುಕೊಡಬೇಕು. ಈ ಬಗೆಯ ಶಿಕ್ಷಣ ವೈಯಕ್ತಿಕ ನೆಲೆಯಲ್ಲಿರದೇ ಒಂದು ಶಿಬಿರ ಅಥವಾ ಕಮ್ಮಟದ ಮುಖಾಂತರವಾದರೆ ಇನ್ನೂ ಚೆನ್ನ. ಯಾಕೆಂದರೆ ಅಲ್ಲಿ ತಮ್ಮಂಥ ರಚನಾಕಾರರೇ ಇರುವದರಿಂದ ಪರಸ್ಪರ ವಿಚಾರ ವಿನಿಮಯದೊಂದಿಗೆ ಮುಜುಗರ ಕಡಿಮೆಯಾಗುತ್ತದೆ. ಪದ್ಯಗಳ ರಚನೆ ಸರಳಗೊಳ್ಳುತ್ತದೆ.

ಇಂಥ ಒಂದು ಪ್ರಯೋಗವನ್ನು ನಾನು ಮತ್ತು ಡಾ॥ ಬಸವರಾಜ ಮಲಶೆಟ್ಟಿ ಭಾರತೀಯ ಕುಟುಂಬ ಯೋಜನಾ ಸಂಘದ ಮುಖಾಂತರ ಧಾರವಾಡದಲ್ಲಿ ೧೯೯೩ರಲ್ಲಿ ಮಾಡಿದೆವು.ಇಲ್ಲಿಯ ಒಂದು ವಿಶೇಷವೆಂದರೆ "ಗೀಗೀ ಹಾಡುಗಾರ

ಕವಿಗಳಿಗೂ ನಮ್ಮ ಶಿಷ್ಟ ವಲಯದ ಕವಿಗಳಿಗೂ ಮುಖಾಮುಖಿ ಸಂಬಂಧ ಏರ್ಪಡಿಸಿದ್ದು ಒಂದು ವಿಶಿಷ್ಟ ಪ್ರಕ್ರಿಯೆ ಎನಿಸಿತ್ತು. ಜಾನಪದ ಕಾವ್ಯದ ಒಳಮಟ್ಟವನ್ನರಿತ ಶಿಷ್ಟ ಕವಿಗಳನ್ನು ಆಯ್ಕೆ ಮಾಡಲಾಗಿತ್ತು. ಅವರಿಗೆ ಗೀಗೀ ಧಾಟಿಗಳನ್ನು ಪೂರೈಸಿದಾಗ ಅವರು ಅನೇಕ ಹಾಡುಗಳನ್ನು ರಚಿಸಿದರು. ಕಾರ್ಯಾಗಾರದಲ್ಲಿ ರಚನೆಗೊಂಡ ಆ ಹಾಡುಗಳನ್ನು ಗೀಗೀ ಕಲಾವಿದರು ಅಲ್ಲಿಯೇ ಹಾಡಿ ತೋರಿಸಿದರು. ಪರಸ್ಪರರನ್ನು ಅರ್ಥ ಮಾಡಿಕೊಳ್ಳುವ ಕೊಡುಕೊಳ್ಳುವಿಕೆಯ ಮೂಲಕತಮ್ಮ ಸೃಜನಾತ್ಮಕತೆಯನ್ನು ಪುಷ್ಪಿಗೊಳಿಸುವ ಪ್ರಕ್ರಿಯೆ ಅರ್ಥಪೂರ್ಣವಾಗಿ ನಡೆಯಿತು. ಈ ಎರಡೂ ಕಾರ್ಯಾಗಾರಗಳು ಹೊಸ ಪ್ರಯತ್ನವೊಂದರತ್ತ ಇಟ್ಟ ಪ್ರಾಮಾಣಿಕ ಮೊದಲ ಹೆಜ್ಜೆಗಳು. ನಿರೀಕ್ಷಿತ ಪರಿಣಾಮ ದೃಢವಾದ ಚಲನೆಯನ್ನು ಸಾಬೀತುಗೊಳಿಸುವ ದಿಟ್ಟ ಹೆಜ್ಜೆಗಳೆಂಬ ಭರವಸೆ ಮೂಡಿತು."[೧]

ಈ ಕಾರ್ಯಗಾರದಲ್ಲಿ ಸೃಷ್ಟಿಗೊಂಡ ಜನಪದ ಕವಿಗಳ ಎರಡು ಹಾಡುಗಳನ್ನು ನೋಡುವದರ ಮುಖಾಂತರ ಇದರ ಸಫಲತೆಯನ್ನು ನಾವು ಅರಿಯಬಹುದು. ಮೊದಲನೆಯದು ಅಪ್ಪಣ್ಣಪ್ಪ ಜಂಬಗಿಯವರ "ಸಾಕ್ಷರತಾ ಅಂದೋಲನ" ಎರಡನೆಯದು ಮಹಾದೇವಪ್ಪ ಹರಿಜನ ಅವರ 'ಮಿತಸಂತಾನ'.

ಸಾಕ್ಷರತಾ ಅಂದೋಲನ :

ಶಿಕ್ಷಣವಿಲ್ಲದ ಮನುಜರ ಬಾಳ್ವೆಹಾಳ ಆಗಿ ಹೋತೋ
ಲಕ್ಷಗೊಟ್ಟ ಇನ್ನ ಎಚ್ಚರಾಗಿರಿ ಕಾಲ ಒದಗಿ ಬಂತೊ

ಚಿಕ್ಕ ವಯಸ್ಸಿನ್ಯಾಗ ಕಲಿಯೊದ ಬಿಟ್ಟಿದ್ದ ದೊಡ್ಡ ತಪ್ಪು ಆತೋ
ದಿಕ್ಕ ತಿಳದಂಗ ಆಗಿ ಸಂಸಾರಕ್ಕ ಬೆಂಕಿ ಹತ್ತಿಹೋತೋ
ರಾಕ್ಷಸರಂಥ ನೀಚರಿಂದ ನಾವು ಮರಗಿ ಸಾಯೋದಾತೊ
ಲೆಕ್ಕಾ ಹಾಕಿ ನಾವು ಸಾಲಿಕಲತರ ಬಾಳ್ ಬಂಗಾರಾತೊ

ಹೆಬ್ಬಟ್ಟ ಒತ್ತುವ ಕುರಿಯಾಗಿ ನಾವು ಬಾಳೋದಿನ್ನ ಸಾಕೊ
ಹೆಬ್ಬಟ್ಟ ಒತ್ತಿ ಹೊಲಾ ಮನಿ ಎಲ್ಲಾ ಕಳಕೊಳ್ಳುವುದ್ಯಾಕೊ
ಒಂದಕ್ಕ ಒಂಬತ್ತ ಬರದರ ತಿಳಿಯದ ಹೆಬ್ಬಟ್ಟ ಒತ್ತುದ್ಯಾಕೊ
ಅಕ್ಷರ ಜ್ಞಾನಾ ನಮಗ ಆದರ ದುಃಖ ಓಡಿ ಹೋತೊ

ಇಪ್ಪತ್ತ ಕೊಟ್ಟ ಇನ್ನೂರ ಬರೆಯುವ ಮೋಸದ ಜನರಿಗೆ
ಒಪ್ಪತ್ತ ಊಟಾ ಸಿಗದ ಸಾಯತಾರ ಹರಾಮಖೋರರಾಗಿ
ಸಂಪತ್ ಲಕ್ಷ್ಮಿ ಓಡೋಡಿ ಬರತಾಳ ನಮ್ಮ ಮನಿಗೆ ಸಾಗಿ

೧. ಜಾನಪದ ಹಾಡುಗಳು ಸಂ.ಡಾ.ಶ್ರೀರಾಮ ಇಟ್ಟಣ್ಣನವರ, ಡಾ. ಬಸವರಾಜ ಮಲಶೆಟ್ಟಿ ಮಟ-೭

ಇಷ್ಟ ತಿಳಿದ ನೀವು ಸಾಲಿ ಕಲತ ಬಾಳಿರಿ ಶ್ಯಾಣ್ಯಾರಾಗಿ

ನಮ್ಮ ಸರಕಾರಾ ಸಣ್ಣಮಣ್ಣ ಆಗಿ ಕಲಸತಾರ ನಿಂತೋ
ನಮ್ಮ ಮನಕ್ಕ ನಾವು ನಾಚಿ ಸಾಲಿ ಕಲೀಬೇಕೋ ಕುಂತೋ
ಅಕ್ಷರ ಜ್ಞಾನಾ ಅಕ್ಷಯ ಪಾತ್ರೆ ತಿಳಿಯುವಂಥ ಮಾತೋ
ಹೆಬ್ಬಟ್ಟಿನ ಜನಾ ಜಾಣರಾಗಿ ನೀವು ತೋರಿರಿ ಹಿಮ್ಮತ್ತೋ

ನಮ್ಮ ದೇಶಕ್ಕ ಕಲಿತ ಜನರದು ಬಾಳ ಕೊರತಿ ಐತ್ಯೋ
ಕಮ್ಮಿ ಇಲ್ಲ ಯಾವದರಾಗ ನಮ್ಮ ದೇಶ ಮುಂದ ಐತ್ಯೋ
ನಮ್ಮ ಕಲ್ಯಾಣ ನಮ್ಮ ಕೈಯಾಗೈತಿ ಸಿಗದು ಕಳೆದ ಹೊತ್ತೋ
ಗಂಗಾತನಯ ಕವಿ ಅಪ್ಪಣ್ಣನ ತತ್ವ ನಮಗ ಆಣಿ ಮುತ್ತೋ [೨]

ಮಿತ ಸಂತಾನ :

ದೇಶದೊಳು ಆಶೆಕಾಗಿ ಮೋಸ ಹೋಗಾವರು ಬಾಳ
ಹಾಳು ಆಗದ ತಿಳಿಯಿರಿ ಸರ್ವರೆ
ಹೆಚ್ಚಿಗಿ ಮಕ್ಕಳನ ಹಡದ ಜಗದೊಳಗೆ ಕೊರಗುವರು
ಕೂಳಗೇಡಿ ಆಗಿ ತಿರಗತಾರ ಹಾರಿತ ಅಬರು
ಹತ್ತ ಹಡಿಯೊದಕ್ಕಿಂತ ಎರಡ ಮುತ್ತು ಹಡೆಯೋವಂಥಾ ಜನರು
ಶ್ರೇಷ್ಠ ಅನಿಸಿಕೋತಾರ ಇದನ ತಿಳಿದ ನಡಿಯಿರಿ ಅಕ್ಕತಂಗೇರ

ಮಕ್ಕಳ ಹೆಚ್ಚಾಗಿ ನಾವು ತೊಂದ್ರಿ ಒಳಗ ಬೀಳಬಾರ್ದು
ಎರಡ ಮುತ್ತಿನಂಥ ಮಕ್ಕಳಿಂದ ವಂಶ ಉದ್ಧಾರಾ
ಎರಡ ಮಕ್ಕಳ ನಡುವೆ ಇರಬೇಕಾ ಅಂತರಾ,
ಮೂರ ವರ್ಷಕ್ಕೊಂದು ಹಡದರ ಚೆಂದಾಗಿ ಉಳಿಯುವದು ಶರೀರಾ
ಕುಟುಂಬ ಯೋಜನಾ ಕೇಂದ್ರದೊಳಗ ನಿಮಗ ತಿಳಿ ಹೇಳುವರಾ
ಅದರಂತ ನಡಕೊಂಡ್ರ ಏನ ಇಲ್ಲ ತಕರಾರಾ

ಮತ್ತೊಂದು ಮಾತಾ ನೆನಪ ಆತ ನನಗ
ತಿಳಿಸಿ ಹೇಳತೇನಿ ಕೇಳ್ರಿ ಬುದ್ಧಿವಂತರು
ಬಳಗ ಹೆಚ್ಚಾದ್ರ ಬನ್ನಿ ಎಲಿಯಾಗ ಉಣಬೇಕಂತಾರು
ಇಂಥಾ ಬುದ್ಧಿಗೇಡಿಗಳು ಬಾಳ ಮಕ್ಕಳನ ಹಡದಾರು
ಮೂಢನಂಬಿಕೆಯಿಂದ ಮಕ್ಕಳನ್ನ ದೇವರಂದಾರು

---

೨. ಅವೇ. ಪುಟ-೧೦

ಇವರು ಅನ್ನಗೇಡಿಗಳಾಗಿ ಮುಂದ ಮಣ್ಣ ತಿನ್ನುವರು.

ಮಕ್ಕಳನ್ನ ಹಡಿಯೋದಕ್ಕ ಬ್ಯಾಡ ಅನ್ನುದಿಲ್ಲಾ
ಎರಡ ಮಕ್ಕಳಿದ್ರ ಅನುಕೂಲಾ
ನಾಕಾರ ಹಡದ ಆಗ್ತೇರಿ ಗಾಲ್ಕೇಲಾ
ಪೌಷ್ಟಿಕ ಅಹಾರ ಮಕ್ಕಳಿಗೆ ಸಿಗೊದಿಲ್ಲ
ಸಾಲಿ ಕಲಿಸುವುದು ಜಡಾ ಆದಿತಲ್ಲಾ
ಲಕ್ಷಗೊಡರಿ ಮೂಢತನಾ ಒಳೇದಲ್ಲಾ

ಅಡತಾರ ದಾರಿ ಹಿಡಿದ ದುಡುಕಿನೊಳಗ ನಡದರ
ಕೆಡಕ ಆದೀತಂತಾರ ಹಿರಿಯರು
ರೂಢಿಯೊಳಗ ತಿಳಿದ ನೋಡ್ರಿ ಬುದ್ಧಿವಂತರು
ನನ್ನ ಮಾತಿನ ಮ್ಯಾಲ ಇರಬೇಕ ನಿಮ್ಮನದರು
ಗ್ರಾಮ ಬೆಳ್ಳಿಗಟ್ಟಿ ಮಹಾದೇವ ನನ್ನ ಹೆಸರು
ತಂದಿ ಬಸವೇಶ್ವರನ ಮ್ಯಾಲ ಭಕ್ತಿ ಇಡಬೇಕ ಸರ್ವರು. [೩]

– ಇಂಥ ಅನೇಕ ಬಗೆಯ ಹಾಡುಗಳು ಕಾರ್ಯಾಗಾರದ ಫಲವಾಗಿ ಸಂಪಾದಿಸಲ್ಪಟ್ಟ ಜಾನಪದ ಹಾಡುಗಳ ಸಂಗ್ರಹದಲ್ಲಿವೆ.

ಈ ಬಗೆಯ ಯಾವ ಕಾರ್ಯಗಾರವು ಇಲ್ಲದೆ ಸಹಜವಾಗಿ ಮದ್ಯಪಾನದ ದುಷ್ಪರಿಣಾಮದಂಥ ವಿಷಯವನ್ನು ತೆಗೆದುಕೊಂಡು ಅಗರಖೇಡದ ಅಣ್ಣಾರಾಯ ಗೌಡರ ಎಂಬುವರು ಲಾವಣಿ ಒಂದನ್ನು ರಚಿಸಿದ್ದಾರೆ. ಜನಪದ ಕವಿಗಳು ಕೇವಲ ಸಂಪ್ರದಾಯ ಶರಣರಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಹೊಸ ಆವಿಷ್ಕಾರಕ್ಕೆ ಕವಿ ಹೃದಯ ತೆರೆಯುತ್ತಾರೆ. ಇಂಥ ಹಾಡು ರಚಿಸಬೇಕೆಂಬ ಕಲಿಕೆಯ ಒತ್ತಡವಿಲ್ಲದೇ ಕೇವಲ ಅಂತಃಸ್ಫೂರ್ತಿಯಿಂದ ಬರೆದ ಗೀಗೀ ಮೇಳಕ್ಕೆ ಹೊಂದಿಸುವುದು ಅವರ ಅನ್ವಯಿಕ ವಿಧಾನವನ್ನು ಸ್ಪಷ್ಟಗೊಳಿಸುತ್ತದೆ. ಅಣ್ಣಾರಾಯ ಗೌಡರ ಲಾವಣಿಯ ಕೆಲವು ಪ್ರಾರಂಭಿಕ ಸಾಲುಗಳನ್ನಿಲ್ಲಿ ನೋಡಬಹುದು.

ಮದ್ಯದ ಮಹಿಮೆ :

ನೆರೆದು ಕುಳಿತಿರವಂಥ ನನ್ನಪರಮ ಹಿರಿಕಿರಿಯರಿಗೆಲ್ಲಾ
ಶರಣ ಮಾಡಿ ಸಾರುವೆನು ತರುಳಂತೆ ನಾ ।
ನೀವು, ಸರಳ ಶಾಂತ ಭಾವದಿಂದ ಕೇಳಿರಿ ಪದವನ್ನಾ ।

---

೩. ಅದೇ ಪುಟ–೧೬,೧೭

ಪುಟದ ಸಂಖ್ಯೆ.....
ಕ್ರಮ ಸಂಖ್ಯೆ.....87875 ಕ್ರಮಪದ ಪರಿಶೀಲನೆ

ಮರುಳ, ಶರೇ ಸಿಂಧಿ ಗಾಂಜಿ ಅಪು ಭಂಗಿ ವ್ಯಸನಾ ।
ನುರಿತು ಕಲಿತ ನಾಗರಿಕರು ಅರಿವು ಇಲ್ಲದೇ ಹಳ್ಳಿಗರು
ಬೆರೆತುಕೊಂಡು ಮಾಡುತಿಹರು ಮದ್ಯ ಪಾನವನಾ ॥
ಮಾನವ, ಧರಮಬಿಟ್ಟು ದಾನವರಂಥ ಹೇಸಿ ಕೃತಿಯನ್ನಾ ॥೮॥

ಯರೋಪದವರ ಶಳುವಿಗೆ ಬಿದ್ದು ಭಾರತದವರು ಚೈನಿಗೆದ್ದು
ಪರದೇಶದಿಂದ ಬರುವ ಬ್ರ್ಯಾಂಡಿ ವಿಸ್ಕಿಗಳನಾ ।
ಒಳ್ಳೇ, ಹರುಷದಿಂದ ಸೇವನೆಗಾಗಿ ಕ್ಲಬ್ಬುಗಳನಾ, ।
ಮಹಾ, ಧುರೀಣರೆಂಬ ವಕೀಲ ಡಾಕ್ಟರರು ಮಾಡಿ ಸ್ಥಾಪನಾ ।
ಇರಾಣಿ ಹೋಟೇಲಿನಿಂದ ಖಾನಾ ತರಿಸಿಕೊಂಡು ಕಲಿತ ಜನಾ
ಮರಿಗೆ ಕುಳಿತುಕೊಂಡು ಮಾಡುವರು ಬ್ರ್ಯಾಂಡಿ ಭೋಜನಾ।
ನಾನು, ವರ್ಣಿಸಲಾರೆ ಸುಧಾರಕ ಸಮಾಜ ಘಾತುಕವನಾ ॥೧॥

ಮದ್ಯ ವ್ಯಸನದ ದುಷ್ಪರಿಣಾಮಗಳನ್ನು ಪರಿಣಾಮಕಾರಿಯಾಗಿ ವಿವರಿಸುವ ಈ ಲಾವಣಿ ನಾಲ್ಕು ಚೌಕುಗಳಷ್ಟು ಸುದೀರ್ಘವಾಗಿದೆ. ಹೀಗೆ ಅನೇಕ ಆಧುನಿಕ ಅಸಂಗತ ವಿಚಾರಗಳನ್ನು ಅನೇಕ ಲಾವಣಿಕಾರರು ವಿಡಂಬಿಸಿದ್ದಾರೆ.

೫೫
O,33,91 TIT J P074;3

ಗೀಗೀ ಪದಗಳನ್ನು ಶಾಲಾ ಕಾಲೇಜಿನ ಪಠ್ಯಗಳಲ್ಲಿ ಇದುವರೆಗೆ ಸೇರಿಸಿಲ್ಲ, (ಜಾನಪದ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಇಷ್ಟೊಂದು ಜನಪ್ರಿಯ ಮಾಧ್ಯಮವಾಗಿರುವ ಲಾವಣಿ, ಗೀಗೀ ಹಾಡುಗಳು ನಮ್ಮ ವಿದ್ಯಾರ್ಥಿಗಳ ಪಠ್ಯದಲ್ಲಿ ಇದುವರೆಗೆ ಯಾಕೆ ಸೇರಿಸಿಲ್ಲವೋ ಕಾರಣ ತಿಳಿಯುತ್ತಿಲ್ಲ. ಬಹುಶಃ ಇವು ದೀರ್ಘವಾದವುಗಳು ಎಂಬ ಭಾವನೆ ಮೊದಲನೆಯದಾಗಿರಬೇಕು. ಮೂರು ನಾಲ್ಕು ಪುಟಗಳ ಹಳಗನ್ನಡ ಪದ್ಯಭಾಗವನ್ನು ಪಠ್ಯಕ್ಕೆ ಅಳವಡಿಸುವದಾದರೆ ಗೀಗೀ ಪದಗಳು ಏಕೆ ಬೇಡ ? ಇವು ಹಿಂದಿನ ಸಂಪ್ರದಾಯಬದ್ಧ ಪದಗಳೇ ಇರಲಿ, ಇಂದಿನ ಆಧುನಿಕ ವಿಷಯಗಳನ್ನೊಳಗೊಂಡ ಪದಗಳೇ ಇರಲಿ ಪಠ್ಯಗಳಲ್ಲಿ ಸೇರಿಸಿದರೆ ಸಹಜವಾಗಿ ಬಹುದೊಡ್ಡ ವ್ಯಾಪ್ತಿಯಲ್ಲಿ ಗೀಗೀ ಪದಗಳಿಗೆ ಮರಳಿ ಜನಪ್ರಿಯತೆ ಒದಗಿಸಬಹುದು. ಈ ಪಠ್ಯಕ್ಕೆ ಆಯ್ಕೆಯಾಗುವ ಗೀತೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಸರಳವಾದ ಕಥೆಯನ್ನೋ, ಸಾಂದರ್ಭಿಕ ಪದವನ್ನೋ ಅಳವಡಿಸಿದರೆ ವಿದ್ಯಾರ್ಥಿಗಳು ಚೆನ್ನಾಗಿ ಗ್ರಹಿಸಬಲ್ಲರು.

ಆಧುನಿಕ ವಿಷಯಗಳತ್ತ ಮುಖ ತಿರುಗಿಸಿ ಈ ಮೇಳಗಳನ್ನು

೪. ಹರದೇಶಿ ನಾಗೇಶ–ಸಂ.ಡಾ.ಬಿ.ಬಿ.ಹೆಂಡಿ, ಡಾ.ಎಂ.ಜೆ.ಬಿರಾದಾರ, ಡಾ.ಎಂ.ಎಸ್. ಲಕ್ಷ್ಮೆ ಮಟ – ೧೦೫

ಉತ್ತೇಜಿಸುವದರಲ್ಲಿ ನಾವು ಮಾಡಬಹುದಾದ ಇನ್ನೊಂದು ಬಹುದೊಡ್ಡ ಸಾಧನೆಯೆಂದರೆ ಜಾತ್ಯಾತೀತತೆಯನ್ನು ಸ್ಥಾಪಿಸುವುದರತ್ತ ಕ್ರಮಿಸಬಹುದು. ಈ ಮೇಳದಲ್ಲಿ ಹಾಡುವವರು ಒಂದೇ ಜಾತಿ, ವರ್ಗಕ್ಕೆ ಸೇರಿದವರಲ್ಲ. ಹರಿಜನರು, ಕುರುಬರು, ಲಿಂಗಾಯಿತರು, ಹೀಗೆ ನಾನಾ ಬಗೆಯ ಜನ ಈ ಮೇಳದಲ್ಲಿ ಒಂದಿಲ್ಲೊಂದು ಕಾರ್ಯ ನಿರ್ವಹಿಸುತ್ತ ಭಾಗಿಗಳಾಗುತ್ತಾರೆ. ಇವರಿಗೆ ಯಾವುದೇ ಜಾತಿಯ ತಾರತಮ್ಯವಿಲ್ಲ. ಮೇಳದಲ್ಲಿ ದನಿಗೂಡಿಸಿ ಹಾಡುವಂತೆ ಒಂದೆಡೆಯಲ್ಲಿ ಊಟ ಮಾಡಬಲ್ಲರು. ಒಂದೆಡೆಯಲ್ಲಿ ಮಲಗಬಲ್ಲರು. ಇವರ ಈ ಜಾತ್ಯಾತೀತ ಭಾವನೆ ನೋಡುಗರಲ್ಲಿ ಸಮಾನ ಭಾವನೆ ತರಲು ಸಾಕು. ಈ ದೃಷ್ಟಿಯಿಂದ ಗೀಗೀ ಮೇಳ ಒಂದು ಮಾದರಿಯಾಗಿ ನಿಲ್ಲಬಲ್ಲದು.

ಬಹಳಷ್ಟು ಜನ ಹರಿಜನ ಹೆಣ್ಣುಮಕ್ಕಳು ಈ ಗೀಗೀ ಮೇಳದಲ್ಲಿ ಭಾಗಿಗಳಾಗುತ್ತಾರೆ. ಈ ಮೂಲಕ ಜಾತ್ಯಾತೀತ ಭಾವನೆ ಅಷ್ಟೇ ಅಲ್ಲ ಗಂಡು-ಹೆಣ್ಣಿನ ಸಮಾನ ಮನಸ್ಕತೆಯನ್ನು ಇದು ಬಿಂಬಿಸುತ್ತದೆ. ಹೀಗೆ ಹೆಣ್ಣುಮಕ್ಕಳನ್ನು ಉತ್ತೇಜಿಸಿದ್ದು ಈ ಮೇಳದ ವೈಶಿಷ್ಟ್ಯವಷ್ಟೇ ಅಲ್ಲ, ಒಂದು ಮಾರ್ಗದರ್ಶಿ ಅಂಶವೂ ಕೂಡ ಹೌದು. ಜಾತಿ ಕಲ್ಪನೆ ಗಾಢವಾಗಿದ್ದ ಕಾಲದಲ್ಲಿ ಹೆಣ್ಣುಮಕ್ಕಳು ಹಾಡುವುದು ಉಳಿದವರಿಗೆ ತ್ಯಾಜ್ಯವಾಗಿ ಕಂಡಿರಬಹುದು. ಇಂದು ಹೊಸ ವಿಷಯಗಳಿಗೆ ಗೀಗೀ ಪದಗಳನ್ನು ಹೊಂದಿಸಿಕೊಳ್ಳುವಾಗ ಮೇಳದ ರೀತಿಯೂ ಪರಿಷ್ಕರಣಗೊಂಡು ಅನ್ಯಜಾತಿಯ ಹೆಣ್ಣುಮಕ್ಕಳು ಇದರಲ್ಲಿ ಭಾಗಿಗಳಾಗುವಂತಾದರೆ ಎಷ್ಟು ಸಹಜವೆನಿಸುತ್ತದೆ ! ಒಂದು ಕಾಲಕ್ಕೆ ವೃತ್ತಿ ರಂಗಭೂಮಿಯಲ್ಲಿ ನಟಿಸುತ್ತಿದ್ದ ಕಲಾವಿದೆಯರನ್ನು ಕಾಣುತ್ತಿದ್ದ ಸಾಮಾಜಿಕ ದೃಷ್ಟಿ ಇಂದು ಹಾಗೆಯೇ ಉಳಿದಿಲ್ಲ. ಇಂದು ಹವ್ಯಾಸಿ ರಂಗಭೂಮಿಯಲ್ಲಿ ಮೇಲುಜಾತಿಯ, ಮೇಲು ವರ್ಗದ ಹೆಣ್ಣುಮಕ್ಕಳು ಯಾವುದೇ ಮುಲಾಜಿಲ್ಲದೆ ಭಾಗವಹಿಸುತ್ತಿದ್ದಾರೆ. ಸಮಾಜವೂ ಇದಕ್ಕೆ ಮನ್ನಣೆ ನೀಡುತ್ತದೆ. ಇದೇ ರೀತಿ ಎಲ್ಲ ವರ್ಗದ ಹೆಣ್ಣು ಮಕ್ಕಳು ಗೀಗೀ ಮೇಳದಲ್ಲಿ ಭಾಗವಹಿಸಿದರೆ ಈ ವಲಯದ ಅಂತಸ್ತಿನ ಪರಿಕಲ್ಪನೆ ಎಷ್ಟೋ ಕಡಿಮೆಯಾಗಿ ಅದು ಸಮಾಜಕ್ಕೊಂದು ಮಾದರಿಯದೀತು !

೬

ಆಧುನಿಕ ಶಿಷ್ಟ ಕವಿಗಳೂ ಗೀಗೀ ಪದಗಳ ಸೃಷ್ಟಿಗೆ ತೊಡಗಿದರೆ ಈ ಪ್ರಕಾರವನ್ನು ಎಷ್ಟೋ ಉತ್ತೇಜಿಸಿದಂತಾಗುತ್ತದೆ. ಶಿಷ್ಟಪದ ಕಾವ್ಯದೆದುರು ತಮ್ಮ ಜನಪದ ಕಾವ್ಯ ಅಷ್ಟೊಂದು ದೊಡ್ಡದಲ್ಲ ಎಂಬ ಕೀಳರಿಮೆ ಬಹಳಷ್ಟು ಜನ ಜನಪದ ಕವಿಗಳಿಗಿದೆ. ಈ ಕೀಳರಿಮೆಯನ್ನು ನಿವಾರಿಸುವಲ್ಲಿ ಇಡಬಹುದಾದ ಮೊದಲ ಹೆಜ್ಜೆ ಎಂದರೆ ಶಿಷ್ಟ ಪದ ಕವಿಗಳು ಇಂಥ ಗೀತರಚನೆಗೆ ಕೈ ಹಾಕುವುದು. ಇದರಿಂದ ಎರಡು ಅಂಶಗಳನ್ನು ನಾವು

ಬಲಗೊಳಿಸಬಹುದು. ೧. ತಮ್ಮ ಕಾವ್ಯ ಕಡಿಮೆಯಲ್ಲವೆನ್ನುವ ಭಾವನೆ ಜನಪದ ಕವಿಗಳಿಗೆ ಮೂಡುತ್ತದೆ. ೨. ನಾವೂ ಅವರು ಸಮಾನಸ್ಕಂಧರು ಎಂಬ ಭಾವ ಬೆಳೆಯುತ್ತದೆ.

ಉತ್ತರ ಕರ್ನಾಟಕದ ಅಷ್ಟಿಷ್ಟು ಕವಿಗಳು ಈ ದಾರಿಯಲ್ಲಿ ಕ್ರಮಿಸಿದ್ದಾರೆ. ಪ್ರಸ್ತುತ ಲೇಖಕನ ಎರಡು ಲಾವಣಿಗಳು ಹೊಳಿಸಾಲ ಬಳ್ಳಿ ಮತ್ತು ಗಾಲಿ ಉಳ್ಳತ್ಯೆತಿ ಎಂಬ ಕವನ ಸಂಕಲನದಲ್ಲಿ ಪ್ರಕಟಗೊಂಡಿವೆ. ಒಂದು ಬರಗಾಲದ ದಾರುಣತೆಯನ್ನು ಹೇಳಿದರೆ ಇನ್ನೊಂದು ಪಟ್ಟಣದ ದೈನಂದಿನ ಬದುಕನ್ನು ವಿಡಂಬಿಸುತ್ತದೆ. ಬಿ.ಆರ್.ಪೋಲೀಸ್‌ಪಾಟೀಲರ ಗೀಜಗನ ಗೂಡು ಎಂಬ ಲಾವಣಿ 'ಜಾನಪದ ಹಾಡುಗಳು' ಸಂಗ್ರಹದಲ್ಲಿ ಪ್ರಕಟಗೊಂಡಿದೆ.

೭

ಇಂದಿನ ಜಾನಪದ ಅಭ್ಯಾಸಿಗಳು ಅಲ್ಲಲ್ಲಿ ಉಳಿದಿರುವ ಮೇಳಗಳನ್ನು ಪ್ರತ್ಯಕ್ಷದರ್ಶಿಸುವುದು ಒಳ್ಳೆಯದು. ನಮ್ಮಲ್ಲಿ ಬಹಳಷ್ಟು ಜಾನಪದ ಅಭ್ಯಾಸಿಗಳಿಗೆ ಪ್ರಕಟಿತ ರೆಡಿಮೇಡ್ ಸಂಗ್ರಹಗಳನ್ನೇ ಆಶ್ರಯಿಸುವುದು ಚಟವಾಗಿ ಬಿಟ್ಟಿದೆ: ಇಂಥ ಸಂಗ್ರಹಗಳನ್ನೇ ಸಂಶೋಧಕರು ನೆಚ್ಚಬಾರದು. ಅವನಿಗೆ ವಿಸ್ತೃತವಾದ ಜಾನಪದ ಜೀವನವೇ ಮುಖ್ಯವಾಗಬೇಕು. ಜನಪದರ ಮಧ್ಯ ನಿಂತುಕೊಂಡೇ ತನ್ನ ಅನುಭವ ಸಾಮಗ್ರಿಯನ್ನು ಬೆಳೆಸಿಕೊಳ್ಳಬೇಕು. ಯಾಕೆಂದರೆ ಕವಿ ಜನಪದನೇ ಇರಲಿ, ಶಿಷ್ಟನೇ ಇರಲಿ, ಪ್ರಸ್ತುತ ಬದುಕಿಗೆ ಪೂರ್ಣ ಕುರುಡನಲ್ಲ. ಈ ಹಿನ್ನಲೆಯಲ್ಲಿ ನಮ್ಮ ಗೀಗೀ ಪದ ಕವಿಗಳು ತಮ್ಮ ಸಾಹಿತ್ಯವನ್ನು ಅಲ್ಲಲ್ಲಿ ಅಷ್ಟಿಷ್ಟಾದರೂ ಸ್ವಂತ ಸ್ಫೂರ್ತಿಯಿಂದಲೇ ಸುತ್ತಲಿನ ಜೀವನಕ್ಕೆ ಅನ್ವಯಿಸಿಕೊಂಡಿರಬಹುದು. ಇದು ಸಂಗ್ರಹಗಳಲ್ಲಿ ಸಿಗುವುದಿಲ್ಲ. ಅವರ ಮಧ್ಯ ನಿಂತಾಗ ಗೊತ್ತಾಗುತ್ತದೆ. ಆಗ ಮಾತ್ರ ನಾವು ಅವರ ಅನ್ವಯಿಕತೆಯನ್ನು ಅರಿತುಕೊಳ್ಳಬಹುದು. ಉತ್ತೇಜಿಸಬಹುದು.

೨೦೦೪ ಯಂತ್ರಸ್ಥ ಪ್ರಸಂ.ಮ್ಯೂ.ಎ.ಎಸ್.ಹುಬ್ಬಳ್ಳಿ

~~~*****~~~
~~~

ತಳವಾರ

ವೈಜ್ಞಾನಿಕ ದೃಷ್ಟಿ ಮೊಳೆತ ಮೇಲೆ ಜಾನಪದ ಸಾಹಿತ್ಯಾಭ್ಯಾಸದ ಪರಿಧಿ ಹಿಗ್ಗಿದೆ. ಜಾನಪದ ಹಾಡು, ಕತೆ, ಗಾದೆಗಳೊಂದಿಗೆಯೇ ಆಯಾ ಜನಾಂಗದ ಸಾಮಾನ್ಯ ನಡೆನುಡಿ, ಸಂಪ್ರದಾಯಗಳನ್ನೂ ಹಿಡಿದಿಡುವುದು ಅಭ್ಯಸಿಸುವುದು ಅವಶ್ಯವೆಂದು ತೋರತೊಡಗಿದೆ. ಪ್ರದೇಶ, ಜಾತಿ, ಉದ್ಯೋಗಗಳನ್ನವಲಂಬಿಸಿಕೊಂಡು ಜನಾಂಗ ಪರಿಸರದಲ್ಲಿ ವೈವಿಧ್ಯತೆ, ವೈಶಿಷ್ಟಗಳು ಪ್ರಕಟಗೊಳ್ಳುತ್ತವೆ. ಹೀಗೆ ವಿಭಾಗ ತಲೆದೋರಿದಾಗ ಒಂದೊಂದು ಪಂಗಡದ ಸಂಪ್ರದಾಯ, ಕಲೆಗಾರಿಕೆಗಳನ್ನು ಸಂಗ್ರಹಿಸಿ ಅಭ್ಯಸಿಸಿದರೆ ಒಂದು ಕಾಲಕ್ಕೆ, ಒಟ್ಟು ಸಮುದಾಯದ ಸ್ಥಿತ್ಯಂತರಗಳಿಗೆ ಕಾರಣ ಸಿಕ್ಕಬಹುದು. ಈ ಹಿನ್ನಲೆಯಲ್ಲಿ ಹಳ್ಳಿಯ ಸೇವೆಗೆ ಅಂಟಿಕೊಂಡ ತಳವಾರರನ್ನು ಅಭ್ಯಸಿಸಬಹುದು.

'ತಳವಾರ' ಎಂಬುದು ಸಮಾಸ ಪದ; ತಳ+ವಾರ=ತಳವಾರ. 'ತಳ' ಎಂಬ ಶಬ್ದಕ್ಕೆ ಹುಟ್ಟೂರು, ಸ್ವಂತದ ಊರು ಎಂಬರ್ಥವಿದೆ. ಜನಸಾಮಾನ್ಯರು ಅಪರಿಚಿತರು, ಪರಊರಿನವರು ಭೆಟ್ಟಿಯಾದಾಗ ಪರಿಚಯಕ್ಕಾಗಿ 'ನಿಮ್ಮ ತಳಯಾವುದು?' ಎಂಬ ಪ್ರಶ್ನೆ ಹಾಕುವುದು ಸಾಮಾನ್ಯ ವಿಷಯ. 'ಪಾರ' ಎಂಬುದಕ್ಕೆ ಸಂರಕ್ಷಣೆ ಎಂಬರ್ಥ, ತಳದ ಪಾರ ಮಾಡುವವನು 'ತಳವಾರ' ಎಂದಾದ. ತಳವಾರ ಶಬ್ಧ, ತಳವ, ತಳವರ, ತಳವಾರ, ತಳಾರ, ತಳಾರಿ, ತರವಾಳ ತಾಳವಾರ, ಮುಂತಾದ ರೂಪಗಳಲ್ಲಿ ಸಿಗುತ್ತವೆ. ಈ ಎಲ್ಲ ರೂಪಗಳಿಗೆ ಸಾಮಾನ್ಯವಾದ ಒಂದೇ ಅರ್ಥ–ಕಾವಲುಗಾರ, ಗ್ರಾಮರಕ್ಷಕ, ನಗರ–ರಕ್ಷಕ. ಅನೇಕ ಹಳಗನ್ನಡ ಗ್ರಂಥಗಳಲ್ಲಿ ಶಾಸನಗಳಲ್ಲಿ ತಳವಾರನ ಉಲ್ಲೇಖ ಹಲವಾರೆಡೆ ಆತನ ವೃತ್ತಿಯನ್ನು ಕೀಲಿಸಿಕೊಂಡೇ ದೊರೆಯುತ್ತದೆ. ವಡ್ಡಾರಾಧನೆಯ 'ವಿದ್ಯುಚ್ಚೋರನ ಕಥೆ' ಯಲ್ಲಿ ಯಮದಂಡನೆಂಬ ತಳವಾರನ ಉಲ್ಲೇಖ ದೊರೆಯುತ್ತದೆ.[೧] ಈ ಯಮದಂಡ ಊರ ಕಾವಲುಗಾರನೂ ಹೌದು, ರಾಜ ಅಪ್ಪಣೆಕೊಟ್ಟರೆ ಕಳ್ಳನಿಗೆ ಶಿಕ್ಷೆ ವಿಧಿಸುವವನೂ ಹೌದು. ಈ ಕಥೆಯ ಪ್ರಕಾರ ತಳವಾರಿಕೆಯೆಂಬುದು ಹೊಟ್ಟೆ ಹೊರೆಯಲು ಏನೋ ಇರಲಿ ಎಂದು ಅವಲಂಬಿಸಿದ ಹಗುರು ವೃತ್ತಿಯಲ್ಲ. ಆ ವೃತ್ತಿಯಲ್ಲಿ ಅವನಿಗಿರುವ ಶ್ರದ್ಧೆ ಇಲ್ಲಿ ಅಚ್ಚೊತ್ತಿದೆ. ಈ ವೃತ್ತಿಯನ್ನು ಕರಗತ ಮಾಡಿಕೊಳ್ಳಲು ಕ್ರಮವಾದ ಅಭ್ಯಾಸವಿದೆ. "ತಳಾರನ ಮಗನಪ್ಪುದರಿಂ ತನಗೆ ತಕ್ಕ ಕಳ್ಳರನಾರಯ್ವ ತೆರನಂ ಪೇಳ್ವ ಸುರಖಿ ಮೆಂಬೋದಂ ಕಲ್ತೊನ್" ಎಂಬ ಮಾತಿನಲ್ಲಿ ಕಳ್ಳರನ್ನು ಹಿಡಿಯುವ ವಿದ್ಯೆಯ ಹೆಸರು 'ಸುರಖಿ'ವೆಂಬುದು ಸ್ಪಷ್ಟವಿದೆ.

---

೧. ವಡ್ಡಾರಾಧನೆ–ಸಂ.ಡಾ.ಡಿ.ಎಲ್. ನರಸಿಂಹಾಚಾರ್ ಪುಟ–೧೨೮

ಮೋಳಗೆಯ ಮಾರಯ್ಯ ತನ್ನ ವಚನವೊಂದರಲ್ಲಿ 'ನೆಲೆ ತಳವಾರನಾದಡೆ ಕಳ್ಳಂಗೆ ಹೋಗಲೆಡೆಯುಂಟೇ' ಎಂದು ತಳವಾರನ ಹೊಣೆಯನ್ನು ಕುರಿತು ಹೇಳುತ್ತಾನೆ. ಕುಮಾರವ್ಯಾಸ ಭಾರತದಲ್ಲಿ –

ಅರಿಯೆ ನೀನೆಲೆ ಮರುಳೆ ಗರುಡನ
ತರವಳಿಕೆಯೊಳು ಹಾವು ಕನ್ನವ
ಕೊರೆದು ಬದುಕುವುದೇ ವೃಥಾ ಕಕ್ಕುಲಿತೆ ನಿನಗೇಕೆ

(ವಿರಾಟ ಪರ್ವ ೮–೭೩)

ಎಂದಿದೆ. 'ಎಳ್ಳು ಗಾಣಿಗ ಬಲ್ಲ ಸುಳ್ಯಸಿಂಪಿಗ ಬಲ್ಲ, ಕಳ್ಳರನು ಬಲ್ಲ ತಳವಾರ' ಎಂಬುದು ಸರ್ವಜ್ಞನ ಹೇಳಿಕೆ.

ಮೇಲಿನ ಎಲ್ಲ ಉಕ್ತಿಗಳನ್ನು ಗಮನಿಸಿದರೆ ತಳವಾರನ ಕೆಲಸ ಕಳ್ಳಕಾಕರ ಹಾವಳಿಯಿಂದ ಊರನ್ನು ರಕ್ಷಿಸುವುದು ಎಂಬುದು ಸ್ಪಷ್ಟವಾಗುತ್ತದೆ.

ಕೇವಲ ಊರ ರಕ್ಷಣೆಯಷ್ಟೇ ಅಲ್ಲ ಮುಂಚಿನ ಕಾಲದಲ್ಲಿ ತಳವಾರರು ಕಾಳಗದಲ್ಲಿಯೂ ಭಾಗವಹಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆ. ಯುದ್ಧಕ್ಕಾಗಿ ರಾಜರು ಬೇರೆ ಬೇರೆ ಊರುಗಳಿಂದ ತಳವಾರರನ್ನು ಕರೆಸುತ್ತಿದ್ದರೆಂಬ ವಿಷಯ ಕುಮಾರವ್ಯಾಸ ಭಾರತದಿಂದ ತಿಳಿದುಬರುತ್ತದೆ.

ಆಹವಕೆ ನಿನ್ನೂರ ತಳವರ
ಗಾಹಿನವರನು ತಳುಹುವುದು ಸಂ
ದೇಹವೇ ನೀನಿಲ್ಲಿ ಸುಖದಲಿ ರಾಜ್ಯಮಾಡೆಂದ

(ಭೀಷ್ಮ ಪರ್ವ ೧–೧೧)

ಗ್ರಾಮ ರಕ್ಷಣೆ, ಕಾಳಗಗಳೊಂದಿಗೆ ಕಂದಾಯ ವಸೂಲಿ ಕಾರ್ಯವನ್ನೂ ತಳವಾರ ಮಾಡುತ್ತಿದ್ದ. "ತಳವಾರನಿಗೆ ಪಟ್ಟಗಟ್ಟಿದರೆ ಕುಳವಾರ ಹೋದೀತೆ?" ಎಂಬ ಗಾದೆ ಈ ಮಾತನ್ನು ಸಮರ್ಥಿಸುತ್ತದೆ. ತಳವಾರರಿಗೆ ಪ್ರತ್ಯೇಕವಾದ ಓಣಿ, ತಳವಾರನು ಕಾರ್ಯ ನಿರ್ವಹಿಸುತ್ತಿದ್ದ ಒಂದು ಸ್ಥಳ ಇವು ಕ್ರಮವಾಗಿ "ತಳವರಗೇರಿ" ಎಂದೆನಿಕೊಳ್ಳುತ್ತಿದ್ದವು.

* * *

ತಳವಾರರಿಗೆ ಸಮೀಪ ವರ್ತಿಯಾದ ಇನ್ನೆರಡು ವೃತ್ತಿಗಳೆಂದರೆ ಓಲೆಗಾರಿಕೆ

ಮತ್ತು ಕೋಲಕಾರಿಕೆ. ವಾಲಿಕಾರರಿಗೆ "ಹಳಬರು" ಎನ್ನುವುದು ಇನ್ನೊಂದು ಪರ್ಯಾಯ ಹೆಸರು. ಕೋಲಕಾರರಿಗೆ "ನಾಟಿಕಾರರು", "ಬಾರಿಕೇರರು" ಎಂದೂ ಕರೆಯುತ್ತಾರೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿ ತಳವಾರರಿಗೆ 'ಕಬ್ಬಿಲ' ಎಂದು ಕರೆಯುತ್ತಾರೆ. ವಾಲಿಕಾರರು, ತಳವಾರರು, ಕೋಲಕಾರರು ಯಾವುದೇ ಜಾತಿಯವರಿರಬಹುದು. ಹೆಚ್ಚಾಗಿ ಬೇಡರು, ಕುರುಬರು, ಅಂಬಿಗೇರರು ಇರುವುದು ವಿಶೇಷ. ಬಾರಿಕೇರರು ಅಂಬಿಗರೇ ಹೆಚ್ಚು. ತಳವಾರಿಕೆ ಎನ್ನುವುದು ಜಾತಿಮೂಲವಲ್ಲ. ವೃತ್ತಿಮೂಲ. ಹೆಚ್ಚಾಗಿ ಹಿಂದುಳಿದ ಜನ ಈ ವೃತ್ತಿಯನ್ನವಲಂಬಿಸಿದವರು – ಬೇಡರು, ಕುರುಬರು, ಅಂಬಿಗರು. ಹರಿಜನರು ಮುಂತಾಗಿ ಇದಕ್ಕೆ ಅಪವಾದವಾಗಿ ಅಲ್ಲಲ್ಲಿ ಲಿಂಗಾಯಿತರೂ ಹಳಬರಾಗಿರುವುದುಂಟು.

ಇತ್ತಿತ್ತಲಾಗಿ ಕೋಟೆ ಕಾಳಗಗಳು ಹೋದ ಮೇಲೆ ವಾಲಿಕಾರ, ತಳವಾರ, ಕೋಲಕಾರ ಇವರೆಲ್ಲರ ವೃತ್ತಿಗಳು ಕಲಸುಮೇಲೋಗರವಾಗುತ್ತಿವೆ. ಮುಂಚಿನ ಕಾಲದಲ್ಲಿ ಇವರು ಉದ್ಯೋಗಗಳಲ್ಲಿ ಸ್ಪಷ್ಟ ಭೇದಗಳಿದ್ದುವೇನೋ. ಒಂದು ಕಾಲಕ್ಕೆ ಓಲೆಕಾರರು ಕಾಳಗದವರೂ ಆಗಿದ್ದರೆಂಬುದು ಬಸವಣ್ಣನವರ ಒಂದು ವಚನದಲ್ಲಿ ಬರುತ್ತದೆ.

ಬೇಳಿಂಬ ಬಸುರಾಯಿತ್ತೆ ಕಡೆ !
ಬಾಳಿಗೆ ಫಲವಾಯಿತ್ತೆ ಕಡೆ, ನೋಡಾ !
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ !
ಮಾಡುವ ಭಕ್ತರಿಗೆ ಮನಹೀನವಾದಡೆ ಅದೇ ಕಡೆ
ಕೂಡಲ ಸಂಗಮದೇವಾ

ಓಲೆಕಾರ ಕಾಗದ-ಪತ್ರಗಳ ರವಾನೆಯೊಂದಿಗೆ ಕಾಳಗವನ್ನೂ ಮಾಡುತ್ತಿದ್ದನೆಂಬುದು ಮೇಲಿನ ಉದ್ಧರಣೆಯಿಂದ ಸ್ಪಷ್ಟವಾಗುವ ಅಂಶ. ಭಾರತದಲ್ಲಿ ಬ್ರಿಟೀಷರ ಅಧಿಪತ್ಯ ನೆಲೆಗೊಂಡ ಮೇಲೆ, ಯುದ್ಧಗಳಿಗೆ ವಿರಾಮಬಿದ್ದ ಮೇಲೆ ಓಲೆಕಾರನ ವೃತ್ತಿ ಕೇವಲ ಕಾಗದ ಪತ್ರಗಳ ಸಾಗಾಣಿಕೆಗೆ ಸೀಮಿತವಾಯಿತು. ಇನ್ನು ಅದು ಇಲ್ಲದಾಗ ಉಳಿದ ವೇಳೆಯಲ್ಲಿ ಗಸ್ತೀ ತಿರುಗುವುದೋ ಖಜಾನೆಗೆ ಹಣ ತುಂಬುವುದೋ ಕೊಲೆ ಆತ್ಮಹತ್ಯೆಗಳ ಸಂಧರ್ಭದಲ್ಲಿ ಹೆಣ ಕಾಯುವುದೋ ಮುಂತಾಗಿ ಇತರ ಕೆಲಸಗಳು ಅಂಟಿಕೊಂಡವು. ವಾಲಿಕಾರ 'ಸರಕಾರ'ಕ್ಕೆ ಸಮೀಪನಾದರೆ ತಳವಾರ ಸಾರ್ವಜನಿಕರಿಗೆ ಹೆಚ್ಚು ನಿಕಟವರ್ತಿ. ಹುದ್ದೆಯ ದೃಷ್ಟಿಯಿಂದ ವಾಲಿಕಾರನಿಗಿಂತಲೂ ತಳವಾರ ಸಣ್ಣವನಾದ. ಕೋಲಕಾರರು ಇನ್ನೂ ಸಣ್ಣವರಾಗಿ ಕೇವಲ ಬಟ್ಟೆಯೊಗೆಯುವ ಬಾಂಡಿ ತೊಳೆಯುವ ನಿಕೃಷ್ಟ ಕೆಲಸಗಳಿಗೆ ಅಂಟಿಕೊಂಡರು.

ತಳವಾರಿಕೆ ವೃತ್ತಿಮೂಲವಾಗಿರುವುದರಿಂದ ಇಲ್ಲಿ ಪಂಗಡದ ಪ್ರಶ್ನೆ ಬರುವುದಿಲ್ಲ. ಆಯಾ ಜಾತಿಗೆ ಸಂಬಂಧಿಸಿದಂತೆ ಪಂಗಡಗಳು ನಿರ್ಮಾಣಗೊಳ್ಳುತ್ತವೆ. ಉದಾಹರಣೆಗೆ

ಕುರುಬ ಜನಾಂಗದವರು ತಳವಾರರಾಗಿದ್ದರೆ ಅವರು ಹತ್ತಿಕಂಕಣವೋ ಉಣ್ಣಿಕಂಕಣವೋ ಪಂಗಡವನ್ನು ಅವಲಂಬಿಸುತ್ತಾರೆ. ಈ ಕಂಕಣಗಳಲ್ಲಿ ಕೂಡಾ 'ಬೆಡಗ'ವೆಂದು ಉಪ ವಿಭಾಗಗಳು ಹೊರಡುತ್ತವೆ. ಬೇಡ ಜನಾಂಗದಲ್ಲಿಯೂ ಬೇರೆ ಬೇರೆ ಬೆಡಗುಗಳಿವೆ. ಮದುವೆ, ದಿನಕರ್ಮಗಳು ಆಯಾ ಜಾತಿ ಸಂಪ್ರದಾಯಗಳನ್ನೇ ಅನುಸರಿಸಿಕೊಂಡು ನಡೆಯುತ್ತವೆ. ತಳವಾರ ವೃತ್ತಿಯನ್ನವಲಂಬಿಸಿದ ಬೇಡರಿಗೂ ತಳವಾರೇತರ ಬೇಡರಿಗೂ ಮದುವೆಯ ರೀತಿ ರಿವಾಜುಗಳಲ್ಲಿ ಅಂತರವಿಲ್ಲ. ಬೀಗತನದಲ್ಲಿ ಅದೇ ಜಾತಿಯ ಪಂಗಡ, ಬೆಡಗುಗಳ ಹೊಂದಾಣಿಕೆಯಾಗುತ್ತಿದ್ದರೆ ಮುಗಿಯಿತು, ಮದುವೆ ನಡೆಯುತ್ತದೆ. ಬೇಡರು, ಕುರುಬರು ತಳವಾರರೇ ಇರಬಹುದು ಜಾತಿ ಬೇರೆ ಬೇರೆಯಾಗುವುದರಿಂದ ಆ ಮನೆತನಗಳಲ್ಲಿ ಬೀಗತನ ಘಟಿಸುವುದಿಲ್ಲ.

ತಳವಾರರು ಒಂದೇ ಜಾತಿಯವರಿರುವುದಿಲ್ಲವಾದ್ದರಿಂದ ತಳವಾರರಿಗೆ ಎನ್ನುವಂತೆ ಪ್ರತ್ಯೇಕ ಆರಾಧ್ಯ ದೈವದ ಅಸ್ತಿತ್ವವಿಲ್ಲ. ಆಯಾ ಜಾತಿಗೆ ಸಂಬಂಧಿಸಿದಂತೆ ಮನೆ ದೇವರುಗಳು.

ಮುಂಚಿನ ಕಾಲಕ್ಕೆ ಊರ ರಕ್ಷಣೆಯ ಭಾರ ತಳವಾರನ ಮೇಲೆ ಇರುತ್ತಿದ್ದುದರಿಂದ ತಾನೊಂದು ಗುರುತರ ಕಾರ್ಯ ನಿರ್ವಹಿಸುತ್ತಿದ್ದೇನೆಂಬ ಹೆಮ್ಮೆ ಅಭಿಮಾನಗಳು ಆತನಿಗಿದ್ದು, ಸಮಾಜದಲ್ಲಿ ದೊಡ್ಡ ಸ್ಥಾನವನ್ನೂ ಪಡೆದಿದ್ದ. ಕೋಟೆಗಳು ಉರುಳಿ ಅಗಸಿಯ ಬಾಗಿಲುಗಳೂ ಬಿದ್ದ ಮೇಲೆ ಇವನ ಜೀವನವೂ ಹೀನವಾಯಿತು. ಬರು ಬರುತ್ತ ಗೌಡನ, ಕುಲಕರ್ಣಿಯ, ಅಮಲದಾರನ ಚಾಕರಿಯ ಆಳಾಗಿ ನಿಂತ. ಅರಸರ ಭರಾಟೆ ಕಡಿಮೆಯಾದ ಮೇಲೆ, ಪೋಲಿಸರ ಕಾರ್ಯವ್ಯಾಪ್ತಿ ದೊಡ್ಡದಾಗುವುದಕ್ಕಿಂತ ಮೊದಲು ಊರ ಕಾವಲಿಗೆ ಅಥವಾ ಸೇವೆಗೆ ತಳವಾರರೇ ಮುಖ್ಯರಾಗಿದ್ದರು. ಇಂದು ತಳವಾರನ ಕಾರ್ಯಕ್ಷೇತ್ರ ತೀರ ಚಿಕ್ಕದಾಗಿದೆ. ಇತ್ತಿತ್ತಲಾಗಿ ಸಮಾಜದ ದೇವಕಾರ್ಯಗಳಲ್ಲಿ ಮದುವೆ ಮುಂಜವೆಗಳಲ್ಲಿ ಇವನು ಸಾರ್ವಜನಿಕರ ಸೇವೆ ಮಾಡಿಕೊಂಡಿದ್ದಾನೆ. ಗ್ರಾಮದ ಮಾರುತಿ ದೇವಸ್ಥಾನದಲ್ಲಿ ಯಾರಾದರೂ ಕಾರ್ತಿಕ ಹಚ್ಚುವ ಪ್ರಸಂಗದಲ್ಲಿ ಹಲಗಿಯವರನ್ನು ಕರೆದುಕೊಂಡು ಬರುವುದು ಇವನ ಕೆಲಸ. ಕಾರ್ತಿಕ ಹಚ್ಚುವ ಕಾರ್ಯಕ್ರಮ ಮುಗಿಯುವವರೆಗೆ ಅವರೊಂದಿಗೆ ಇದ್ದು ಅವರು ಹೇಳಿದ ಕೆಲಸ ಮಾಡಿಕೊಡುತ್ತ ಅಲ್ಲೆಲ್ಲಾ ತನ್ನ ಪರಿಮಿತಿಯಲ್ಲಿ ಬರುವ ವ್ಯವಸ್ಥೆಯನ್ನು ನೋಡಿಕೊಂಡಿರುತ್ತಾನೆ. ಗೌರವ್ವ, ಸೀಗವ್ವರನ್ನು ಕೂಡ್ರಿಸುವ, ಕಳಿಸುವ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ತನ್ನ ಕೈಲಾದ ಸಹಾಯ ಮಾಡುತ್ತಾನೆ. ಗೌರವ್ವ ಸೀಗವ್ವರನ್ನು ಕೂಡ್ರಿಸಿದ ಮನೆಯ ಮುಂದೆ ಅಥವಾ ಗುಡಿಯ ಮುಂದೆ ದೀಪದ ವ್ಯವಸ್ಥೆ ಮಾಡುವುದು, ಶಾಂತತೆಯನ್ನು ಕಾಯ್ದುಕೊಳ್ಳುವುದು, ಹಲಗೆಯವರನ್ನು ಕರೆತರುವುದು ಮುಂತಾದ ಕೆಲಸಗಳನ್ನು ಮಾಡುತ್ತಾನೆ. ಡಂಗುರ ಹೊಡೆಯುವ ಕೆಲಸಗಳನ್ನು ಮಾಡುತ್ತಾನೆ. ಡಂಗುರ ಹೊಡೆಯುವ ಕೆಲಸವನ್ನು ಬಹಳ ಊರುಗಳಲ್ಲಿ ತಳವಾರರು ಮಾಡುತ್ತಾರೆ. ಸಿಂದಗಿ ತಾಲೂಕಿನ ತಳವಾರರು ಮನೆ ಮನೆಗೆ ಎಕ್ಕೆ ಎಲೆ

ಹಂಚುತ್ತಾರಂತೆ.

ಸಾರ್ವಜನಿಕರು ಮದುವೆಯ ಸಂದರ್ಭದಲ್ಲಿಯೂ ತಳವಾರನಿಂದ ಸೇವೆಯನ್ನು ಅಪೇಕ್ಷಿಸುತ್ತಾರೆ, ಪಡೆಯುತ್ತಾರೆ. ಹಂದರಕ್ಕೆ ಮಾವಿನ ತಳಿರು ತಂದುಹಾಕುವುದು ಇವನ ಕೆಲಸ. ಹಿಂದುಳಿದವರಿಗೆ ಊಟಕ್ಕೆ ಹೇಳಿಬರುವವನು ಇವನೇ. ಉಳಿದ ಅಡಿಗೆಯನ್ನು ತಳವಾರರು ಕೋಲಕಾರರು ತೆಗೆದುಕೊಳ್ಳುತ್ತಾರೆ. ಕೋಲಕಾರರು ಇಲ್ಲದ ಊರಿನಲ್ಲಿ ಮದುವೆಯ ಅಡಿಗೆಯ ಪಾತ್ರೆಗಳನ್ನು ತಳವಾರರೇ ತೊಳೆಯುತ್ತಾರೆ. ಮದುವೆಯ ಮುಂಚಿನ ದಿನಗಳಲ್ಲಿ ತಳವಾರ ಮನೆಯ ಹೆಣ್ಣುಮಕ್ಕಳು ಮದುವೆ ಮನಗೆ ಹೋಗಿ ಕಾಳು ಹಸನು ಮಾಡುವ ಕಾರ್ಯವನ್ನು, ಬೀಸುವ ಕಾರ್ಯವನ್ನು ಕೈಗೊಳ್ಳುತ್ತಾರೆ. ಲಗ್ನ ಸಮಾರಂಭ ಮುಗಿದ ಮೇಲೆ ತಳವಾರ ಹೆಣ್ಣುಮಗಳಿಗೆ ಸೀರೆಯುಡಿಸಿ ಕುಬಸದ ಕಣ ಕೊಡುತ್ತಾರೆ. ಗಂಡಸರಿಗೆ ಒಲ್ಲಿ–ಪಟಕ ಉಡಿಸಬಹುದು, ಇಲ್ಲವೆ 'ಕುಸಿ'ಯೆಂದು ೫–೬ ರೂಪಾಯಿ ಕೊಟ್ಟು ಮುಗಿಸಬಹುದು. ಹಂದರದ ಮೇಲೆ ಲಗ್ನದ ದಿನ ಕುಬಸದ ಕಣವೊಂದನ್ನು ಒಗೆಯುತ್ತಾರೆ. ಅದು ತಳವಾರರಿಗೇ ಸಲ್ಲಬೇಕಾದ 'ಚಾಜ'. ಇನ್ನೊಂದು ಸಂದರ್ಭದಲ್ಲಿ ಇವರು ಕುಸಿ ಪಡೆಯುತ್ತಾರೆ: ಊರ ಹೆಣ್ಣುಮಗಳು ಲಗ್ನಕ್ಕೆ ಪರ ಊರಿಗೆ ಹೊರಟಾಗ ಇವರು ಅಗಸಿಯ ಹತ್ತಿರ ಗಾಡಿ ತರುಬಿ ಕುಸಿ ಕೇಳುತ್ತಾರೆ. ಮದುವೆಗೆ ಹೊರಟವರು ತಮ್ಮ ಯೋಗ್ಯತಾನುಸಾರ ಇವನಿಗೆ ಕುಸಿ ಕೊಟ್ಟ ಮೇಲೆ ಗಾಡಿಯನ್ನು ಮುಂದಕ್ಕೆ ಬಿಡುತ್ತಾರೆ.

ತಳವಾರನು ವಾಲಿಕಾರನಷ್ಟು ಗೌಡನಿಗೆ, ಕುಲಕರ್ಣಿಗೆ ಸಮೀಪವರ್ತಿಯಲ್ಲ–ದಿದ್ದರೂ ದೊಡ್ಡವರು ಎನ್ನುವ ದೃಷ್ಟಿಯಿಂದ ಅವರ ಅನೇಕ ಕಾರ್ಯಗಳನ್ನು ಮಾಡಬೇಕಾಗುತ್ತದೆ. ವಾಲಿಕಾರ ಮುಂಚಿನ ಕಾಲದಲ್ಲಿ ತನ್ನ ಊರಿಂದ ಬೇರೊಂದು ಊರಿಗೆ 'ರಸ್ತೆ' (ಸರಕಾರಿ ಖಜಾನೆಗೆ ಸಲ್ಲಬೇಕಾದ ಹಣ) ತುಂಬಲು ಹೋಗುವಾಗ ಸಂಗಡ ಒಬ್ಬ ತಳವಾರನನ್ನು ಕರೆದುಕೊಂಡು ಹೋಗುತ್ತಿದ್ದ. ಬಹುಶಃ ಹಣವನ್ನು ತೆಗೆದುಕೊಂಡು ಹೋಗುತ್ತಿರುವವ ತನ್ನ ರಕ್ಷಣೆಗಾಗಿ ಇವನನ್ನು ಕರೆದುಕೊಂಡು ಹೋಗುತ್ತಿದ್ದನೆಂದು ತೋರುತ್ತದೆ. ತಳವಾರ ಕೇವಲ ಸಾರ್ವಜನಿಕ ಕೆಲಸಗಳನ್ನಷ್ಟೇ ಅಲ್ಲ, ಅನೇಕ ವೇಳೆ ಪೋಲಿಸಗೌಡ ಹೇಳಿದಂತೆ ಅವನ ಮನೆಚಾಕರಿಯನ್ನೂ ಮಾಡಬೇಕಾಗುತ್ತಿತ್ತು. ತಳವಾರ ಗೌಡ ಕರೆಯಿಸಿದಾಗ ಚಾವಡಿಗೆ ಬರಬೇಕು, ಕುಲಕರ್ಣಿಯು ಹೇಳಿದವರನ್ನು ಊರಲ್ಲಿ ತಿರುಗಾಡಿ ಕರೆದುಕೊಂಡು ಬರಬೇಕು, ಊರಿಗೆ ಅಮಲದಾರರು ಬಂದಾಗ ಚಾವಡಿಯಲ್ಲಿ ತಪ್ಪದೇ ಹಾಜರಿರಬೇಕು. ಕೋಲಕಾರರು ಇಲ್ಲದ ಊರಿನಲ್ಲಿ ಸಾಹೇಬರ ಊಟದ ತಾಟು ತೊಳೆಯುವುದು, ಅರಿವೆ ಒಗೆಯುವುದು ತಳವಾರನ ಕೆಲಸ; ಚಾವಡಿಯನ್ನು ಸಾರಿಸುವವರೂ ತಳವಾರರೇ.

ಎಲ್ಲ ಊರಿನ ತಳವಾರರಿಗೆ ವತನಿ–ಜಮೀನುಗಳಿಲ್ಲ. ತಳವಾರನಿಗಿಂತ ವಾಲಿಕಾರ ದೊಡ್ಡವನೆಂಬುದರಿಂದ ಅವನಿಗೆ ಜಮೀನು ಹಾಕಿಕೊಟ್ಟು ತಳವಾರನನ್ನು

ಅಲಕ್ಷಿಸುತ್ತಿದ್ದಿರಬೇಕು. ತಳವಾರ ಅಥವಾ ವಾಲಿಕಾರ ಆಗಲು ಅರ್ಹತೆ ಪಡೆದ ಜಾತಿ, ಜನ ಸಾಕಷ್ಟಿದ್ದಾಗ ಎಲ್ಲರನ್ನೂ ಕರೆದು ಆ ಕೆಲಸ ಕೊಟ್ಟು ಮಾನವಾನ ಮಾಡಿ ಅವರನ್ನು ಹಿಡಿಯುವುದು ಆಗುವುದಿಲ್ಲ. ಊರಿನಲ್ಲಿ ಎಷ್ಟೇ ಮನೆತನಗಳಿದ್ದರೂ ಒಂದು ಅಥವಾ ಕೆಲವೊಂದು ಮನೆಗಳಿಗೆ ಮಾತ್ರ ಈ ವೃತ್ತಿ ಸೀಮಿತವಾಗಿರುತ್ತದೆ. ಒಂದೊಂದು ಊರಿಗೆ ಅಥವಾ ಹಳ್ಳಿಗೆ ವಾಲಿಕಾರರು, ತಳವಾರರು, ಕೋಲಕಾರರು – ಸರಾಸರಿ ಎರಡು ಮನೆತನಗಳು ಬೀಳುವಂತೆ ತೋರುತ್ತದೆ (ಬಳ್ಳಾರಿಯ ಕಡೆಗೆ ಸಮಾಜಕ್ಕೊಬ್ಬೊಬ್ಬರು ತಳವಾರರು ಇರುವರೆಂಬ ಸೂಚನೆಯನ್ನು ಡಾ॥ ಬಸವರಾಜ ಮಲಶೆಟ್ಟಿಯವರು ಕೊಟ್ಟಿದ್ದಾರೆ) ತಳವಾರರಿಗೆ ಹೆಚ್ಚಾಗಿ ವತನಿ ಜಮೀನುಗಳಿಲ್ಲ, ಇದ್ದರೂ ಬಹಳ ಕಡಿಮೆ. ಹೀಗಾಗಿ ಕೇವಲ ತಳವಾರಿಕೆಯಿಂದಲೇ ಜೀವನ ಹೊರೆಯುವುದು ಕಷ್ಟವಾಗುತ್ತದೆ, ಆದುದರಿಂದ ಕೃಷಿ ಅಥವಾ ಜಾತಿ–ಉದ್ಯೋಗಗಳನ್ನು ಅವಲಂಬಿಸಿರುವುದು ಅನಿವಾರ್ಯವಾಗುತ್ತದೆ. ಗ್ರಾಮದ ಪ್ರತಿಯೊಂದು ಮನೆತನದಿಂದ ವರ್ಷಾಸನ ಎಂಬಂತೆ ಏನೂ ದೊರೆಯುವುದಿಲ್ಲ. ಇವರು ಕಾಳಿಗೆ, ಕಾಣಿಕೆಗೆ ಹೊಲಗಳಿಗೆ ಹೋಗುವುದಿಲ್ಲ. ಹಾಗೆ ಹೋಗಬಾರದು ಎಂಬ ಪ್ರಜ್ಞೆಯೂ ಇವರಲ್ಲಿದೆ. ಇನ್ನು ಹತ್ತು ಹಳ್ಳಿಗೊಬ್ಬರೋ ಇಬ್ಬರೋ ಈ ಪ್ರಜ್ಞೆ ನಿಯಮಗಳನ್ನು ಮೀರುವುದೂ ಉಂಟು. ಅದು ಹೊಟ್ಟೆಯ ಬವಣೆಯ ಅನಿವಾರ್ಯತೆ ಇರಬಹುದು ಅಷ್ಟೇ. ಮದುವೆ ಸಮಾರಂಭಗಳಲ್ಲಿ ಉಡಿಸುವ ವಸ್ತ್ರಗಳಿಂದ, ಕೇವಲ ಸಾಂದರ್ಭಿಕ ಚಾಜ, ಕುಸಿಗಳಿಂದ ಹೊಟ್ಟೆ ತುಂಬುವುದಿಲ್ಲ. ಇಂದು ಜನರಿಗೆ ಇವರ ಅವಶ್ಯಕತೆ ಅಷ್ಟಾಗಿ ತೋರದಿರುವುದರಿಂದ ಮುಂಚಿನಂತೆ ಈ ವೃತ್ತಿಯನ್ನು ಅವಲಂಬಿಸುವುದು ಅಸಾಧ್ಯವಾಗಿದೆ. ಹಲವಾರು ಸ್ವಾಭಿಮಾನಿಗಳಿಗೆ ಇದು ಈಗಾಗಲೇ ಹೇಯ ಕಾರ್ಯ ಎಂದೆನಿಸಿರಲು ಸಾಕು. ಅಂಥವರು ಬೇರೆ ಉದ್ಯೋಗವನ್ನವಲಂಬಿಸಿಕೊಂಡು ಮರ್ಯಾದೆಯಾಗಿ ಬಾಳಿದರೆ ಸಾಕಲ್ಲವೇ ಎಂದು ಯೋಚಿಸುತ್ತಿದ್ದಾರೆ.

ತಳವಾರರಿಗೆ ಗೌರವಕ್ಕೆಂದಾಗಲಿ, ವೃತ್ತಿಸಾಧನವೆಂದಾಗಲಿ ಯಾವ ಉಪಕರಣಗಳಿಲ್ಲ. ಇವರಿಗಿಂತಲೂ ವಾಲಿಕಾರರು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತವರು ಎನ್ನುವುದರಿಂದ ಅವರಿಗೆ ಮಾತ್ರ ಖಡ್ಗ (ಹತಾರ) ಕೊಟ್ಟಿರುತ್ತಿದ್ದರು. ತಳವಾರರಿಗೆ ವೃತ್ತಿಸಂಬಂಧದ ವೇಷ–ಭೂಷಣಗಳೂ ಇಲ್ಲ ಆದರೆ ವಿಜಯನಗರ ಸಾಮ್ರಾಜ್ಯ ಕಾಲಕ್ಕೆ ಊರ ಕಾವಲಿಗೆ ನಿಂತ ತಳವಾರರು ಧರಿಸಿದ ಆಯುಧ ಮತ್ತು ತೊಡುತಿದ್ದ ವೇಷ–ಭೂಷಣಗಳನ್ನು ಕನಕದಾಸರು ತಮ್ಮ ಮೋಹನ ತರಂಗಿಣಿಯಲ್ಲಿ ಸ್ಪಷ್ಟಪಡಿಸಿದ್ದಾರೆ. "ತಳವಾರರು ಹೊಳೆವ ಕಠಾರಿ, ಕೈಗತ್ತಿ ತೋಮರ ಬಿಲ್ಲು, ಬಲುದಡಿ ಪಿಡಿ ಚಕ್ರಗಳೊಂದಿಗೆ ಊರನ್ನು ಕಾಯುತ್ತಿದ್ದರು."

ಅವರ ವೇಷಭೂಷಣಗಳು :

ಮೆಟ್ಟಿದ ಕೆರ್ಮಗಳ್ ಉಡೆಯ ಬದ್ದುಗೆದಾರ

ದಟ್ಟಿಯ ಮೇಲೆ ವಂಕುಡಿಯ
ಕಟ್ಟಿದ ಹೆದೆ, ಏರಿಸಿದ ಬಿಲ್ಲೋಲಿನ
ಗಟ್ಟಿವಾಳರು ತಿರುಗಿದರು.

ತಳವಾರದು ಎನ್ನುವಂತೆ ಪ್ರತ್ಯೇಕಕಲೆ ಯಾವುದೂ ಬೆಳೆದುಬಂದಿಲ್ಲ. ತಳವಾರರು ತಮ್ಮ ಜಾತಿ ಕಲೆಯನ್ನು ಬೆಳೆಸಿಕೊಂಡಿರಬಹುದು ಅಥವಾ ಸಾರ್ವಜನಿಕ ಜೀವನದಲ್ಲಿ ಒಂದಾಗಿ ಬೇರೆ ಕಲೆಯನ್ನು ಮೈಗೂಡಿಸಿಕೊಂಡಿರಬಹುದು. ಉದಾಹರಣೆಗೆ – ಕುರುಬರು ಡೊಳ್ಳಿನ ಹಾಡುಗಳನ್ನು ಹಾಡಬಹುದು; ಬೇಡರು, ಹರಿಜನರು ..... ಎಲ್ಲ ಸಮಾಜದವರಿಗೂ ಸಾಮಾನ್ಯವೆನ್ನಬಹುದಾದ ಭಜನೆ, ಬಯಲಾಟಗಳಲ್ಲಿ ಸೇರ್ಪಡೆಯಾಗಬಹುದು.

ಇವರಿಂದ ವೃತ್ತಿಕಲೆಯೆಂಬುದು ನಿರ್ಮಾಣಗೊಳ್ಳದಿದ್ದರೂ ಅನೇಕ ಜನಪದ ಗೀತೆಗಳಲ್ಲಿ, ಗಾದೆಗಳಲ್ಲಿ ಇವರ ಉಲ್ಲೇಖವಾಗಿರುವುದು ತೋರಿಬರುತ್ತದೆ. ಈ ಹಾಡುಗಳು, ಗಾದೆಗಳು ತಳವಾರನ ಕಾರ್ಯದಕ್ಷತೆ, ಅವನ ವೃತ್ತಿಯನ್ನು ಹೀಯಾಳಿಸುವ ಮೇಲುವರ್ಗದವರ ಸಣ್ಣತನ – ಇವೆಲ್ಲ ವ್ಯಕ್ತವಾಗಿವೆ. ಬಹಳಷ್ಟು ಪ್ರಸಿದ್ಧವಾಗಿರುವ ಗುಳ್ಳವ್ವನ ಹಾಡೊಂದರಲ್ಲಿ ತಳವಾರರನ್ನು ಹೆಣ್ಣುಮಕ್ಕಳು ಬಯ್ಯುತ್ತಾರೆ.

ತಳವಾರ ತಾಟ್ಯಾ ಹುಚನನ ಹಾಟ್ಯಾ
ಹೊಯ್ಯ ಹೊಯ್ಯ ಗುಳ್ಳವ್ವ ಗುಳ್ಳವ್ವ

ಒಂದು ಕಾಲದಲ್ಲಿ ತಳವಾರನದು ಅಜ್ಜಗಾವಲಾಗಿತ್ತು. ಇವನು ಕೇವಲ ಕಳ್ಳರ ಮೇಲೆ ಕಣ್ಣಿಟ್ಟಿರುತ್ತಿರಲಿಲ್ಲ. ಹರೆಯದ ಹುಡುಗಿಯರ ಕಿತಾಪತಿಯನ್ನೂ ಗಮನಿಸಿ ನಿರ್ಬಂಧಿಸುತ್ತಿದ್ದ. ಹೀಗಾಗಿ ತಮ್ಮ ಆಶೆಯನ್ನು ಚಿವುಟಿಹಾಕುವ ತಳವಾರನ ಮೇಲೆ ಹುಡಿಗಿಯರಿಗೆ ಸಹಜವಾಗಿ ಕೋಪ. ತಳವಾರನನ್ನು ಎದುರಿಸುವಂತಿಲ್ಲ, ಮನೆಯಲ್ಲಿ ಹೇಳುವಂತಿಲ್ಲ. ಬೇರೆ ದಾರಿಯಿಲ್ಲದೆ ತಮ್ಮ ಕೋಪಾವೇಶವನ್ನು ಗುಳ್ಳವ್ವನ ಹಾಡಿನಲ್ಲಿ ಯಥೇಚ್ಛವಾಗಿ ತೋಡಿಕೊಂಡರು. ಇದೇ ಭಾವದ ಹಿನ್ನಲೆಯಲ್ಲಿ ಕೆಲವು ಗಾದೆಗಳು: ತಳವಾರನ ಸಂಗಡಇವೆ. ಈ ಹಾಡು, ಗಾದೆ ನೋಡಿದರೆ ಗ್ರಾಮಾಧಿಕಾರಿ ತಳವಾರನಿಗೆ ಕಳ್ಳರನ್ನು ಹಿಡಿಯುವ ಜವಾಬ್ದಾರಿಯನ್ನು ಒಪ್ಪಿಸಿದಂತೆ ಅನಧಿಕೃತ ಪ್ರಣಯಿಗಳ ಮೇಲೂ ಕಣ್ಣಿಡುವ ಸೂಚನೆಯನ್ನು ಕೊಡುತ್ತಿರಬಹುದು. ಆದ್ದರಿಂದಲೇ ಆತ ಕಳ್ಳರನ್ನು ಬಂಧಿಸುವ ಸಂಗಡವೇ ಈ 'ಕಳ್ಳ'ಯರನ್ನೂ ಹಿಡಿಯುತ್ತಿದ್ದಿರಬೇಕು.

ತಳವಾರನನ್ನು ಕುರಿತು ಇನ್ನೂ ಕೆಲವು ಗಾದೆಗಳು : 'ಗ್ರಾಮದ ಶಾಂತಿಗೆ ತಳವಾರತಲೆ ಬೋಳಿಸಿಕೊಂಡ', ಅಡಿವ್ಯಾಗ ಜಾಲಿ ಸೊಕ್ಕಬಾರದು ಊರಾಗ ಕಬ್ಬಿಲಗ್ಯಾ

ಸೊಕ್ಕಬಾರದು', 'ತಳವಾರನಿಗೆ ಪಟ್ಟ ಗಟ್ಟಿದರೆ ಕುಳವಾರು ಹೋದೀತೇ ?' – ತಳವಾರನ ಬಗೆಗೆ ವ್ಯಕ್ತವಾಗಿರುವ ಈ ಗಾದೆಗಳಲ್ಲಿ ಒಂದೇ ಮನೋಭಾವನೆ ಇಲ್ಲ. ಅವನ ಬಗೆಗಿನ ಸಹಾನುಭೂತಿ, ಕಟಕಿನುಡಿ, ವೃತ್ತಿ ಹೀಯಾಳಿಕೆ ಎಲ್ಲ ವ್ಯಕ್ತವಾಗಿವೆ. ಜಾತಿ ಸೂಚಕವಾದ ಇಂಥ ಗಾದೆಗಳಲ್ಲಿ ಕೆಲವು ವಸ್ತುಸ್ಥಿತಿಗೆ ಸಮೀಪವಾಗಿರಬಹುದು, ಇನ್ನು ಕೆಲವು ಕೇವಲ ಮೇಲುವರ್ಗದವರ ಕುತ್ಸಿತ ಅಭಿಪ್ರಾಯವನ್ನು ಹೊಂದಿರಬಹುದು.

ಊರವರಿಗೂ ತಳವಾರನಿಗೂ ಇದ್ದ ಆತ್ಮೀಯ ಸಂಬಂಧ ಭಾವ ಮದುವೆಯ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಊರ ಹೆಣ್ಣು ಮಗಳು ಪರ ಊರಿಗೆ ಮದುವೆಗೆ ಹೊರಟರೆ ಅಗಸಿಯಲ್ಲಿ ಈತ ಖುಸಿ ಕೇಳಲು ತರಬುತ್ತಿದ್ದ. ಆ ಸಮಯದಲ್ಲಿ ಬರುವ ಮದುವೆ ಹಾಡಿನ ತ್ರಿಪದಿ ಇಂತಿದೆ. –

ಅಗಸಿಯ ತಗಿ ನನ್ನ ಬಗಸ್ಯುಳ್ಳ ತಳವಾರ
ಬಗಸಿ ತುಂಬ ಅಡಕಿ ಬಳಿಯೆಲಿಯ ಕೊಟ್ಟರ
ನಗತ ಬಂದಗಸಿ ತಗದಾನ.

– ಈ ತ್ರಿಪದಿಯಲ್ಲಿ ತಳವಾರನಿಗೆ ಕೊಡುವುದು ಕೇವಲ ಎಲೆ ಅಡಿಕೆಯೆಂದು ಉಕ್ತವಾಗಿದ್ದರೂ ಅದರ ಸಂಗಡ ನಾಲ್ಕೈದು ರೂಪಾಯಿ ಕೊಡುವುದು ವಾಸ್ತವ ಸಂಗತಿ. ಆದರೂ ಹಣದ ವಿಷಯವನ್ನು ತ್ರಿಪದಿಯಲ್ಲಿ ಎತ್ತದೆ ಕೇವಲ ಎಲೆ ಅಡಿಕೆಯ ಪ್ರಸ್ತಾಪ ಮಾಡಿ ತಳವಾರನನ್ನು ಹೊಗಳುವಲ್ಲಿ ಅವನಿಗೆ ಸಂದ ಗೌರವ ಮೆಚ್ಚುವಂತಹದಾಗಿದೆ.

ಒಂದು ಕಾಲದಲ್ಲಿ ರಾಜಕೀಯ ರಂಗದಲ್ಲಿ, ಸಾಮಾಜಿಕ ಜೀವನದಲ್ಲಿ ಗಣ್ಯಸ್ಥಾನ ಪಡೆದಿದ್ದ ತಳವಾರರ ಸ್ಥಿತಿ ಇಂದು ಶೋಚನೀಯವಾಗಿದೆ. ರಾಜರ ಕಾಲ ತೀರಿ ಹೋಗಿ, ಸಂಸ್ಥಾನಿಕರು ಉರುಳಿಹೋಗಿ ಬದಲಾದ ಪ್ರಜಾಪ್ರಭುತ್ವದ ಪರಿಸರದಲ್ಲಿ ತಳವಾರಿಕೆ ಎನ್ನುವುದಕ್ಕೆ ಅರ್ಥವಿಲ್ಲ. ಒಟ್ಟು ವ್ಯವಸ್ಥೆ ಬದಲಾಗಿ ನಮ್ಮ ರಕ್ಷಣೆಗೆ ನಮ್ಮನ್ನೇ ನಾವು ನೆಮ್ಮಿಕೊಂಡಿರುವಾಗ ಮೀರಿದರೆ ಪೋಲೀಸರಿರುವಾಗ ತಳವಾರನ ಗರಜು ನಮಗಿಲ್ಲ ಎನ್ನುವಂತಾಗಿದೆ, ಹೀಗಾಗಿ ತಳವಾರ ಬೇರೆ ಉದ್ಯೋಗ ಮಾಡುವುದು ಅವಶ್ಯಕವಾಗತೊಡಗಿದೆ, ಈ ಅಭ್ಯಾಸಕ್ಕೆ ಪ್ರಸ್ತುತ ಲೇಖಕ ತೊಡಗಿ ಬೇರೆ ಬೇರೆ ವ್ಯಕ್ತಿಗಳನ್ನು ಸಂದರ್ಶಿಸಿದ ಮೇಲೆ ತಿಳಿದದ್ದು – ಬಹುತೇಕ ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಒಬ್ಬರು ಸಾಯಕಲ್ ಅಂಗಡಿ ಇಟ್ಟಿದ್ದಾರೆ. ಹಿಂದಿನ ಕಾಲದಲ್ಲಿ ಎಷ್ಟು ಜನ ತಳವಾರರು ದೇವರ ಪೂಜೆಯನ್ನು ಜೀವನವನ್ನು ಈಗ ಇವರ ಹೆಸರಿಗೇ ಮಾಡಿದ್ದರೂ ತಳವಾರರ ಪಾಲಿಗೆ ಬಂದ ಜೀವನೋಪಾಯಕ್ಕೆ ಉಪವಿಧಾನವನ್ನಾಗಿ ಮಾಡಿಕೊಂಡಿದ್ದರೋ ನಮಗೆ ತಿಳಿಯದು. ಆದರೆ ಇಂದು ಅನೇಕ ಜನ ತಳವಾರರು ಹನುಮಂತ ದೇವರ ಪೂಜೆಯನ್ನೋ ದುರಗವ್ವನ ಪೂಜೆಯನ್ನೋ ಅವಲಂಬಿಸುತ್ತಿದ್ದಾರೆ. ಸರಕಾರ ಹೊರಡಿಸಿದ ವತನ ರದ್ದತಿಯ ಕಾಯ್ದೆಯನ್ವಯ

ಆರುಪಟ್ಟು ಇವರಿಂದ ತುಂಬಿಸಿಕೊಂಡು ಜಮೀನನ್ನು ಈಗ ಇವರ ಹೆಸರಿಗೇ ಮಾಡಿದ್ದರೂ ತಳವಾರರ ಪಾಲಿಗೆ ಬಂದ ಜಮೀನಿನ ಪ್ರಮಾಣ ತೀರ ಕಡಿಮೆ – ಕೇವಲ ಒಂದು ಒಂದೂವರೆ ಎಕರೆಯಷ್ಟು. ಹೀಗಾಗಿ ಆ ಆಸ್ತಿ ಇದ್ದೂ ಇಲ್ಲದಂತೆ ಎಂಬುದು ಇವರ ಕೊರಗು. ತೀರ ಇತ್ತಿತ್ತಲಾಗಿ ಸರಕಾರ ೧೦೦ ರೂ. ವೇತನ ಗೊತ್ತುಮಾಡಿ 'ಗ್ರಾಮ ಸಹಾಯಕ' ಎಂದೊಬ್ಬನನ್ನು ಗ್ರಾಮ ಲೆಕ್ಕಿಗನ ಕೈಕೆಳಗೆ ನೇಮಿಸುತ್ತಿದೆ. ವಾಲಿಕಾರಿಕೆಯ ಅಥವಾ ತಳವಾರಿಕೆಯ ಅನುಭವವಿದ್ದವನನ್ನು ತೆಗೆದುಕೊಳ್ಳಬೇಕೆಂಬುದು ಇದರ ಸಾಮಾನ್ಯ ನಿಯಮ. ಪ್ರಸಂಗಾವಧಾನವಾಗಿ ಅದು ವಾಲಿಕಾರನಿಗೆ ಹೋಗಬಹುದು ಅಥವಾ ತಳವಾರನಿಗೆ ಹೋಗಬಹುದು.

ಇತ್ತೀಚಿನ ದಿನಗಳಲ್ಲಿ ತಳವಾರರಿಗೆ ತಮ್ಮ ವೃತ್ತಿಯಲ್ಲಿ ಆಸಕ್ತಿ ಉಳಿದಿಲ್ಲ. ನಾಗರಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡವರಿಗಂತೂ ಇದು ಕೀಳು ಕೆಲಸವಾಗಿದೆ. ಈ ವೃತ್ತಿ ಪೂರ್ಣವಾಗಿ ಮರೆಯಾಗುವುದಕ್ಕಿಂತ ಮೊದಲು ಅಳಿದುಳಿದ ಅವಶೇಷಗಳೊಂದಿಗೆ ಇದರ ಅಭ್ಯಾಸವನ್ನು ಇನ್ನಷ್ಟು ಹರಿತಮಾಡಿಕೊಂಡು ಜಾನಪದ ಸಾಹಿತ್ಯಾಭ್ಯಾಸಿಗಳು ಮುಂದುವರಿಯುವುದು ಅವಶ್ಯಕ ಎಂದೆನಿಸುತ್ತದೆ.

೧೯೮೨ ಜಾನಪದ ಸಾಹಿತ್ಯ ದರ್ಶನ–೭ ಪ್ರ.ಸಂ.ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ

~~~******~~~

ಗ್ರಂಥಋಣ:

೧. ಕರ್ನಾಟಕ ಜನಜೀವನ–ಡಾ। ಬೆಟಗೇರಿ ಕೃಷ್ಣಶರ್ಮ
೨. ಬಸವಣ್ಣನವರ ವಚನಗಳು–ಸಂ.ಡಾ। ಆರ್.ಸಿ.ಹಿರೇಮಠ
೩. ಕಿಟ್ಟೆಲ್ಲರ ಕನ್ನಡ–ಇಂಗ್ಲೀಷ್ ನಿಘಂಟು
೪. ಕನ್ನಡ ನಿಘಂಟು – ಕಸಾಪ ಪ್ರಕಟಣೆ
೫. ಕರ್ನಾಟ ಭಾರತಕಥಾಮಂಜರಿ–ಸಂ.ಕು.ವೆಂ.ಮ. ಮಾಸ್ತಿ ವೆಂಕಟೇಶ ಅಯ್ಯಂಗಾರ್

ವಿಷಯ ಸಂಗ್ರಹಣೆಗೆ ನೆರವು:
೧. ಶ್ರೀ ಯಮುನಪ್ಪ ಹ.ತಳವಾರ (ಕೊರ್ತಿ)
೨. ಶ್ರೀ ಭೀಮಪ್ಪ ಡೋಂ. ವಾಲಿಕಾರ (ನಾಗರಾಳ)
೩. ಶ್ರೀ ಮಾರುತಿ ಮೋಡಿ (ಯಾದವಾಡ)
೪. ಶ್ರೀ ಹಣಮಪ್ಪ ಬ. ತಳವಾರ (ತೋಳಮಟ್ಟಿ)
~~~

ನಂಬಿಕೆ ಸಂಪ್ರದಾಯಗಳು

ನಂಬಿಕೆ ಸಂಪ್ರದಾಯಗಳು ಜಾನಪದ ಬದುಕಿನೊಂದಿಗೆ ಏಕರಸವಾಗಿರುವ ಬಹುಮುಖ್ಯ ಅಂಶಗಳು. ನಂಬಿಕೆ, ಮಾನಸಿಕ ಸ್ಥಿತಿಯ ಒಂದು ಪದರಾದರೆ, ಸಂಪ್ರದಾಯ ನಂಬಿಕೆಯನ್ನೂ ಒಳಗೊಂಡಂತೆ, ಒಂದೊಂದು ಪ್ರದೇಶದ, ಒಂದೊಂದು ಜನಾಂಗದ ಜೀವನಕ್ರಮವಾಗುತ್ತದೆ. ನಂಬಿಕೆಗಿಂತಲೂ ಸಂಪ್ರದಾಯಕ್ಕೆ ಹೆಚ್ಚಿನ ವ್ಯಾಪ್ತಿಯಿದೆ. ಮಾನಸಿಕ ಸ್ತರದಲ್ಲಿ ಆಳವಾಗಿರುವ ನಂಬಿಕೆ ಕ್ರಮೇಣ ಸಾಂಸ್ಕೃತಿಕ ಆವರಣಕ್ಕೆ ಬಿದ್ದು ಸಾಮಾಜಿಕ ಚೌಕಟ್ಟನ್ನು ಪಡೆದು ಕ್ರಿಯಾಶೀಲವಾಗಿ ಆಚರಣೆಗಳಿಗೆ ಹಿಗ್ಗುತ್ತದೆ.

ನಂಬಿಕೆಗಳು

ಆರ್. ಎಸ್. ಬಾಗ್ಸ್ ನಂಬಿಕೆಗಳನ್ನು ಸಾಹಿತ್ಯೇತರ ಗುಂಪಿಗೆ ಸೇರಿಸುತ್ತಾನೆ. ಬಾಗ್ಸ್‌ನ ಈ ಕ್ರಮ ತುಂಬ ಸಮಂಜಸವಾಗಿದೆ. ಮನುಷ್ಯ ಭಾವನೆ ಒಂದು ವಿಷಯಕ್ಕೆ ಗಟ್ಟಿಯಾಗಿ ಒಪ್ಪಿಸಿಕೊಂಡಾಗ ಅದು ನಂಬಿಕೆಯಾಗುತ್ತದೆ.[೧] ಒಂದು ವಿಷಯವನ್ನು ಇಲ್ಲಿಯೇ ಸ್ಪಷ್ಟಗೊಳಿಸಬೇಕು:. ಈ ನಂಬಿಕೆ ಒಂದು ಪರಂಪರೆಯಿಂದ ಬಂದಿರಬಹುದಾದ ಸಾಧ್ಯತೆ ಹೆಚ್ಚು, ಈ ಪರಂಪರೆಯ ಮೂಲ ಎಂದು, ಹೇಗೆ ಹುಟ್ಟಿತು ಹೇಳುವುದು ತುಂಬ ಕಷ್ಟದ ಕೆಲಸ. ಆರತಿ ಮಾಡುವಾಗ ಕಳಸ ಬೀಳಬಾರದು ಎನ್ನುವುದು ಕನ್ನಡಿಗರ ಒಂದು ನಂಬಿಕೆ. ಈ ನಂಬಿಕೆಯ ಪ್ರಾರಂಭದ ಮೂಲವನ್ನು ಗುರುತಿಸುವುದು ಖಂಡಿತವಾಗಿಯೂ ಸಾಧ್ಯವಿಲ್ಲ. ಅನೂಚಾನವಾಗಿ ನಡೆದುಕೊಂಡು ಬಂದಿರುವ ಜನಪದ ನಂಬಿಕೆಗಳು ಸಾರ್ವತ್ರಿಕ ಮನ್ನಣೆ ಪಡೆಯುತ್ತವೆ. ಜಾನಪದ ವಲಯದಲ್ಲಿರುವುದು ಮೂಢನಂಬಿಕೆಯೊಂದೇ, (Superstition). ಅದು ಜನಪದರ ವಿಚಾರಶಕ್ತಿಗೆ ಎಟುಕಲಾರದವಸ್ತು.[೨] ಕೆಲವು ನಂಬಿಕೆಗಳು ಹುಟ್ಟುವಾಗ ವಿಚಾರಯೋಗ್ಯ ಶಕ್ತಿಗೆ (Rational)ವಾಗಿಯೇ ಹುಟ್ಟಿರಬಹುದು. ಆದರೆ ಮುಂದಿನವರೆಗೆ ಅದು ಕೇವಲ ಹಿರಿಯರ ಮಾತಾಗಿ ಅನುಕರಣೆಯಾಗುತ್ತಾ ಕಾಲ ಅದರ ಹಿಂದಿರುವ ವಸ್ತುಸತ್ಯವನ್ನು ಮರೆಮಾಚುತ್ತದೆ.

ಬದುಕಿನಷ್ಟೇ ಸಂಕೀರ್ಣವಾಗಿ ಹರಡಿಕೊಂಡಿರುವ ನಂಬಿಕೆಗಳನ್ನು ವರ್ಗೀಕರಿಸುವುದು ಪ್ರಯಾಸದ ಕೆಲಸ. ನಂಬಿಕೆಗಳನ್ನು ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಯಕ್ತಿಕವೆಂದು ವಿಭಜಿಸುವುದುಂಟು. ಅದಕ್ಕಿಂತಲೂ ಅತಿಮಾನುಷ ಸಾಂಸ್ಕೃತಿಕ

೧. Encyclpeadia Britannica(1969) Vol-3 Page - 437
೨. ಅದೇ Vol-21 Page - 432

ಮತ್ತು ವೈಯಕ್ತಿಕವೆಂದು ವರ್ಗೀಕರಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಇದು ಒಂದು ರೀತಿ ಮಾನವ ವಿಕಾಸದ ಘಟ್ಟಗಳಲ್ಲಿ ನಡೆದಿರಬಹುದಾದ ಕ್ರಮವನ್ನು ತೋರಿಸುತ್ತದೆ.

೧. ಅತಿಮಾನುಷ ನಂಬಿಕೆಗಳು :

ಆದಿಮಾನವ, ಪ್ರಕೃತಿಯೊಡ್ಡಿದ ವೈಚಿತ್ರ್ಯ, ಆತ ಆಘಾತಗಳಿಗೆ ಅಚ್ಚರಿಗೊಂಡು, ಭಯಗ್ರಸ್ಥನಾದ. ಈ ಪ್ರಕೃತಿ ಆತನ ಅಳವಿಗೆ ಮೀರಿದ್ದು. ಇದನ್ನು ನಿಯಂತ್ರಿಸುವ 'ಶಕ್ತಿ' ಬೇರೊಂದಿದೆಯೆಂದು ಭಾವಿಸಿಕೊಂಡು ಆ ಶಕ್ತಿಯನ್ನು ತನ್ನ ರಕ್ಷಣೆಗೆ ನಂಬಿದ. ನಾಗರಿಕತೆ ಬೆಳೆದಂತೆ ಈ ನಂಬಿಕೆಯನ್ನೇ ಬೇರು ಮಾಡಿಕೊಂಡು ಧರ್ಮದ ಆವಿಷ್ಕಾರವಾಯಿತು. ಈ ಧರ್ಮ ಭಾವನೆಯ ಮಧ್ಯದಲ್ಲಿಯೂ ಅನೇಕ ಕಂಟಕಗಳನ್ನು ಉಂಟುಮಾಡುವ ಶಕ್ತಿಯನ್ನು ಭೂತಗಳೆಂದು ಕರೆದ. ಈ ಧರ್ಮದ ತಾಯಿಬೇರಾದ ದೇವರು ಮತ್ತು ಭೂತಗಳಿಂದ ತನ್ನ ಬದುಕು ವಿರಿಳಿತಗಳನ್ನು ಪಡೆಯುತ್ತದೆ ಎಂಬ ಅನಿಸಿಕೆಯ ಹಿನ್ನಲೆಯಲ್ಲಿ ನಂಬಿಕೆಗಳು ಬೆಳೆದು ಬಂದವು. ಜಗತ್ತಿನ ಯಾವುದೇ ಜಾನಪದ ನಂಬಿಕೆಗಳಿಗೆ ಅನ್ವಯಿಸುವ ಈ ಮಾತು ಕರ್ನಾಟಕ ಜಾನಪದ ನಂಬಿಕೆಗಳಿಗೂ ಅನ್ವಯಿಸುತ್ತದೆ.

ಗುಡಿಯಿಂದ ಬರುವಾಗ ಸ್ವಲ್ಪಹೊತ್ತು ಕುಳಿತು ಬರಬೇಕು ಎನ್ನುವುದು ಕರ್ನಾಟಕದ್ದುದ್ದಕ್ಕೂ ಇರುವ ಒಂದು ನಂಬಿಕೆ. ಮುಖ್ಯವಾಗಿ ಇಲ್ಲಿ ವ್ಯಕ್ತವಾಗಿರುವುದು ದೈವಶ್ರದ್ಧೆ. ಗುಡಿಯ ಆಚೆಗೆ ಇರುವುದು ಲೌಕಿಕ ಪ್ರಪಂಚ. ಇಲ್ಲಿ ಇರುವ ಇನ್ನಷ್ಟು ಹೊತ್ತು ದೇವಭಾವನೆಯನ್ನೇ ಗಟ್ಟಿಗೊಳಿಸಿಕೊಳ್ಳಬೇಕು ಎನ್ನುವ ಉದ್ದೇಶ ಇದರ ಹಿಂದಿದೆ. ಈ ತಾತ್ವಿಕ ಹಿನ್ನಲೆಯಲ್ಲಿ ಒಬ್ಬ ಭಕ್ತನೋ ಭಕ್ತವ್ಯಂದವೋ ಎಂದೋ ಒಮ್ಮೆ ಉಂಟುಮಾಡಿಕೊಂಡಿರುವ ರೂಢಿ. 'ಕ್ವಾಡಿಗೆ ಕೆಮ್ಮು' ಹತ್ತಿದರೆ ಗುಲಗಂಜಿ ಕೊಪ್ಪ (ಬೆಳಗಾವಿ ಜಿಲ್ಲೆ)ದ ಮಾರುತಿ ದೇವರಿಗೆ ನಡೆದುಕೊಳ್ಳಬೇಕು. ಎನ್ನುವ ನಂಬಿಕೆ ಆ ಸುತ್ತಮುತ್ತಲಿನ ಪ್ರದೇಶದವರಿಗೆ ಮಾತ್ರ ಸೀಮಿತವಾಗಿದೆ. ಕರ್ನಾಟಕದ ಇನ್ನೊಂದು ಮೂಲೆಯಲ್ಲಿರುವವರು ಈ ಊರ ಹೆಸರೂ ಕೇಳಿರಲಿಕ್ಕಿಲ್ಲ. ಅವರು ತಮ್ಮ ಹೊಟ್ಟೆ ಕಡಿತಕ್ಕೂ, ಹಲ್ಲುಬೇನೆಗೋ, ಇಲಿ ಕಡಿತದ ನಂಜಿಗೋ, ಹಾವಿನ ವಿಷದ ಇಳಿತಕ್ಕೆ ಕರ್ನಾಟಕದ ತುಂಬ ಹಲವಾರು ಊರುಗಳಲ್ಲಿ ಗುಡಿಗಳುಂಟು. ಹಾವು ಕಡಿಸಿಕೊಂಡ ವ್ಯಕ್ತಿಯನ್ನು ಆ ಗುಡಿಯಲ್ಲಿ ತಂದು ಹಾಕಿ ದೇವರನ್ನು ಆಶ್ರಯಿಸುವುದು ಮೊದಲನೆಯ ಕೆಲಸ, . ಇಲ್ಲಿಯೇ ಔಷಧೋಪಚಾರಗಳೂ ನಡೆಯುತ್ತವೆ. ಜುಟ್ಟು ಇರುವ ತೆಂಗಿನಕಾಯಿಯನ್ನೇ ದೇವರಿಗೆ ಒಡೆಯಬೇಕು ಎನ್ನುವುದೊಂದು ನಂಬಿಕೆ. ಕಾಯಿ ಒಡೆಯುವಾಗ ಹಿಡಿತಕ್ಕಾಗಿ ಮಾಡಿಕೊಂಡಿರುವ ಅನುಕೂಲ ಬಹುಶಃ ಇಲ್ಲಿ ನಂಬಿಕೆಯಾಗಿ ನಿಂತಿರುವದು ಕೌತುಕದ ವಿಷಯ.

ಹುಣಸೆಗಿಡದಲ್ಲಿ ದೆವ್ವವಿರುವುದು, . ಬಾಣಂತಿಯನ್ನು ಸುಡದಿದ್ದರೆ

ದೆವ್ವವಾಗುತ್ತಾಳೆ ಎನ್ನುವುದು ಎರಡೂ ಭಯಮೂಲವಾದ ನಂಬಿಕೆಗಳೇ. ವಿಶಾಲವಾಗಿ ಬೆಳೆದಿರುವ ಹುಣಸೆಗಿಡ ರಾತ್ರಿಹೊತ್ತಿನಲ್ಲಿ ಅಕರಾಳ ವಿಕರಾಳವಾಗಿ ಕಂಡು ಸಾಮಾನ್ಯ ವ್ಯಕ್ತಿಯ ಹುಟ್ಟು ಪ್ರವೃತ್ತಿಯಾದ (Innate Instincts) ಭಯವನ್ನು ಜಾಗೃತಗೊಳಿಸುತ್ತದೆ. ಇಲ್ಲಿ ಕುತೂಹಲದ ವಿಷಯಗಳೆಂದರೆ ಬಹಳಷ್ಟು ದೆವ್ವಗಳಿಗೆ ಹುಣಸೆ ಗಿಡವೇ ವಾಸಸ್ಥಾನವಾಗುವುದು; ಎಂದೋ ಒಂದು ದಿನ ಬಹುಶಃ ಒಂದು ಕ ವೇಳೆಯಲ್ಲಿ ಪ್ರಾರಂಭಗೊಂಡ ಒಬ್ಬನ ನಂಬಿಕೆ ಸಾರ್ವತ್ರಿಕವಾಗಿರುವುದು. ತಾಯ್ತನದ ಹಂಬಲವನ್ನಿರಿಸಿಕೊಂಡು ತೀರಿಕೊಳ್ಳುವ ಬಾಣಂತಿ ಖಂಡಿತವಾಗಿಯೂ ಅತೃಪ್ತಿಯ ಮೂಟೆಯಾಗಿರುತ್ತಾಳೆ. ದೆವ್ವವೆನ್ನುವುದು ಅತೃಪ್ತಾತ್ಮದ ಸಂಕೇತ ಎನ್ನುವುದಾದರೆ ಇದರ ವಿಶ್ಲೇಷಣೆಗೆ ಮನೋ ವಿಜ್ಞಾನಿಗಳ ನೆರವು ಅವಶ್ಯವೆನಿಸುತ್ತದೆ.

೨. ಸಾಂಸ್ಕೃತಿಕ ನಂಬಿಕೆಗಳು :

ಜನಸಾಮಾನ್ಯರಲ್ಲಿ ಬೇರೂರಿರುವ ಲೌಕಿಕ ಜೀವನಕ್ಕೆ ಸಂಬಂಧಪಟ್ಟ ನಂಬಿಕೆಗಳನ್ನು ಸಾಂಸ್ಕೃತಿಕ ನಂಬಿಕೆಗಳೆಂದು ವರ್ಗೀಕರಿಸಬಹುದು. ಕಾಡುಮನುಷ್ಯ ನಾಗರಿಕತೆಯನ್ನು ಬೆಳೆಸಿಕೊಳ್ಳುತ್ತ ವಿಕಾಸದತ್ತ ಸಾಗಿದಂತೆಲ್ಲ ಕೆಲವು ಶಿಷ್ಟಾಚಾರ ಸಂಪ್ರದಾಯಗಳು ಅವನ ಜೀವನದಲ್ಲಿ ಬೆರೆತುಕೊಂಡವು. ಮೊದಮೊದಲು ಯಾವನೋ ಒಬ್ಬ ಪ್ರತಿಷ್ಠಿತ ವ್ಯಕ್ತಿ ಪ್ರಾರಂಭಿಸಿದ ಒಂದ ಶಿಷ್ಟ ನಡವಳಿಕೆ, ಒಂದು ಸಂಪ್ರದಾಯ ಮುಂದಿನವರಿಗೆ ಕೇವಲ ಒಂದು ನಂಬಿಕೆಯಾಗಲು ಸಾಕು. ವ್ಯವಸಾಯ, ಬೇಟೆ ಮುಂತಾಗಿ ಹೊಟ್ಟೆಪಾಡಿಗೆ ಮಾಡಿಕೊಂಡು ಸುಖವಾಗಿರಬಹುದು ಎನ್ನುವ ಹೊತ್ತಿಗೇ ರೋಗರುಜಿನ, ಸಾವಿನಂಥ ಅನೇಕ ಸಮಸ್ಯೆಗಳೂ ಕಾಡಿ ಈ ವಿಷಯಗಳ ಸುತ್ತಲೂ ಅವನು ಬೆಳೆಸಿಕೊಂಡ ನಂಬಿಕೆಗಳು ದಟ್ಟವಾಗಿವೆ.

೧. ದೀಪ ಹತ್ತಿದಾಗ ಒಬ್ಬರಿಗೊಬ್ಬರು ನಮಸ್ಕಾರ ಅನ್ನಬೇಕು
೨. ಯಾರಿಗಾದರೂ ಕಾಲು ಬಡಿದರೆ ತಿರುಗಿ ಅವರನ್ನು ಮುಟ್ಟಿ ನಮಸ್ಕರಿಸಬೇಕು.
೩. ಬರಿದು ತೊಟ್ಟಿಲು ತೂಗಿದರೆ ಕೂಸಿನ ಹೊಟ್ಟೆ ಕಡಿಯುತ್ತದೆ.
೪. ಕುದುರೆಯ ನಾಲು ಸಿಕ್ಕರೆ ಮನೆಗೆ ತಂದು ಹೊಸ್ತಿಲಕ್ಕೆ ಬಡಿಯಬೇಕು.

ದೀಪ ಸೂರ್ಯದೇವನ ಸಂಕೇತವಾಗಿಯೋ, ಬದುಕಿನ ನಡೆಗೆ ಆಧಾರವಾಗಿರುವ ಬೆಳಕೆಂಬ ಪೂಜ್ಯ ಭಾವನೆಯೋ ಅಂತೂ ಅನೇಕ ಸಂಪ್ರದಾಯಗಳಿಗೆ ಮೂಲವಾಗಿರುವ ಈ ನಂಬಿಕೆ ನಮ್ಮ ಜಾನಪದ ಜೀವನವನ್ನು ಗಾಢವಾಗಿ ಪಸರಿಸಿದೆ. ಒಬ್ಬರಿಗೆ ಕಾಲುಬಡಿದಾಗ ನಮಸ್ಕರಿಸಬೇಕು ಎನ್ನುವ ನಂಬಿಕೆ ಮನುಷ್ಯ ಸಂಬಂಧದ ಮಧ್ಯೆ ಇರುವ ಪೂಜ್ಯ ಭಾವನೆಯನ್ನು ಪುಷ್ಟೀಕರಿಸುತ್ತದೆ. ಪ್ರತಿಯೊಬ್ಬನ ದೇಹವೂ

ಪರಮಾತ್ಮನ ವಾಸಸ್ಥಾನ ಎನ್ನುವ ಪ್ರಾಜ್ಞರ ನಂಬಿಕೆ ಜಾನಪದ ಅವರಣಕ್ಕೆ ಬರುವ ಹೊತ್ತಿಗೆ ಶಿಷ್ಟಾಚಾರದ ನಡವಳಿಕೆಯ ನಂಬಿಕೆಯಾಗಿದೆ. ಬರಿದಾದ ತೊಟ್ಟಿಲ ತೂಗುವುದು ಕೂಸನ್ನು ಕಳೆದುಕೊಳ್ಳುವ ಅಶುಭದ ಮುನ್ಸೂಚನೆ. ಹಾಗೆಂದು ಹೇಳಿ ತಡೆಯುವುದೂ ಅಶಿಷ್ಟ ನಡವಳಿಕೆ. ಅದ್ದರಿಂದ ಸಾವಿನ ಭಾವದ ತೀಕ್ಷ್ಣತೆಯನ್ನು ಕಡಿಮೆ ಮಾಡಿಕೊಂಡು ಹೊಟ್ಟೆ ಕಡಿಯುತ್ತದೆ ತೂಗಬೇಡಿರಿ ಎನ್ನುವ ಮಟ್ಟಿಗೆ ಆ ಭಾವವನ್ನು ಇಳಿಸಿಕೊಂಡುದು ಇದರ ಹಿಂದಿರುವ ಸತ್ಯ. ಬಾಗಿಲಿಗೆ, ಸಿಕ್ಕ ಕುದುರೆ ನಾಲನ್ನು ಬಡಿಯಬೇಕು ಎನ್ನುವ ನಂಬಿಕೆಗೆ ಹಿನ್ನಲೆ ಯಾಕೆ ಬಂದಿತೋ ಶೋಧಿಸಬೇಕಾದ ಅಂಶ. ಸಿಡಿಲು ಹೊಡೆಯುವಾಗ ಕಬ್ಬಿಣದ ಸಲಾಕೆ ಹಾರೆಗಳನ್ನು ತಂದು ಹೊಸ್ತಿಲ ಬಳಿ ಇಡುವುದುಂಟು. ಇದು ವೈಜ್ಞಾನಿಕವಾಗಿಯೂ ಸಮರ್ಥಿಸಿಕೊಳ್ಳಬಹುದಾದ ನಂಬಿಕೆ. ಕಬ್ಬಿಣದ್ದೇ ಆದ ನಾಲೂ ಕೂಡ ಸಿಡಿಲು ನಿರೋಧಕವಾಗಬಹುದು. ಆದರೆ ಅದು ಕುದುರೆಯದೇ ಆಗಿರಬೇಕಾದುದು ಏಕೆ ಎಂಬುವುದು ವಿಚಾರಾರ್ಹ.

ಮನುಷ್ಯ ತನ್ನ ನಿತ್ಯದ ಅನುಭವಗಳಿಂದ ಶುಭವಲ್ಲದ ಕೆಲವು ಘಟನಾವಳಿಗಳಿಂದ ಅನೇಕ ನಿಷೇದಗಳನ್ನು ಮಾಡಿಕೊಂಡ. ಈ ನಿಷೇಧಗಳೂ ನಂಬಿಕೆಗಳೇ. ಇಂಥ ನಿಷೇಧಗಳು ಕರ್ನಾಟಕದ ಎಲ್ಲ ಭಾಗಗಳಲ್ಲೂ ಇವೆ.

೧. ಮಂಗಲಕಾರ್ಯಗಳಲ್ಲಿ ವಿಧವೆ ಭಾಗವಹಿಸಬಾರದು.

೨. ಸಂಜೆಯ ಹೊತ್ತಿನಲ್ಲಿ ಕಸ ಗುಡಿಸಬಾರದು.

೩. ರಾಶಿ ಮಾಡುವಾಗ ಕಣದಲ್ಲಿ ಜೋರಾಗಿ ಮಾತನಾಡಬಾರದು.

೪. ಪಿತೃ ಪಕ್ಷದ ದಿನ ರಂಗೋಲಿ ಹಾಕಬಾರದು.

೫. ಒಲೆಯನ್ನು ಒದೆಯಬಾರದು.

೬. ಖಾಲಿ ತೊಟ್ಟಿಲನ್ನು ಇಡಬಾರದು.

ಈ ಮೇಲಿನವುಗಳಲ್ಲಿ ವೈಜ್ಞಾನಿಕ ಸತ್ಯವಲ್ಲದ ಕುರುಡು ನಂಬಿಕೆಗಳು ಕೆಲವಿವೆ. ಈ ನಿಟ್ಟಿನಲ್ಲಿ ಜಾನಪದರ ವಿವೇಚನೆ ಓಡುವುದಿಲ್ಲ. ಪರಂಪರಾಗತವಾಗಿ ಇವು ಬಹಿಷ್ಕೃತವಾದ ವಿಷಯಗಳು ಅಷ್ಟೇ. ಇಂಥ ನಿಷೇಧಗಳು ಜಾನಪದ ಬದುಕಿನ ಬಹುಭಾಗವನ್ನು ವ್ಯಾಪಿಸಿವೆ. ಒಂದೇ ನಿಷೇಧ ವೈಯಕ್ತಿಕ, ಕೌಟುಂಬಿಕ, ಪ್ರಾದೇಶಿಕ ಮಟ್ಟದ ವ್ಯಾಪ್ತಿಯನ್ನು ಹೇಗೆ ಪಡೆಯಬಹುದೆಂಬುದನ್ನು ಕ್ಷೌರದ ಉದಾಹರಣೆಯಿಂದ ಸ್ಪಷ್ಟಪಡಿಸಬಹುದು. ಹುಟ್ಟಿದ ದಿವಸ ಕ್ಷೌರ ಮಾಡಿಸಬಾರದು ಎನ್ನುವುದು ವೈಯಕ್ತಿಕ ನಂಬಿಕೆಯಾದರೆ, ಕುಲದೇವತೆಯ ವಾರದಂದು ಕ್ಷೌರ ಮಾಡಿಸಬಾರದೆನ್ನುವುದು ಕೆಲವು ಕುಟುಂಬಗಳ ನಂಬಿಕೆ. ಅಮಾವಾಸ್ಯೆಯ ದಿವಸ ಕ್ಷೌರ ಮಾಡಿಸಬಾರದೆನ್ನುವುದು ಕರ್ನಾಟಕದ ತುಂಬ ಹರಡಿಕೊಂಡಿರುವ ಸಾರ್ವತ್ರಿಕ ನಂಬಿಕೆ. ಈ ನಿಷೇಧ ಮುಖ್ಯವಾಗಿ

ಎರಡು ಭಾವಗಳೊಂದಿಗೆ ಬೆಸೆದುಕೊಂಡಿದೆ. ಒಂದು ಕ್ಷೌರವೆನ್ನುವುದು ಅಪವಿತ್ರ ಎನ್ನುವ ಭಾವನೆ, ಎರಡು ದೇವರ ಬಗೆಗಿರುವ ಪೂಜ್ಯ ಭಾವನೆ.

ಶಕುನಗಳು : ಜಾನಪದರಲ್ಲಿ ಬೇರುಬಿಟ್ಟ ನಂಬಿಕೆಗಳ ಒಂದು ಮುಖ್ಯ ಕವಲೆಂದರೆ ಶಕುನಗಳು. ಮನುಷ್ಯ ಬದುಕಿಗೆ ಎಷ್ಟೇ ಪ್ರಾಮಾಣಿಕನಾಗಿರುತ್ತೇನೆ ಎಂದರೂ ನಿತ್ಯ ಜೀವನದ ಸಾಮಾನ್ಯ ಮಟ್ಟದಲ್ಲಿಯೂ ಉಂಟಾಗುವ ಅಡೆತಡೆಗಳಿಗೆ ಆತ ತಲೆಕೆಡಿಸಿಕೊಳ್ಳುವಂತಾಯಿತು. ಕೈಕೊಳ್ಳುವ ಕೆಲಸ ತಾನು ಕಾರಣವಲ್ಲದೆ ಪೂರೈಸದೇ ಹೋದಾಗ ಅವನು ಈ ಮಧ್ಯ ಜರುಗಿದ ಅನೇಕ ಘಟನೆಗಳನ್ನು ಅನುಮಾನಿಸುವಂತಾಯಿತು. ಈ ಅನುಮಾನ ಮುಂದುವರಿದಿರುವಾಗಲೇ ಅಂಥವೇ ಘಟನೆಗಳು ಪದೇ ಪದೇ ಜರುಗಿ ಅದಕ್ಕನುಗುಣವಾಗಿ ಫಲಾಫಲಗಳು ಎದುರಾದಾಗ ಶಕುನಗಳು ನಿರ್ಮಾಣಗೊಂಡವು. ಶಕುನಗಳು ಭವಿಷ್ಯದ ಶುಭಾಶುಭಗಳಿಗೆ ದಿಕ್ಸೂಚಿಯೆನಿಸುತ್ತವೆ. ಶಕುನಗಳಿಂದ ಮನಸ್ಸು ಸಂಚಲಿತವಾಗುತ್ತದೆ. ಅದು ಆಯಾ ನಂಬಿಕೆಗಳಿಗನುಗುಣವಾಗಿ ಪ್ರಸನ್ನಗೊಳ್ಳುತ್ತದೆ ಅಥವಾ ವ್ಯಾಕುಲಗೊಳ್ಳುತ್ತದೆ. ಯಾವುದೇ ಕೆಲಸಕ್ಕೆ ಹೊರಟಾಗ ತುಂಬಿದಕೊಡ ಎದುರಾದರೆ ಶುಭ, ಬರಿಗೊಡ ಎದುರಾದರೆ ಅಶುಭ. ಈ ನಂಬಿಕೆಯನ್ನು ಬೆಂಬಲಿಸಿ ಉಂಟಾಗುವ ಕ್ರಿಯಾಸ್ವರೂಪದಲ್ಲಿಯೂ ಭಿನ್ನತೆಯುಂಟಾಗುತ್ತದೆ. ಶಕುನ ಒಳ್ಳೆಯದಿದ್ದರೆ ಕೆಲಸದ ಪೂರೈಕೆಗೆ ಮನೋಬಲ ಬೆಳೆಯುತ್ತದೆ. ಅಶುಭವಿದ್ದರೆ ಪ್ರಯಾಣವನ್ನೇ ನಿಲ್ಲಿಸಿಬಿಡಬಹುದು. ಪ್ರಯಾಣ ಅನಿವಾರ್ಯತೆಯಿಂದಾಗಿ ಮುಂದುವರಿದರೆ ಅಸ್ಥಿರ ಮನಸ್ಸು ಕೆಲಸದುದ್ದಕ್ಕೂ ಒಂದು ಮೂಲೆಯಲ್ಲಿ ಕುಳಿತು ಕುಟುಕುತ್ತಲೆ ಇರುತ್ತದೆ. ಆರತಿ ಮಾಡುವಾಗ ಸೆರಗು ಸುಡಬಾರದು, ಚಕ್ಕಡಿ ಹೂಡಿದಾಗ ನೊಗ ಮುರಿಯಬಾರದು, ಪ್ರಯಾಣ ಮಾಡುವಾಗ ಸೂಳೆ ಎದುರು ಬರಬೇಕು – ಇವು ಮತ್ತೆ ಕೆಲವು ಇಂಥ ಶಕುನಗಳು.

ಕನಸುಗಳೂ ಜನಪದರ ಪಾಲಿಗೆ ಒಂದರ್ಥದಲ್ಲಿ ಶಕುನಗಳೇ, ಯಾಕೆಂದರೆ ಕಾಣುವ ಕನಸಿನೊಂದಿಗೆ ಅವರು ಭವಿಷ್ಯತ್ತಿನ ಶುಭಾಶುಭಗಳನ್ನು ಪಟ್ಟಿ ಮಾಡುತ್ತಾರೆ. ಮೊದಮೊದಲು ಕನಸುಗಳಿಗೆ ಭಾಷ್ಯ ಹೇಳುವವರು ಮಾಟ-ಮಂತ್ರಗಾರರಿದ್ದಿರಬೇಕು. ಅವರಿಂದ ಪ್ರಾರಂಭಗೊಂಡ ಹೇಳಿಕೆಗಳೇ ಗಟ್ಟಿಯಾಗುತ್ತ ಅವನ್ನೇ ಸಾಮಾನ್ಯರೇ ಹೇಳುವಂತಾಯಿತು.

ನಿಜಜೀವನದಲ್ಲಿ ಕೆಟ್ಟದ್ದೆಂದು ಪರಿಗಣಿಸಲ್ಪಡುವುದು ಕನಸಿನಲ್ಲಿ ಬಂದರೆ ಅದು ಶುಭವಾಗಿ ಪರಿಣಮಿಸುತ್ತದೆ ಎನ್ನುವುದು ಸಾಮಾನ್ಯ ನಂಬಿಕೆ. ಕನಸಿನಲ್ಲಿ ಹಾವು ಬಂದರೆ ಒಳ್ಳೆಯದು, ಹೆಣ ಬಂದರೆ ಒಳ್ಳೆಯದು. ಅತ್ತರೆ ಒಳ್ಳೆಯದು. ಇದಕ್ಕೆ ವಿರುದ್ಧವಾಗಿ ನಿಜಜೀವನದಲ್ಲಿ ಒಳ್ಳೆಯದೆನಿಸುವುದು ಕನಸಿನಲ್ಲಿ ಬಂದರೆ ಅದು ಅಶುಭವಂತೆ.

ಕನಸಿನಲ್ಲಿ ಹೂಮುಡಿಯಬಾರದು, ಬಿಲ್ಲರೆ ಹಣ ಸಿಗಬಾರದು, ಬಹಳ ಜನ ಕೂಡಿ ಊಟ ಮಾಡಬಾರದು – ಎನ್ನುವವು ಇಂಥ ನಂಬಿಕೆಗಳು. ನಸುಕಿನಲ್ಲಿ ಬೀಳುವ ಕನಸು ನಿಜವಾಗುತ್ತದೆನ್ನುವುದು ಬೇರೊಂದು ನಂಬಿಕೆ. ಕನಸುಗಳ ಸತ್ಯಾಸತ್ಯತೆಯನ್ನು ವಿಶ್ಲೇಷಿಸುವುದು ಕಷ್ಟ. ಕನಸುಗಳಿಗೆ ಅರ್ಥ ಹುಡುಕುತ್ತಿರುವ ಮನೋ ವಿಜ್ಞಾನಿಗಳು ಮುಂಬರುವ ದಿನಗಳಲ್ಲಿ ಕನಸುಗಳ ಬೆನ್ನು ಪದರಾಗಿ ಬರುವ ನಂಬಿಕೆಗಳಿಗೆ ವಿವರಣೆ ನೀಡಬಹುದು.

೩. ವೈಯಕ್ತಿಕ ನಂಬಿಕೆಗಳು :

ಜಗತ್ತಿನಾದ್ಯಂತ ನಂಬಿಕೆಗಳ ವಿಷಯದಲ್ಲಿರುವ ವೈಯಕ್ತಿಕ ಪರಿಮಿತಿ ಕರ್ನಾಟಕದ ಜನರಿಗೂ ಉಂಟು. ಅನೇಕರಿಗೆ ತಮ್ಮ ತಮ್ಮ ಹುಟ್ಟಿದ ವಾರ ಶುಭವೆನಿಸುವುದು ಸಾಮಾನ್ಯ ಹಾಗೆಯೇ ಜ್ಯೋತಿಷಿಯೊಬ್ಬನ ಮಾತನ್ನು ನಂಬಿ ವಾರದ ಒಂದೋ ಎರಡೋ ದಿನಗಳನ್ನು ತನ್ನ ಪಾಲಿಗೆ ಅಶುಭವೆಂದೂ ಭಾವಿಸುವುದುಂಟು. ಒಬ್ಬನಿಗೆ ಒಂಭತ್ತು ಶುಭಸಂಖ್ಯೆಯಾದರೆ ಇನ್ನೊಬ್ಬನಿಗೆ ಏಳು ಅದೃಷ್ಟದ ಸಂಖ್ಯೆಯಾಗಬಹುದು. ತನಗೆ ಯಾವುದೋ ಒಂದು ವಿಷಯದಲ್ಲಿ ಯಶಸ್ಸನ್ನು ತಂದುಕೊಟ್ಟ ಒಂದು ವಸ್ತುವನ್ನು ಶುಭವಸ್ತುವನ್ನಾಗಿ ಜೀವನ ಪರ್ಯಂತ ತನ್ನ ಹತ್ತಿರ ಅದನ್ನು ಜೋಪಾನವಾಗಿ ಇರಿಸಿಕೊಳ್ಳಬಹುದು. ಮನೆಗೆ ಬರುವ ಸೊಸೆಗೆ ಅತ್ತಿಗೆ ಶುಭವನ್ನು ತಂದರೆ ಮಾವನಿಗೆ ಅಶುಭವನ್ನು ತರಬಹುದು – ಅದು ಅವರವರ ವೈಯಕ್ತಿಕ ನಂಬಿಕೆ. ಇಂಥವು ಎಷ್ಟೇ ವೈಯಕ್ತಿಕ ನಂಬಿಕೆಗಳೆಂದರೂ ಸಾರ್ವತ್ರಿಕ ನಂಬಿಕೆಯ ಮೂಲಭೂತಗುಣ ಇದರಲ್ಲಿ ಇದ್ದೇ ಇರುತ್ತದೆ. ಶುಭಾಶುಭಗಳಿಗೆ ವ್ಯಕ್ತಿ ವೈಯಕ್ತಿಕವಾಗಿ ಯಾವ ದಿನವನ್ನೇ ನಂಬಿರಲಿ, ವಾರದ ಒಂದೊಂದು ದಿನವೂ ಶುಭಾಶುಭಗಳನ್ನು ಹೊತ್ತು ತರಬಲ್ಲದೆಂಬುದು ಜನಸಾಮಾನ್ಯರ ಸಾರ್ವತ್ರಿಕ ಮೂಲಭೂತ ನಂಬಿಕೆ. ಸಂಖ್ಯೆಗಳ ವಿಷಯದಲ್ಲಿಯೂ ಅಷ್ಟೇ. ಸಂಖ್ಯೆಗಳು ಮನುಷ್ಯನಿಗೆ ಅದೃಷ್ಟವನ್ನೂ ತರಬಹುದು, ಅನಿಷ್ಟವನ್ನೂ ಉಂಟುಮಾಡಬಹುದು ಎಂಬುದನ್ನು ಪ್ರಪಂಚಾದ್ಯಂತ ಅನೇಕ ದೇಶಗಳು ನಂಬುವಂತೆ ಕರ್ನಾಟಕದ ಜನರೂ ನಂಬುತ್ತಾರೆ. ಹೀಗೆಯೇ ಸೊಸೆಯ ಕಾಲ್ಗುಣ ಮನೆತನದ ಏರಿಳಿತಕ್ಕೆ ಕಾರಣವಾಗಬಹುದು ಎನ್ನುವ ಸಾಮೂಹಿಕ ನಂಬಿಕೆ ಆಕಸ್ಮಿಕ ಘಟನಾವಳಿಗಳನ್ನನುಸರಿಸಿ ವೈಯಕ್ತಿಕವಾಗಬಹುದು.

* * *

ಜಾನಪದ ನಂಬಿಕೆಗಳನ್ನು ವೈಜ್ಞಾನಿಕ ಮತ್ತು ಅವೈಜ್ಞಾನಿಕ ನಂಬಿಕೆಗಳೆಂದು ವೈಚಾರಿಕ ವಿಶ್ಲೇಷಣೆಯಿಂದ ಗುರುತಿಸುವುದು ಸಾಧ್ಯವಿದೆ. ಜಾನಪದ ನಂಬಿಕೆ ಮೂಲತಃ ಇಂಥ ತಾರ್ಕಿಕ ಶಿಶುವಲ್ಲ. ಜಾನಪದರು ತಲೆತಲಾಂತರಗಳಿಂದ ಬದುಕಿನ ಮೌಲ್ಯಗಳೆಂಬಂತೆ ಹಿರಿಯರಿಂದ ಇವನ್ನು ಸ್ವೀಕರಿಸಿದವರು. ಆದ್ದರಿಂದ ಈ

ನಂಬಿಕೆಗಳು ವೈಜ್ಞಾನಿಕ ಅವೈಜ್ಞಾನಿಕವೆಂದು ಜಾನಪದ ಮನೋಮಟ್ಟದಲ್ಲಿ ಪ್ರಥಃಕರಣಗೊಂಡು ಸ್ವೀಕರಿಸಲ್ಪಟ್ಟವುಗಳಲ್ಲ. ಈ ಪ್ರಥಃಕರಣ ಜಾನಪದ ಅಭ್ಯಾಸಿಗೆ ಸೇರಿದ್ದು.

ರಾತ್ರಿಯಲ್ಲಿ ಕಿರುಚುತ್ತಾ ಹಾರುವ ಟಿಂವಕ್ಕಿ ಸಾವನ್ನು ಸಾರುತ್ತದೆನ್ನುವುದು ಜಾನಪದ ನಂಬಿಕೆ. ಕಾಗೆ ತಲೆಯ ಮೇಲೆ ಹಾರಿದರೂ ಸಾವು ಸಮೀಪಿಸುತ್ತದಂತೆ ! ತಮ್ಮ ಪಾಡಿಗೆ ತಾವು ಕಿರುಚುವ, ಹಾರುವ ಟಿಂವಕ್ಕಿ, ಕಾಗೆಗಳು ಮರಣವನ್ನು ಹೇಗೆ ತಂದಾವು ? ಅಂಗೈ ಕಡಿದರೆ ಹಣಸಿಗುತ್ತದೆ, ಅಂಗಾಲು ತುರಿಸಿದರೆ ಪ್ರಯಾಣ, ಕರಿ ನಾಲಿಗೆಯವರ ಮಾತು ನಿಜವಾಗುತ್ತದೆ – ಎಂಬಂತಹ ನಂಬಿಕೆಗಳೂ ಕಾರ್ಯಕಾರಣ ಸಂಬಂಧವನ್ನು ಪಡೆದಿಲ್ಲ. ಎಲ್ಲಿಯೋ ಒಂದೆರೆಡು ಕಾಕತಾಳೀಯವಾಗಿ ಹೊಂದಿದಾಗ ಇದು ಸತ್ಯವೇ ಎನ್ನುವ ಭ್ರಮೆ ಜಾನಪದರನ್ನೂ ಆವರಿಸಿ ನಂಬಿಕೆ ಮುಂದುವರಿಯುತ್ತದೆ.

ಒಂದೊಂದು ನಂಬಿಕೆಯ ಹಿಂದೆ ಕಲ್ಪಕಥೆಯನ್ನು ಜೋಡಿಸಿರುವುದೂ ಅವೈಜ್ಞಾನಿಕವೇ. ಉತ್ತರಕ್ಕೆ ಮುಖಮಾಡಿ ಮಲಗಬಾರದು ಎನ್ನುವುದಕ್ಕೆ ಪೌರಾಣಿಕ ಕಥೆಯೊಂದರ ಹಿನ್ನಲೆಯಿದೆ.[೩] ಪಾರ್ವತಿದೇವಿ ಮೂರ್ತಿಯೊಂದನ್ನು ಕಾವಲಿರಿಸಿ ಸ್ನಾನ ಮಾಡುತ್ತಿದ್ದಳು, ಹೊರಗಿನಿಂದ ಬಂದ ಶಿವನನ್ನು ಇವನು ತಡೆದಾಗ ಕೋಪಗೊಂಡ ಶಿವ ಮೂರ್ತಿಯ ಶಿರಚ್ಛೇದನ ಮಾಡಿದ. ಪಾರ್ವತಿ ತನ್ನ ಕುಮಾರನನ್ನು ಬದುಕಿಸಿಕೊಡಲು ಅಂಗಲಾಚಿದಳು. ಶಿವನು ಉತ್ತರಕ್ಕೆ ತಲೆಯಿಟ್ಟು ಮಲಗಿದ ಮನುಷ್ಯನ ತಲೆಯನ್ನೋ ಪ್ರಾಣಿಯ ತಲೆಯನ್ನೋ ಕಡಿದು ತಂದು ಮುಂಡಕ್ಕೆ ಸೇರಿಸಲು ತನ್ನ ಗಣಗಳಿಗೆ ಹೇಳಿದ. ಉತ್ತರಕ್ಕೆ ಮುಖಮಾಡಿ ಮಲಗಿದ ಮನುಷ್ಯ ಸಿಗದೇ ಹೋದಾಗ ಈ ದಿಕ್ಕಿಗೆ ಮುಖಮಾಡಿ ಮಲಗಿದ ಆನೆಯ ಸೊಂಡಿಲನ್ನೇ ಕತ್ತರಿಸಿ ಈ ಮೂರ್ತಿಗೆ ಹಚ್ಚಲಾಗಿ ಅವನು 'ಗಜವದನ'ನಾಗಿ ಮೇಲೆದ್ದ. ಈಗ ಪ್ರಸ್ತುತ ನಂಬಿಕೆಯ ಹಿನ್ನಲೆಯಿಷ್ಟೇ : ಉತ್ತರಕ್ಕೆ ತಲೆಗೊಟ್ಟು ಮಲಗಿದರೆ ಆನೆಗೆ ಬಂದಗತಿ, ತಮಗೂ ಬಂದೀತೆನ್ನುವುದು, ಇಂಥ ಕಲ್ಪಕಥೆಗಳು ನಮ್ಮ ಜನಪದರಲ್ಲಿ ಹೇರಳವಾಗಿವೆ.

ವೈಜ್ಞಾನಿಕ ಸತ್ಯವನ್ನು ಗರ್ಭೀಕರಿಸಿಕೊಂಡ ಜಾನಪದ ನಂಬಿಕೆಗಳು ನಮ್ಮಲ್ಲಿ ಸಾಕಷ್ಟಿವೆ. ೧. ರಾತ್ರಿ ಹೊತ್ತು ಕಸ ಚೆಲ್ಲಬಾರದು, ೨. ಕಂಬವನ್ನು ಕಾಲಿನಿಂದ ಒದೆಯಬಾರದು. ೩. ನಿಚ್ಚಣಿಕೆಯ ಬುಡದಲ್ಲಿ ಹಾಯಬಾರದು. ೪. ದೀಪ ಆರಿದ ಮೇಲೆ ಊಟ ಮಾಡಬಾರದು. ಕಸದಲ್ಲಿ ಬೆಲೆಬಾಳುವ ವಸ್ತು ಇರಬಹುದು. ರಾತ್ರಿ ಹೊತ್ತು ಅದು ಕಾಣುವುದಿಲ್ಲ. ಆದ್ದರಿಂದ ಚೆಲ್ಲಕೂಡದು. ಕಂಬದ ಮೇಲೆ ಮಾಳಿಗೆ ನಿಂತಿರುತ್ತದೆ. ಹುಳು ತಿಂದು ನೀರು ಕುಡಿದು ಕಂಬದ ಕಟ್ಟಿಗೆ ನಿಃಸ್ಸತ್ವವಾಗಿರಬಹುದು. ಒದ್ದದ್ದೇ ನೆವವಾಗಿ ಅಪಘಾತ ಉಂಟಾಗಬಹುದು. ಹೀಗೆಯೇ ಉಳಿದ ನಂಬಿಕೆಗಳನ್ನು ತೀರ ಸಹಜವಾಗಿ ವೈಜ್ಞಾನಿಕವಾಗಿ ಸಮರ್ಥಿಸಿಕೊಳ್ಳಬಹುದು.

---

೩. ನಮ್ಮ ಜನಪದ ನಂಬಿಕೆಗಳು ಪುಟ–೬೬–೬೭

ಜಾನಪದ ವೈದ್ಯ ವೈಜ್ಞಾನಿಕ ಸತ್ಯದ ನೆಲೆಯಲ್ಲಿಯೇ ಪ್ರಾರಂಭಗೊಂಡು ಬೆಳೆದು ಬಂದದ್ದು. ಇಂದು ಜಾನಪದ ವೈದ್ಯವನ್ನು ಜಾನಪದ ನಂಬಿಕೆಗಳಿಂದ ಬೇರ್ಪಡಿಸಲಾಗುತ್ತದೆ. ವೈದ್ಯನ ಸಹಾಯವಿಲ್ಲದೇ ಒಂದೊಂದು ರೋಗಕ್ಕೆ ಬಳಸುವ ಮದ್ದು, ಮಾಡುವ ಚಿಕಿತ್ಸೆ ಕೇವಲ ರೂಢಿ ನಂಬಿಕೆ. ಈ ಮದ್ದು ಅಥವಾ ಚಿಕಿತ್ಸೆಯಿಂದ ರೋಗಿಯಲ್ಲಿ ಉಂಟಾಗುವ ಪ್ರತಿಕ್ರಿಯೆ ಅವರಿಗೆ ತಿಳಿಯುವ ವಿಷಯವಲ್ಲ. ಇಲ್ಲಿ ಪ್ರತಿಕ್ರಿಯೆಗಿಂತಲೂ ಪರಿಣಾಮ ಮಾತ್ರ ಗ್ರಾಹ್ಯ. ೧. ಎತ್ತಿಗೆ ಕಾಲಜ್ಜಾನಿ ಬಂದರ ಕಾಯ್ದ ಮಣ್ಣಾಗ ನಿಂದರಸಬೇಕು.[೪] ೨. ಅಜವಾನ ತಿಂದರ ಹೊಟ್ಟಿ ಕಡಿತ ನಿಲ್ಲತಾದ.[೫] ೩. ತಲೆನೋವು ಬಂದಾಗ ಬಳೆಯ ಚೂರನ್ನು ದೀಪದಲ್ಲಿ ಬಿಸಿಮಾಡಿ ಹಣೆಯ ಎರಡು ಪಕ್ಕಕ್ಕೂ ಚುಟಿಕಿ ಹಾಕಿದರೆ ತಕ್ಷಣ ನಿಂತು ಹೋಗುತ್ತದೆ.[೬] ೪. ಆನೆಯ ಲದ್ದಿಯನ್ನು ತುಳಿದರೆ ಮುಂದೆ ಕಾಲಿಗೆ ಸಂಬಂಧವಾದ ಯಾವ ರೋಗವೂ ಬರುವುದಿಲ್ಲ. ನಮ್ಮ ಸುತ್ತಿನ ನಂಬಿಕೆಗಳು ಪುಟ–೫೨.[೭]

ಅನೇಕ ಸಲ ಸ್ವಾರ್ಥ ಸಾಧನೆಗೆ ಪುರೋಹಿತ ವರ್ಗದವರು, ಮಂತ್ರವಾದಿಗಳು ಔಷಧಿಯನ್ನು ದೇವರ ಹೆಸರಿನಲ್ಲಿ ಕೊಡುವುದುಂಟು. ತೆಗೆದುಕೊಂಡ ವ್ಯಕ್ತಿ ಕೇವಲ ಅದನ್ನು ನಂಬಿಕೆಯಿಂದ ಸ್ವೀಕರಿಸುತ್ತಾನೆ. ತರುವಾಯ ರೋಗಿ ಗುಣಮುಖವಾಗುವುದು ಔಷಧಿಯಿಂದಲೇ ಆದರೂ ಅದು ಪೂಜಾರಿಕೊಟ್ಟ ದೇವರ ಪ್ರಸಾದದಿಂದ ಎನ್ನುವುದು ಕೇವಲ ನಂಬಿಕೆ. ಆಧುನಿಕ ವಿಚಾರವಂತರು ಇದನ್ನು ಶೋಷಣೆ ಮುಂತಾಗಿ ಎಷ್ಟೇ ತಲೆಕೆಡಿಸಿಕೊಂಡರೂ ಜಾನಪದರ ಇಂಥ ನಂಬಿಕೆಗಳನ್ನು ಬೇರು ಸಹಿತ ಕಿತ್ತೆಸೆಯುವುದು ಪ್ರಯಾಸಕರ ಕೆಲಸ.

ಒಂದೇ ನಂಬಿಕೆ ಪ್ರದೇಶಕ್ಕನುಗುಣವಾಗಿ ಭಿನ್ನ ಫಲವನ್ನು ಕೊಡಬಹುದು. ಒಲೆ ನಕ್ಕರೆ ನೆಂಟರು ಬರುತ್ತಾರೆ.[೮] ಎನ್ನುವುದು ದಕ್ಷಿಣ ಕರ್ನಾಟಕದ ನಂಬಿಕೆಯಾದರೆ ಒಲೆ ನಕ್ಕರೆ ಜಗಳ ಆಗ್ತೇತಿ[೯] ಎನ್ನುವುದು ಉತ್ತರ ಕರ್ನಾಟಕದ ನಂಬಿಕೆ. ಒಂದೇ ಅಂಕ ಪ್ರಾದೇಶಿಕವಾಗಿ ಶುಭವೂ ಆಗಬಹುದು, ಅಶುಭವೂ ಆಗಬಹುದು. ಸಂಖ್ಯೆ ಮೂರನ್ನು ಕೆಲವು ಕಡೆಗೆ ಶುಭವೆನ್ನುತ್ತಾರೆ.[೧೦] ಉತ್ತರ ಕರ್ನಾಟಕದಲ್ಲಿ ಮೂರು ಅಶುಭ ಸಂಖ್ಯೆ ಎನಿಸುತ್ತದೆ. ದೇವಸ್ಥಾನದಾಗ ತೊಟ್ಟಲ ಕಾಯಿ ಒಡದರ ಶುಭ[೧೧] ಎನ್ನುವುದು ಉತ್ತರ ಕರ್ನಾಟಕದ ನಂಬಿಕೆಯಾದರೆ ತೆಂಗಿನಕಾಯಿ ಒಡೆಯುವಾಗ ತೊಟ್ಟಿಲಗಾಯಿಯಾದರೆ ಗಂಡು ಮಗು ಆಗುತ್ತದೆ[೧೨] ಎನ್ನುವ ದಕ್ಷಿಣ ಕರ್ನಾಟಕದ ನಂಬಿಕೆಯಲ್ಲಿ ಶುಭವು ಗಂಡು ಮಗುವಿನ ಜನನಕ್ಕೆ ಮಾತ್ರ ಸೀಮಿತವಾಗಿದೆ.

೪–೫. ಉತ್ತರ ಕರ್ನಾಟಕದ ಜನಪದ ನಂಬಿಕೆಗಳು ಪುಟ– ೫೭.
೬–೭. ನಮ್ಮ ಸುತ್ತಿನ ನಂಬಿಕೆಗಳು ಪುಟ–೫೭.
೮. ಅದೇ ಪುಟ–೫೧.
೯. ಉತ್ತರ ಕರ್ನಾಟಕದ ಜನಪದ ನಂಬಿಕೆಗಳು ಪುಟ – ೫
೧೦. ಕರ್ನಾಟಕ ಜಾನಪದ ಪುಟ ೧೭೬, ಜನಪದ ಅಧ್ಯಯನ ಪುಟ–೩೦೫.
೧೧. ಉತ್ತರ ಕರ್ನಾಟಕದ ಜನಪದ ನಂಬಿಕೆಗಳು ಪುಟ–೨.
೧೨. ನಮ್ಮ ಸುತ್ತಿನ ನಂಬಿಕೆಗಳು ಪುಟ–೫೧

ಮಾಟ ಮಂತ್ರ :

ಮಾಟ ಮಂತ್ರಗಳು ನಂಬಿಕೆಯಡಿಯಲ್ಲಿಯೇ ಸೇರುತ್ತವೆ. ಸಾಮಾನ್ಯರಲ್ಲಿ ನೆಲೆನಿಂತ ದೇವಭಯ ಮತ್ತು ಭೂತಭಯಗಳನ್ನು ಮಂತ್ರವಾದಿಗಳು ಚೆನ್ನಾಗಿ ಉಪಯೋಗಿಸಿಕೊಂಡರು. "ಮಾಟ ವಿಜ್ಞಾನಕ್ಕಿಂತಲೂ ಪ್ರಾಚೀನವಾದುದು. ದೋಷ ವಿಮುಕ್ತವಾದ ಅಥವಾ ದೋಷಪೂರ್ಣವಾದ ತರ್ಕ ಅದರ ಪ್ರಮುಖ ಲಕ್ಷಣ. ತಾರ್ಕಿಕ ಪ್ರಜ್ಞೆ ಒಂದಲ್ಲ ಒಂದು ರೀತಿಯಲ್ಲಿ ಆದಿಮಾನವರಲ್ಲಿಯೂ ಇತ್ತು. ಅದು ಮಾನವ ಸಹಜವಾದ ಗುಣ ಎಂಬುದಂತೂ ಸತ್ಯ. ಆದ್ದರಿಂದ ವಿಜ್ಞಾನಕ್ಕೆ ಮಾಟವೇ ಮೂಲ. ಅದು ಪ್ರೇರಕ ಅಥವಾ ಸ್ಫೂರ್ತಿ ಶಕ್ತಿಯೆಂದು ಧಾರಾಳವಾಗಿ ಹೇಳಬಹುದು". [೧೩]

ಮಾಟಕ್ಕೆ ವೈಜ್ಞಾನಿಕ ತಳಹದಿಯಿದ್ದರೂ ಈ ವೈಜ್ಞಾನಿಕ ಚಾರ್ಯಕಲಾಪಗಳ ಹಿನ್ನೆಲೆ ಮಾತ್ರ ಸಾಮಾನ್ಯರಿಗೆ ಗೊತ್ತಾಗಲಾರದಂತೆ ನಡೆಯುವುದೇ ಮಾಟದ ವಿಶೇಷತೆ. ಮಂತ್ರವಾದಿಯ ಉಪಕರಣಗಳೆನಿಸಿದ ಮಂತ್ರದಂಡ, ಮೊಳಕೈ ಎಲಬು, ತಲೆಬುರುಡೆ, ನಿಂಬೆಹಣ್ಣು, ಸೂಜಿ, ಕೇರ ಮುಂತಾದವುಗಳು ಜಾನಪದರಿಗೆ ಕೇವಲ ಕುತೂಹಲದ ಅಥವಾ ಭಯದ ವಸ್ತುಗಳು. ಇವುಗಳ ಕ್ರಿಯೆಯ ಗುಟ್ಟು ಉಳಿದವರಿಗೆ ಗೊತ್ತಿರದಾಗ ಜನಸಾಮಾನ್ಯರ ಪಾಲಿಗೆ ಮಾಟವೆನಿಸುತ್ತದೆ. ಸ್ವತಃ ಮಂತ್ರವಾದಿಗೇ ತನ್ನ ಮಾಟದ ಹಿಂದಿರುವ ವೈಜ್ಞಾನಿಕ ಸತ್ಯ ಎಷ್ಟು ಗೊತ್ತುಂಟೋ ! ಅದು ಗುರುವಿನಿಂದ ಕೇವಲ ಒಂದು ನಂಬಿಕೆಯಾಗಿ ಈ ಮಾಟಗಾರನಿಗೆ ಬಂದಿರಬಹುದು. ಕಾಲಕ್ರಮೇಣ ತನ್ನ ಮಾಟಕ್ಕೆ ವೈಜ್ಞಾನಿಕ ತಳಹದಿಯಿದೆ ಎಂದು ಗೊತ್ತಾದ ಮೇಲೂ ಅವನು ಸ್ವಾರ್ಥಕ್ಕಾಗಿ ಗುಟ್ಟನ್ನು ಬಹಿರಂಗಪಡಿಸಲಿಕ್ಕಿಲ್ಲ.

ಮಂತ್ರವಾದಿಯ ಮಂತ್ರ ಪ್ರಭಾವವೋ ಔಷಧಿಯ ಪ್ರಭಾವವೋ ಮಂತ್ರವಾದಿಯ ಔಷಧಿಯ ಅಥವಾ ಉಪಕರಣದ ಪ್ರಭಾವವೋ ಮಂತ್ರವಾದಿಯ ಕಾರ್ಯಕ್ಷೇತ್ರ ಏನೇ ಇರಲಿ, ಜಾನಪದರಿಗೆ ಮಾತ್ರ ಅದು ನಂಬಿಕೆ. ಹೀಗಾಗಿ ಮಾಟದ ಹೆಸರಿನಲ್ಲಿ ಅಥವಾ ದೇವರ ಹೆಸರಿನಲ್ಲಿ ಒಂದು ಲಿಂಬೆಹಣ್ಣು ಮಂತ್ರವಾದಿಯ ಕೈಯಲ್ಲಿರುವವರೆಗೆ ಅದು ಕೇವಲ ಮಾಟದ ವಸ್ತು – ಅದನ್ನು ತಂದು ಮನೆಯಲ್ಲಿ ನೇತುಹಾಕುವುದು ಅಥವಾ ಕೊರಳಲ್ಲಿ ಕಟ್ಟಿಕೊಳ್ಳುವುದು ನಂಬಿಕೆ – ಅದನ್ನು ನೇರವಾಗಿ ಔಷಧಿಗಳಲ್ಲಿ ಒಂದೆಂದು ಪರಿಗಣಿಸುವುದು ಜಾನಪದ ವೈದ್ಯ. ಮಾಟವನ್ನು ಸಾದೃಶ್ಯ ಮೂಲ ಮತ್ತು ಸಂಸರ್ಗಮೂಲ ಎಂದು ಎರಡು ಭಾಗವಾಗಿ ವಿಭಜಿಸುವುದುಂಟು. "ಪರಸ್ಪರ ಹೋಲುವ ವಸ್ತುಗಳು ಒಂದೇ ಎಂಬ ಭಾವನೆ ಸಾದೃಶ್ಯಮೂಲ ಮಾಟದ ರಹಸ್ಯ; ಒಮ್ಮೆ ಸಾಹಚರ್ಯ ಸಂಬಂಧ ಹೊಂದಿರುವ ವಸ್ತುಗಳು ಸದಾ ಅದೇ ಸಂಬಂಧ ಹೊಂದಿರುತ್ತವೆನ್ನುವ ವಾದ ಸಂಸರ್ಗ ಮೂಲ ಮಾಟದ ಗುಟ್ಟು. [೧೪]

---

೧೩. ಜಾನಪದ ಅಧ್ಯಯನ ಪುಟ – ೨೫೮

೧೪. ಜಾನಪದ ಅಧ್ಯಯನ ಪುಟ –೨೬೦ ಹೆಚ್ಚಿನ ವಿಷಯಕ್ಕೆ ಇದೇ ಗ್ರಂಥದ ಪ್ರಸ್ತುತ ಲೇಖನ ನೋಡಿ.

ಕಾಲ ಉರುಳಿದಂತೆ ನಂಬಿಕೆಗಳು ಹೊಸ ಹೊಸ ಪರಿಸರಕ್ಕೆ ಹೊಂದಿಕೊಂಡು ಹುಟ್ಟುತ್ತಲೇ ಇವೆ. ವಿಜ್ಞಾನ ಎಷ್ಟೇ ಬೆಳೆದಿದೆ ಎಂದರೂ ಮನುಷ್ಯನಲ್ಲಿ ವೈಚಾರಿಕತೆ ಎಷ್ಟೇ ತುಂಬಿದೆಯೆಂದರೂ ನಂಬಿಕೆಗಳು ಹುಟ್ಟುತ್ತಿರುವುದು ವಿಪರ್ಯಾಸವೆನಿಸಿದರೂ ವಾಸ್ತವ ಸತ್ಯ. ಕನಸಿನಲ್ಲಿ ಬಸ್ಸು-ರೈಲು ಪ್ರಯಾಣ ಕಂಡರೆ ಯಾರದ್ದಾದರೂ ಶವ ಸಂಸ್ಕಾರಕ್ಕೆ ಪ್ರಯಾಣ ಬೆಳಸಬೇಕಾಗುತ್ತದೆ.[೧೫] ಎನ್ನುವ ನಂಬಿಕೆಯಾಗಲಿ, ಬೀಡಿ ಸಿಗರೇಟು ದೇವರ ದೀಪಕ್ಕೆ ಹಿಡಿದು ಹೊತ್ತಿಸ್ಕೋಬಾರ್ದು[೧೬] ಎನ್ನುವ ನಿಷೇಧವಾಗಲಿ ತೀರ ಇತ್ತೀಚಿನ ಬೆಳವಣಿಗೆಗಳು. ಇಂದಿಗೂ ಅನೇಕ ಪಟ್ಟಣಗಳಲ್ಲಿ ಭವಿಷ್ಯಕಾರರು ತುಂಬಿಕೊಂಡಿದ್ದಾರೆ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು, ಚುನಾವಣೆಗೆ ನಿಂತ ಹುರಿಯಾಳುಗಳು, ಮದುವೆಗೆ ಹಾತೊರೆಯುವ ಪ್ರೇಮಿಗಳು ಈ ಭವಿಷ್ಯಕಾರರ ಧೋರಣೆಗಳತ್ತ ದೌಡಾಯಿಸುತ್ತಲೇ ಇದ್ದಾರೆ.

ಸಂಪ್ರದಾಯಗಳು :

"ಎಲ್ಲಿ ಒಂದು ಆಚರಣೆಯಲ್ಲಿ ಪರಂಪರೆಯ ಮುದ್ರೆ ಕಂಡುಬರುತ್ತದೋ ಅದು ವ್ಯಷ್ಟಿ ಸ್ವರೂಪವನ್ನು ದಾಟಿ ಸಮಷ್ಟಿ ರೂಪವನ್ನು ಪಡೆದುಕೊಂಡು ಸಾಮೂಹಿಕ ವ್ಯವಹಾರದಲ್ಲಿ ಆಚರಣೆಯಾಗುತ್ತದೋ ಅಲ್ಲಿ 'ಸಂಪ್ರದಾಯ' ಎಂಬುದನ್ನು ಗುರುತಿಸಬಹುದು.[೧೭] ಈ ಸಂಪ್ರದಾಯಗಳನ್ನು ಭಾವುಕ, ಭೌತಿಕ ಎಂದು ಎರಡು ಬಗೆಯಾಗಿ ವಿಂಗಡಿಸಿಕೊಳ್ಳಬಹುದು. ಭಾವುಕ ಸಂಪ್ರದಾಯ ಭಾವನಾಪ್ರಧಾನವಾದರೆ, ಭೌತಿಕ ಸಂಪ್ರದಾಯ ಕ್ರೀಯಾಪ್ರಧಾನ. ಭಾವುಕ ಸಂಪ್ರದಾಯದಲ್ಲಿಯ ಕ್ರಿಯೆ ಆಚರಣೆಯಾಗುತ್ತದೆ. ಭೌತಿಕ ಸಂಪ್ರದಾಯದಲ್ಲಿಯ ಕ್ರಿಯೆ ಕ್ರಮವೆನಿಸುತ್ತದೆ. ಮದುವೆ, ಹಬ್ಬ ಮುಂತಾದವುಗಳು ಭಾವುಕ ಸಂಪ್ರದಾಯಗಳಾದರೆ ವ್ಯವಸಾಯ, ಬೇಟೆ, ಮೀನುಗಾರಿಕೆ ಮುಂತಾದ ವೃತ್ತಿಪ್ರಧಾನ ಅಂಶಗಳು ಭೌತಿಕವೆನಿಸುತ್ತವೆ.

ಭಾವುಕ ಸಂಪ್ರದಾಯಗಳ ಬೆನ್ನೆಲಬು ನಂಬಿಕೆ. ನಮ್ಮ ಇಂಥ ಸಂಪ್ರದಾಯಗಳಿಗೆ ದೇವಭಯ ಅಥವಾ ಧರ್ಮಭಾವನೆ ಕಾರಣೀಭೂತವಾಗಿದೆ. ನಂಬಿಕೆಗೆ ಮಾನಸಿಕ ನೆಲೆಯಲ್ಲಿ ಚಾಲನೆ ದೊರೆತರೆ ಸಂಪ್ರದಾಯ ಸಾಮಾಜಿಕ ಸ್ಥಿತಿಯಲ್ಲಿ ಮುಂದುವರಿಯುತ್ತದೆ. ನಮ್ಮ ಅನೇಕ ಸಂಪ್ರದಾಯಗಳು ಧಾರ್ಮಿಕ ನಂಬಿಕೆಯ ವೃತ್ತದಲ್ಲಿಯೇ ಶೇಖರಿಸಿಕೊಂಡಿರುವುದು ಪ್ರಮುಖವಾಗಿ ಗಮನಿಸಬೇಕಾದ ಅಂಶ. ಕೆಲವು ನಂಬಿಕೆಗಳು ಬಿಡಿಬಿಡಿಯಾಗಿ ಸಂಪ್ರದಾಯದ ಚೌಕಟ್ಟಿಗೆ ಸೇರುವುದು ಗಮನಾರ್ಹ ಸಂಗತಿ. ದೇವ ನಂಬಿಕೆಯ ಹಿನ್ನಲೆಯಲ್ಲಿ ಯಾವುದೇ ಒಂದು ಊರಲ್ಲಿ ಪ್ರತಿವರ್ಷ ನಡೆಯುವ ಜಾತ್ರೆ ಒಂದು ಸಂಪ್ರದಾಯ. ಆ ಜಾತ್ರೆಯಲ್ಲಿ ತೇರಿನ ಗಾಲಿಯ ಅಚ್ಚು ಮುರಿದು ಅಶುಭವಾಯಿತೆನ್ನುವುದು ಒಂದು ನಂಬಿಕೆ. ಹೀಗೆಯೇ ಮದುವೆ

೧೫. ನಮ್ಮ ಸುತ್ತಿನ ನಂಬಿಕೆಗಳು ಪುಟ-೨೯
೧೬. ಉತ್ತರ ಕರ್ನಾಟಕದ ಜನಪದ ನಂಬಿಕೆಗಳು ಪುಟ-೯
೧೭. ಜಾನಪದ ಸಂಗಮ ಪುಟ-೬೦.

ಒಂದು ಸಂಪ್ರದಾಯವಾದರೆ ಅಕಸ್ಮಿಕವಾಗಿ ಬಾಸಿಂಗ ಮುರಿದು ಅಶುಭವಾಯಿತೆನ್ನುವುದು ಬೇರೊಂದು ನಂಬಿಕೆ.

ಇಷ್ಟು ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಹರಡಿಕೊಂಡಿರುವ ಭಾವುಕ, ಭೌತಿಕ ಸಂಪ್ರದಾಯಗಳನ್ನು ಈಗ ಪರಿಶೀಲಿಸಬಹುದು.

ಭಾವುಕ ಸಂಪ್ರದಾಯಗಳು

ಹಬ್ಬಗಳು

ಜಾನಪದರಿಗೆ ಹಬ್ಬಗಳು ಕೇವಲ ಮನರಂಜನೆಯಲ್ಲ; ಅವು ಧರ್ಮಭಾವನೆಯ ಪಡಿಯಚ್ಚು. ಈ ಹಬ್ಬಗಳ ಅಂಗವಾಗಿ ಬರುವ ಅನೇಕ ಆಚರಣೆಗಳು, ನಂಬಿಕೆಗಳು ಅವರು ಈ ವಿಷಯದಲ್ಲಿ ಇರಿಸಿಕೊಂಡಿರುವ ಶ್ರದ್ಧೆಯನ್ನು ಮನದಟ್ಟು ಮಾಡಿಕೊಡುತ್ತವೆ. ದೇವತೆಗಳಿಗೆ ಸಂಬಂಧಿಸಿದಂತೆ ಅನೇಕ ಹಬ್ಬಗಳನ್ನು ಜಾನಪದರು ಆಚರಿಸುವಂತೆ ಅನ್ನ ಕೊಡುವ ಭೂತಾಯಿಯನ್ನು ಪೂಜಿಸುವ ಅಪ್ಪಟ ಜಾನಪದ ಹಬ್ಬಗಳೂ ಉಂಟು. ಕೊಡಗಿನ ಹುತ್ತರಿಹಬ್ಬ, ಉತ್ತರಕರ್ನಾಟಕದ ಕಾರಹುಣ್ಣಿಮೆ, ಶೀಗಿಹುಣ್ಣಿಮೆ, ಎಳ್ಳ ಅಮಾವಾಸ್ಯೆಗಳು ಒಕ್ಕಲಿಗರ ಹಬ್ಬವಾಗಿ ಅಭ್ಯಾಸಯೋಗ್ಯವಾಗಿದೆ.

ಕೊಡಗರ ಹುತ್ತರಿ ಹಬ್ಬವು ಮಾರ್ಗಶಿರಮಾಸದ ಹುಣ್ಣಿಮೆಯಂದು ಬರುತ್ತದೆ. ಅಂದು ಮುಂಜಾನೆ ಆಯುಧ ಪೂಜೆಯಾಗುತ್ತದೆ. ತರುವಾಯ 'ನೆರೆ'ಗಳನ್ನು ಕಟ್ಟುತ್ತಾರೆ. 'ನೆರೆ' ಎಂದರೆ ಎರಡುಮೂರು ಬಗೆಯ ಎಲೆಗಳನ್ನು ಒಟ್ಟಿಗೆ ಮಡಿಸಿ ನಾರಿನಿಂದ ಕಟ್ಟುವ ಸುರುಳಿ. ಈ ನೆರೆಗಳನ್ನು ಬಹುಸಂಖ್ಯೆಯಲ್ಲಿ ಕಟ್ಟಿಕೊಂಡು ಮೆರವಣಿಗೆಯಲ್ಲಿ ಗದ್ದೆಗೆ ಬರುತ್ತಾರೆ. ಸಿಂಗರಿಸಿದ ಭತ್ತದ ಗದ್ದೆಯಲ್ಲಿ ಒಂದೆಡೆ ಪೂಜೆ ಮಾಡಿ ನೈವೇದ್ಯ ಹಿಡಿದು, ಕೆಲವು ಭತ್ತದ ತೆನೆಗಳಿಗೆ ನೆರೆಗಳನ್ನು ಕಟ್ಟಲಾಗುತ್ತದೆ. ಕುಡುಗೋಲಿನಿಂದ ಕೆಲವು ಭತ್ತದ ತೆನೆಗಳನ್ನು ಕೊಯ್ಯುತ್ತ ಎಲ್ಲರೂ 'ಪೊಲಿ ಪೊಲಿ ದೇವ' ಎನ್ನುತ್ತಾರೆ. ಪೊಲಿ ಪೊಲಿ ದೇವ ಎಂದರೆ "ದೇವರೇ ನಾವು ಬೆಳೆದ ದವಸಧಾನ್ಯಗಳು ಹೆಚ್ಚಲಿ" ಎಂದು ಅರ್ಥ. ಈ ಸಂದರ್ಭದಲ್ಲಿ ವಾದ್ಯಗಳು ಮೊಳಗುತ್ತವೆ. ಹೀಗೆಯೇ ಅನ್ನುತ್ತ ಎಲ್ಲರೂ ದೇವಸ್ಥಾನಕ್ಕೆ ಬಂದು ಪ್ರತಿಯೊಂದು ನೆರೆಯಲ್ಲಿ ಭತ್ತದ ತೆನೆಯನ್ನು ಪೋಣಿಸಿ ದೇವಸ್ಥಾನದ ಕಂಬ, ಬಾಗಿಲುಗಳಿಗೆ ಕಟ್ಟುತ್ತಾರೆ. ಹಾಗೆಯೇ ಮನೆಗೆ ಬಂದು ಮನೆಯಲ್ಲಿಯೂ ಅಲ್ಲಲ್ಲಿ ನೆರೆಗಳನ್ನು ಕಟ್ಟುತ್ತಾರೆ. ಅಂದು ರಾತ್ರಿ ಹೊಸ ಅಕ್ಕಿಯ ಊಟವಾಗುತ್ತದೆ. ಮರುದಿವಸ ಸಾಯಂಕಾಲ ಕೊಡಗಿನ ವಿಶೇಷ ವೇಷವಾದ ಉದ್ದವಾದ ಕಪ್ಪ ನಿಲುವಂಗಿ ತೊಟ್ಟು ತಲೆಗೆ ಬಿಳಿಯ ಜರತಾರಿ ಪೇಟ ಧರಿಸಿ ನೃತ್ಯವಾಡುತ್ತಾರೆ. ಇದೇ ತೆರನಾದ ಮನರಂಜನೆ ಸುಮಾರು ಒಂದು ವಾರದವರೆಗೆ

ನಡೆದು ಕೊನೆಯ ದಿವಸ ಸಹಭೋಜನದೊಂದಿಗೆ ಹುತ್ತರಿಹಬ್ಬ ಮುಕ್ತಾಯವಾಗುತ್ತದೆ.

ಉತ್ತರ ಕರ್ನಾಟಕದ ಒಕ್ಕಲಿಗರಿಗೆ ಕಾರಹುಣ್ಣಿಮೆ, ಶೀಗಿ ಹುಣ್ಣಿಮೆ, ಎಳ್ಳ ಅಮಾವಾಸ್ಯೆಗಳು ವಿಶಿಷ್ಟ ಹಬ್ಬಗಳಾಗಿವೆ. ಕಾರಹುಣ್ಣಿಮೆ ವಿಶೇಷವಾಗಿ ಎತ್ತುಗಳ ಅಲಂಕಾರಕ್ಕೆ ಸೇರಿದ್ದು. ಹುಣ್ಣಿಮೆಯ ಹಿಂದಿನ ದಿನ ಕಡಬಕಿಚಡಿ ಎನ್ನಿಸಿಕೊಳ್ಳುತ್ತದೆ. ಹುಣ್ಣಿಮೆಯಂದು ಮನೆಯ ಬಾಗಿಲಿಗೆ, ಬಂಡಿಗಳಿಗೆ ಬಿತ್ತುವ ಸಡ್ಡೆಮುಂತಾಗಿ ಒಕ್ಕಲುತನದ ಅನೇಕ ಉಪಕರಣಗಳಿಗೆ ಹುರಮುಂಜು ಹಚ್ಚುತ್ತಾರೆ. ಅಂದು ಮುಂಜಾನೆ ಎತ್ತುಗಳ ಮೈತೊಳೆದು ಬಣ್ಣ ಬಣ್ಣದ 'ಗುಲ್ಲ'ಗಳನ್ನು ಎತ್ತುಗಳ ಮೈತುಂಬ ಹೊದೆಯುತ್ತಾರೆ. ಕೊಂಬುಗಳಿಗೆ ಬಣ್ಣ ಅಥವಾ ವಾರನೀಸು ಹಚ್ಚಿ ತುದಿಯಲ್ಲಿ ಗೊಂಡೆಕಟ್ಟಿ ಅಲಂಕರಿಸುತ್ತಾರೆ. ಕೊರಳಲ್ಲಿ ಗೆಜ್ಜೆಸರ ರಾರಾಜಿಸುತ್ತದೆ. ಎತ್ತು ಕಟ್ಟುವ ಹಗ್ಗಗಳೂ ಕೂಡ ಬಣ್ಣ ಬಣ್ಣಗಳಲ್ಲಿ ಅದ್ದಲ್ಪಟ್ಟಿರುತ್ತವೆ. ಎಮ್ಮೆ, ಕೋಣಗಳ ಕೋಡಿಗೂ ಅಂದು ಅಲಂಕಾರ – ಒಂದು ಕೋಡಿಗೆ ಸುಣ್ಣ, ಇನ್ನೊಂದು ಕೋಡಿಗೆ ಹುರಮಂಜ. ಅಂದು ಸಂಜೆ ಓಣಿ ಓಣಿಗಳಲ್ಲಿ ಎತ್ತು ಮೆರೆಸಲಾಗುತ್ತದೆ. ಮರು ದಿನದ್ದು ಕಾರಹುಣ್ಣಿಮೆಯ 'ಕರಿ'. ಅಗಸೆಯಲ್ಲಿ ತಳಿರು ತೋರಣ ಕಟ್ಟಿ ಬಿಳಿ ಮತ್ತು ಕೆಂಪು ಬಣ್ಣದ ಎರಡು ಬಲಿಷ್ಠ ಎತ್ತುಗಳನ್ನು ಓಡಿಸಲಾಗುತ್ತದೆ. ಕೆಂಪು ಎತ್ತು ಮುಂದು ಬಂದರೆ ಮುಂಗಾರಿ ಚೆನ್ನಾಗಿ ಬೆಳೆಯುವುದೆಂದೂ, ಬಿಳಿ ಎತ್ತು ಮುಂದೆ ಬಂದರೆ ಹಿಂಗಾರಿ ಚೆನ್ನಾಗಿ ಬೆಳೆಯುವುದೆಂದು ನಂಬಿಕೆ.

ಶೀಗಿಹುಣ್ಣಿಮೆ ಮತ್ತು ಎಳ್ಳು ಅಮಾವಾಸ್ಯೆಗಳಂದು ಭೂಮಿತಾಯಿಯನ್ನು ಪೂಜಿಸಲಾಗುತ್ತದೆ. ಶೀಗಿ ಹುಣ್ಣಿಮೆ ಮುಂಗಾರಿಬೆಳೆಗೆ ಸಂಬಂಧಪಟ್ಟರೆ ಎಳ್ಳ ಅಮಾವಾಸ್ಯೆ ಹಿಂಗಾರಿ ಬೆಳೆಗೆ. ಈ ಎರಡೂ ಹಬ್ಬಗಳಂದು ಮುಂಜಾನೆ ಸಜ್ಜೆರೊಟ್ಟಿ, ಪುಂಡಿಪಲ್ಯ, ಹುಗ್ಗಿ–ಹೋಳಿಗೆ ಮುಂತಾಗಿ ಅನೇಕ ವಿಧವಾದ ಅಡಿಗೆ ಪದಾರ್ಥಗಳನ್ನು ಮಾಡಿಕೊಂಡು ಸಿಂಗರಿಸಿದ ಬಂಡಿಯಲ್ಲಿ ಹೊಲಕ್ಕೆ ಬರುತ್ತಾರೆ. ಹೊಲದಲ್ಲಿ ಬನ್ನಿ ಗಿಡದಡಿಯಲ್ಲಿ ಪೂಜೆ ಮಾಡಿ ಭೂಮಿತಾಯಿಗೆ ನೈವೇದ್ಯವೆಂದು ಹೊಲದಲ್ಲಿ ಅಡ್ಡಾಡುತ್ತ 'ಚರಗ'ವನ್ನು ಚೆಲ್ಲಲಾಗುತ್ತದೆ.

ಮದುವೆ ಸಂಪ್ರದಾಯ :

ಮದುವೆ ನಮ್ಮ ಜನರ ತೀರ ಭಾವನಾ ಪ್ರಧಾನ ಅಂಶಗಳಲ್ಲೊಂದು. ಭವಿಷ್ಯದ ಬಾಳಿಗೆ ಗಂಡು–ಹೆಣ್ಣನ್ನು ಒಂದಾಗಿಸುವ ಈ ಸಂಪ್ರದಾಯದಲ್ಲಿ ನಮ್ಮ ಜಾನಪದರು ಹೆಜ್ಜೆ ಹೆಜ್ಜೆಗೂ ಪೂರ್ವಜರ ನಂಬಿಕೆಗಳನ್ನು ಆಶ್ರಯಿಸುತ್ತ ಜಾಗರೂಕತೆಯಿಂದ ಮುಂದುವರಿಯುತ್ತಾರೆ. ಕರ್ನಾಟಕದ ಮದುವೆ ಸಂಪ್ರದಾಯಗಳು ಕರಾವಳಿ, ಕೊಡಗು,

ಮಲೆನಾಡು, ಉತ್ತರ ಕರ್ನಾಟಕ ಮುಂತಾಗಿ ಪ್ರಾದೇಶಿಕವಾಗಿ ಭಿನ್ನರೂಪ ತಾಳುವಂತೆ ಆಯಾ ಪ್ರದೇಶಗಳಲ್ಲಿಯೇ ಮತ್ತು ಜಾತಿಮತಗಳನ್ನನುಸರಿಸಿ ಬೇರೆ ಬೇರೆ ಸಂಪ್ರದಾಯಗಳು ರೂಢಿಯಲ್ಲಿವೆ. ಉದಾಹರಣೆಗೆ ಉತ್ತರ ಕರ್ನಾಟಕದ ಪ್ರಮುಖ ಮತಗಳಲ್ಲೊಂದಾದ ಲಿಂಗವಂತರ ಹಾಗೂ ಮಲೆನಾಡಿನ ನಾಮಧಾರೀ ಒಕ್ಕಲಿಗರ ಮುದುವೆಗಳನ್ನಿಲ್ಲಿ ಪರಿಶೀಲಿಸಬಹುದು.

ಸಾಮಾನ್ಯವಾಗಿ ಉತ್ತರಕರ್ನಾಟಕದ ಮದುವೆಯ ಕಾರ್ಯಕಲಾಪಗಳು 'ಹೆಣ್ಣು ನೋಡು'ವುದರೊಂದಿಗೆ ಪ್ರಾರಂಭವಾಗುತ್ತವೆ. ಇಂಥ ಒಂದು ಕಡೆ ತಮ್ಮ ಕುಲ ಸಂಬಂಧಿ ಕನ್ಯೆ ಇದೆಯೆಂದು ಗೊತ್ತಾದ ಮೇಲೆ ನೋಡಿಕೊಂಡು ಬರಲು ಗಂಡಿನವರು ಮುಹೂರ್ತ ನೋಡಿ ಮೊದಲಿಗೆ ಹೋಗುತ್ತಾರೆ. ಕನ್ಯೆ ಮನಸ್ಸಿಗೆ ಬಂದರೆ ಹೆಣ್ಣಿನ ಕಡೆಯವರನ್ನು ಒಂದು ದಿನ ತಮ್ಮ ಮನೆತನವನ್ನು ನೋಡಲು ಅಹ್ವಾನಿಸುತ್ತಾರೆ. ಪರಸ್ಪರ ಎಲ್ಲ ಹೊಂದಾಣಿಕೆಯೆನಿಸಿದರೆ ಒಂದು ದಿವಸ ಮಾತುಕತೆಗೆ ಕೂಡ್ರುತ್ತಾರೆ. ಗಂಡಿನವರು ಹೆಣ್ಣಿನವರಿಗೆ ಕೊಡಬೇಕಾದುದು, ಹೆಣ್ಣಿನವರಿಗೆ ಗಂಡಿನವರಿಗೆ ಕೊಡಬೇಕಾದುದು ಗುರುಹಿರಿಯರ ಸಮಕ್ಷಮದಲ್ಲಿ ನಿಷ್ಕರ್ಷೆಯಾಗುತ್ತದೆ. ಮುಂದೆ ಯಾರು ಹೊಯ್ದಾಡಬಾರದೆಂದು ಕಾಗದವನ್ನೇ ಮಾಡಿಸಲಾಗುತ್ತದೆ. ಮುಂದೆ ಒಂದು ದಿನ ಮುಹೂರ್ತ ನೋಡಿಕೊಂಡು 'ನಿಶ್ಚಯ ದಿನ'ವನ್ನು ಗೊತ್ತುಮಾಡಿ ಬಷ್ಟಗಿ ಹಾಕಲಾಗುತ್ತದೆ. ಈ ಸಂದರ್ಭದಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಶಕ್ತಿಯಿದ್ದರೆ ಬೆರಳು ಉಂಗುರವೊಂದನ್ನು ತೊಡಿಸಿ ಒಂದು ಬೆಲೆಯುಳ್ಳ ಸೀರೆಯನ್ನು ಉಡಿಸಿ ಉಡಿತುಂಬಲಾಗುತ್ತದೆ.

ಮದುವೆ ದಿನ ಗೊತ್ತಾದ ಮೇಲೆ ಅದರ ಹಿಂದೆ ನಾಲ್ಕೈದು ದಿನ ಮುಂಚಿತವಾಗಿ ಒಳ್ಳೆಯ ದಿನದಂದು ವಧೂವರರಿಬ್ಬರ ಮನೆಯಲ್ಲಿಯೂ ಮದುವೆಯ ಪೂರ್ವಭಾವಿ ಸಿದ್ಧತೆಗಳು ಪ್ರಾರಂಭವಾಗುತ್ತವೆ. ಇವುಗಳಲ್ಲಿ ಮೊದಲನೆಯದು ಒಳಕಲ್ಲು ಪೂಜೆ. ಅಂದು ಒರಳು, ಬೀಸುಕಲ್ಲು ಮುಂತಾಗಿ ಗೃಹೋಪಯೋಗಿ ಮುಖ್ಯವಸ್ತುಗಳಿಗೆ ಪೂಜೆಯಾಗುತ್ತದೆ. ಅಂದೇ ತಲೆಬಾಗಿಲ ಬಲಮಗ್ಗಲು, ಹಾಲುಗಂಬವನ್ನು ನಡೆಸಲಾಗುತ್ತದೆ. ಸಾಮಾನ್ಯವಾಗಿ 'ದೈವದೂಟ'ವನ್ನು ಮದುವೆಯ ಹಿಂದಿನ ದಿನ ಇಟ್ಟುಕೊಳ್ಳವುದುಂಟು. ಹಿಂದಿನ ಕಾಲಕ್ಕೆ ಹಂದರಕ್ಕೆ ಎಂಟು ಹತ್ತು ಬಂಡಿಗಳಲ್ಲಿ ಹಂದರ ತಪ್ಪಲು ತರುವುದಿತ್ತು. (ಈಗ ಕಾಂಟ್ರ್ಯಾಕ್ಟ್ ಕೊಟ್ಟು ಹಂದರ ಹಾಕಿಸುತ್ತಾರೆ.)

ಮದುವೆಗೆ ಮುಂಚಿತವಾಗಿ ಬಂದ ಬೀಗರನ್ನು ಕಳಸದೊಂದಿಗೆ ಹೋಗಿ ಎದುರುಗೊಂಡು ಅವರನ್ನು ಉಪಚರಿಸಿ ಒಂದು ಕಡೆ 'ನಿಬ್ಬಣ ಮನೆ'ಯಲ್ಲಿ ಇಳಿಸಲಾಗುತ್ತದೆ. ಅಕ್ಷತಾರೋಪಣಕ್ಕೆ ಮೊದಲು ವಧುವರರಿಗೆ ಸಂಬಂಧಿಸಿದಂತೆ

ನಡೆಯುವ ಎರಡು ಮುಖ್ಯ ಕಾರ್ಯಕ್ರಮಗಳೆಂದರೆ ಅರಿಶಿಣ ಹಚ್ಚುವುದು ಮತ್ತು ನೀರು ಹಾಕುವುದು. ವರನ ಸೋದರಿ ಮೊದಲು ಅರಿಶಿಣ ಹಚ್ಚಿ ಶಾಸ್ತ್ರ ಮಾಡಿದ ತರುವಾಯ ಮತ್ತೆ ಕೆಲವು ಮುತ್ತೈದೆಯರು ಅರಿಶಿಣ ಹಚ್ಚುತ್ತಾರೆ. ಮನೆಯಂಗಳದಲ್ಲಿ ಈ ಹೊತ್ತಿಗೆ ಸುರಿಗೆ ಸಿದ್ಧವಾಗಿರುತ್ತದೆ. ನಾಲ್ಕು ಮೂಲೆಗೆ ನಾಲ್ಕು ತಂಬಿಗೆಗಳನ್ನಿಟ್ಟು ವಧುವರರು ಮುಖಮಾಡಿ ನಿಲ್ಲುವ ಕಡೆಗೆ ಕಳಸವನ್ನಿಟ್ಟು ಇವು ಐದೂ ಒಳಗೊಳ್ಳುವಂತೆ ದಾರದಿಂದ 'ಸುರಗಿ' ಸುತ್ತಲಾಗುವುದು. ಅರಿಶಿಣ ಹಚ್ಚಿಕೊಂಡು ಬಂದು ವಧೂವರರು ಸುರಗಿಗೆ ಐದು ಸುತ್ತು ಹಾಕಿ ಬಲಗಾಲ ಮುಂದಿಟ್ಟು ಸುರಗಿ ಪ್ರವೇಶಿಸಿ ಮಧ್ಯದ ಮಣೆಯ ಮೇಲೆ ಕುಳಿತುಕೊಳ್ಳುತ್ತಾರೆ. ಮುತ್ತೈದೆಯರು ನೀರು ಹಾಕುತ್ತಾರೆ. ನೀರಾದ ಮೇಲೆ ಮನೆಯಲ್ಲಿ ದೇವರ ಕೋಣೆಯಲ್ಲಿ ಕುಲಗುರುವಿನ ಸಮಕ್ಷಮದಲ್ಲಿ ವರ, ವಧುವಿಗೆ ಮಾಂಗಲ್ಯಧಾರಣ ಮಾಡುತ್ತಾನೆ. ಇದೇ ಸಮಯದಲ್ಲಿ ಇಬ್ಬರಿಗೂ ತಲೆಗೆ ಬಾಸಿಂಗ ಕೈಗೆ ಕಂಕಣ ತೊಡಿಸಲಾಗುತ್ತದೆ. ವಧು ಕಾಲಲ್ಲಿ ಕಾಲುಂಗರ ಹಾಕಿಕೊಳ್ಳುತ್ತಾಳೆ. ಈ ದೇವರ ಕೋಣೆಯಲ್ಲಿಯೂ ಅಕ್ಷತಾರೋಪಣವಾಗುತ್ತದೆ. ದೈವದ ಅಕ್ಕಿಕಾಳು ಹಂದರದಲ್ಲಿ ಬೀಳುತ್ತದೆ. ತರುವಾಯ ಮುತ್ತೈದೆಯರಿಂದ ವಧುವರರಿಗೆ ಆರತಿ, ಬಂಧು ಬಳಗದವರಿಂದ ಮುಯ್ಯಿ ನಡೆದು ತರುವಾಯ ಊಟೋಪಚಾರ ಸಾಂಗವಾಗಿ ನೆರವೇರುತ್ತದೆ. ಕೆಲವರು ರಾತ್ರಿ ಮೆರವಣಿಗೆಯನ್ನಿಟ್ಟುಕೊಳ್ಳುವುದುಂಟು. ಮೆರವಣಿಗೆ ಮುಗಿದ ತರುವಾಯವೇ ಬೀಗರು ತಮ್ಮ ಊರಿಗೆ ಹಿಂದಿರುಗುತ್ತಾರೆ.

ಮಲೆನಾಡಿನ ನಾಮಧಾರೀ ಒಕ್ಕಲಿಗರ ಮದುವೆಯ[೧೮] ಪೂರ್ವಭಾವೀ ಸಿದ್ಧತೆಗಳು ಹೆಚ್ಚು ಕಡಿಮೆ ಉತ್ತರಕರ್ನಾಟಕದ ಸಂಪ್ರದಾಯವನ್ನೇ ಹೋಲುತ್ತವೆ. ನಾಮಧಾರೀ ಒಕ್ಕಲಿಗರ ಮದುವೆಯ ವಿಶೇಷತೆಯೆಂದರೆ ಧಾರೆಯ ಕಾರ್ಯಕ್ರಮ ತುಳಸಿಯ ಸಮಕ್ಷಮದಲ್ಲಿ ನಡೆಯುವುದು. ಧಾರೆ ಮುಹೂರ್ತದ ವೇಳೆಗೆ ಮದುವಣಿಗ 'ಸಭಾ' (ಬೀಗರನ್ನು ಇಳಿಸಿದ್ದ ತಾಣ)ದಿಂದೆದ್ದು ವಧುಗೃಹದ ತುಳಸಿಯನ್ನು ಬಲಗೊಂಡು ನಿಲ್ಲುತ್ತಾನೆ. ವಧುವನ್ನು ಅವಳ ಸೋದರಮಾವ ಹೊತ್ತು ತುಳಸಿಗೆ ಮೂರು ಸುತ್ತು ಪ್ರದಕ್ಷಿಣೆ ಹಾಕಿಸಿ ವರನ ಬಳಿ ನಿಲ್ಲಿಸುವನು. ಮುಹೂರ್ತಕ್ಕೆ ಸರಿಯಾಗಿ ವಧುವರರ ಕೈಗೆ ಪುರೋಹಿತರು ಅಕ್ಷತೆಕೊಟ್ಟು ಎರಚಲು ಹೇಳುತ್ತಾರೆ. ಪರಸ್ಪರ ಹೂಮಾಲೆಗಳ ವಿತರಣೆಯಾಗುತ್ತದೆ. ಧಾರೆ ಮುಗಿದ ಮೇಲೆ ಪುರೋಹಿತರು ದಂಪತಿಗಳಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾರೆ. ಅಂದು ಬೆಳಗಾಗುವವರೆಗೂ ದಂಪತಿಗಳನ್ನು ಹಸೆಯ ಮೇಲೆ ಕೂಡ್ರಿಸಿ ಹಾಡುಗಳನ್ನು ಹಾಡುವರು.

ಮರುದಿವಸ ಸೂರ್ಯೋದಯದ ಹೊತ್ತಿಗೆ 'ಮುಖಮಜ್ಜನ ಶಾಸ್ತ್ರ'. ಬಾಸಿಂಗ ಕಟ್ಟಿ ಉಡುಗೊರೆಗೆ ಕೂರಿಸಲಾಗುತ್ತದೆ. ಬಂಧು ಬಾಂಧವರು ಕಾಣಿಕೆ ಸಮರ್ಪಿಸುತ್ತಾರೆ. ತರುವಾಯ ವಧುವರರ ಗುಂಪಿನವರು ಪರಸ್ಪರ ಬಿನ್ನಹ ಸಲ್ಲಿಸಿ ('ಮಾತು ಮಾಡಿಸುವ ಕಾರ್ಯ') ಹೆಣ್ಣನ್ನು ಗಂಡಿಗೆ ಒಪ್ಪಿಸಿ ಕೊಡಲಾಗುವುದು. ವಧುವರರು ವರನ ಊರಿಗೆ

೧೮. ಹೆಚ್ಚಿನ ವಿಷಯಕ್ಕೆ ಶ್ರೀ ಅಂಬಳಿಕೆ ಹಿರಿಯಣ್ಣ ಅವರ ಮಲೆನಾಡ ಜನಪದ ಸಂಪ್ರದಾಯಗಳು ಎಂಬ ಗ್ರಂಥವನ್ನು ನೋಡಿ.

ಬಂದ ಮೇಲೆ ಮತ್ತೆ ಅನೇಕ ಶಾಸ್ತ್ರಗಳು ನಡೆಯುವುದುಂಟು.'

ಸಂಸ್ಕಾರಗಳು :

ಮನುಷ್ಯನ ಬದುಕಿನಲ್ಲಿ ನಡೆಯುವ ಪ್ರಕೃತಿ ಸಹಜ ಘಟನೆಗಳಿಗೂ ಜಾನಪದರು ಸಂಪ್ರದಾಯದ ಕವಚ ತೊಡಿಸುವುದು ಕೌತುಕಪೂರ್ಣ ವಿಷಯ. ನಾಗರಿಕ ಲೋಕಕ್ಕೆ ಪ್ರಕೃತಿ ಸಹಜ ಎನ್ನುವ ಅಂತರಾಳದಲ್ಲಿಯೇ ಜನಪದರು ದೈವದ ಕೋಪಾನುಗ್ರಹಗಳನ್ನೂ, ಭೂತಚೇಷ್ಟೆಗಳನ್ನೂ ಕಂಡು ಸಂದರ್ಭಾನುಸಾರವಾಗಿ ಅನೇಕ ನಂಬಿಕೆ, ಆಚರಣೆಗಳನ್ನಾಚರಿಸಿಕೊಂಡು ಸಂಸ್ಕಾರಗಳನ್ನು ರೂಢಿಸಿಕೊಂಡಿದ್ದಾರೆ. ಮನುಷ್ಯ ಬದುಕಿನಲ್ಲಿ ಹುಟ್ಟು, ಸಾವುಗಳೆರಡೂ ಪ್ರಬಲವಾದ ಅಂಶಗಳು. ಮನುಷ್ಯ ಬದುಕಿನ ಆದ್ಯಂತಗಳೇ ಇವಾಗಿರುವುದರಿಂದ ಈ ಸಂದರ್ಭದಲ್ಲಿನ ಜಾನಪದ ಸಂಸ್ಕಾರಗಳು ಸಂಪ್ರದಾಯದ ಗಟ್ಟಿ ಎಳೆಗಳಾಗಿವೆ. ಇಲ್ಲಿ ಕರ್ಮಾಚರಣೆಗಳಲ್ಲಿಯೂ ಕೂಡ ಪ್ರಾದೇಶಿಕ ಭಿನ್ನಾಂಶಗಳನ್ನು ಕಾಣಬಹುದು.

ಹುಟ್ಟು :

ತಾಯಿ ಗರ್ಭದಿಂದ ಕೂಸು ಹುಟ್ಟಿದ ಕ್ಷಣದಿಂದ ಮನೆಗೆ ಸೂತಕ ಅವರಿಸುತ್ತದೆ. ಈ ಸೂತಕ ಕಳೆದುಕೊಳ್ಳಲು ಮಾಡುವ ಕಾರ್ಯಾಚರಣೆಗಳೇ ಸಂಸ್ಕಾರದ ವಿಧಾನಗಳು. ಈ ಸೂತಕ ಮಂಡ್ಯ ಜಿಲ್ಲೆಯಲ್ಲಿ ಕೂಸು ಹುಟ್ಟಿದ ೧೧ನೇ ದಿನಕ್ಕೆ, ಮಲೆನಾಡಿನಲ್ಲಿ ೯ನೇ ದಿನಕ್ಕೆ, ಉತ್ತರ ಕರ್ನಾಟಕದಲ್ಲಿ ೫ನೇ ದಿನಕ್ಕೆ ಕಳೆಯುತ್ತದೆ. ಉತ್ತರ ಕರ್ನಾಟಕದಲ್ಲಿ ಮಾಡುವ 'ಐದೆಸೆ' ಮತ್ತು 'ಹದಿ' ಮೂರು ದೆಸೆಗಳು ವಿಶಿಷ್ಟ ಆಚರಣೆಗಳನ್ನೊಳಗೊಂಡಿವೆ. ಮಗು ಹುಟ್ಟಿದ ಐದನೆಯ ದಿವಸಕ್ಕೆ ಮನೆಸಾರಿಸಿ ಮಡಿಮಾಡಲಾಗುವುದು. ತಾಯಿಗೆ ಇಂದು ಹಸಿರು ಬಳೆಯನ್ನು ತೊಡಿಸಲಾಗುತ್ತದೆ. ಕೆಲವರು ಕೂಸಿನ ಹೊಟ್ಟೆಯ ಮೇಲೆ ಕ್ಯಾರ ಹಾಕುತ್ತಾರೆ. ಇಂದೇ ಕೂಸಿಗೆ ಲಿಂಗಕಟ್ಟಿ ಧಾರ್ಮಿಕ ಸಂಸ್ಕಾರವನ್ನು ನೆರವೇರಿಸಲಾಗುವುದು. ಇದನ್ನು ಲಿಂಗಾಯಿತರು, ರೆಡ್ಡಿ ಜನಾಂಗ, ಕುರುಬ ಜನಾಂಗದ ಕೆಲವರು ಮಾತ್ರ ಆಚರಿಸುತ್ತಾರೆ. ಗಂಡು ಕೂಸಿಗೆ ಉಡದಾರ ಕಟ್ಟಲಾಗುತ್ತದೆ. ಗುಂಡುಕಲ್ಲು ಒಂದಕ್ಕೆ ಪೂಜೆ ಮಾಡಿ ಅದನ್ನೇ ಶೆಟಿಗೆವ್ವನೆಂದು ಹೆಸರಿಸಲಾಗುತ್ತದೆ. ಇವಳೇ ಕೂಸಿನ ಹಣೆಬರಹ ಬರೆಯುತ್ತಾಳೆ ಎನ್ನುವುದೂ ಒಂದು ನಂಬಿಕೆ.

೧೩ನೆಯ ದಿನ ಕೂಸಿಗೆ ಹೊಸಬಟ್ಟೆ ತೊಡಿಸಿ ತೊಟ್ಟಿಲಕ್ಕೆ ಮಗುವನ್ನು

ಹಾಕುತ್ತಾರೆ. ಇದೇ ಸಮಯದಲ್ಲಿ ಸೋದರತ್ತೆ ಮಗುವಿನ ನಾಮಕರಣ ಮಾಡುತ್ತಾಳೆ. ಜನ್ಮನಾಮವನ್ನು ಮೊದಲು ಉಚ್ಚರಿಸಿ ತರುವಾಯ ಬೇರೆ ಬೇರೆ ನಾಲ್ಕು ಹೆಸರುಗಳನ್ನು ಗಟ್ಟಿಯಾಗಿ ಹೇಳುತ್ತ ಮಗುವಿನ ಕಿವಿಯಲ್ಲಿ ಕುರ್ರ್ ಅನ್ನುತ್ತಾಳೆ. ಈ ಸಮಯದಲ್ಲಿ ಉಳಿದ ಹೆಣ್ಣುಮಕ್ಕಳು ಅವಳ ಬೆನ್ನ ಮೇಲೆ ಮೆತ್ತಗೆ ಹೊಡೆಯುವುದು ಪದ್ಧತಿ. ನಾಮಕರಣದ ಸಮಯದಲ್ಲಿ ನೆರೆದವರಿಗೆಲ್ಲ ಗುಗ್ಗರಿ (ಕುದಿಸಿದ ಬೇರೆ ಬೇರೆ ಕಾಳು) ಯನ್ನು ಹಂಚುವುದುಂಟು.

ಮರಣ :

ಸಾವಿನೊಂದಿಗೆ ಬಂದಿರುವ ಸಂಸ್ಕಾರಗಳ ಆಚರಣೆಗಳೊಂದಿಗೆ ಬಹುಶಃ ಎರಡು ಕಾರಣಗಳಿರಬೇಕು. ಒಂದು ಕಳ್ಳು ಬಳ್ಳಿಯ ಸಂಬಂಧವನ್ನು ಬೆಸೆದುಕೊಂಡು ಇದುವರೆಗೆ ತಮ್ಮೊಂದಿಗಿದ್ದು ಈಗ ತಮ್ಮಿಂದ ಅಗಲಿದ ಜೀವದ ನೆನಪು ಕೆಲವು ದಿನಗಳಾದರೂ ಉಳಿಯಬೇಕು. ಎರಡನೆಯದು ಸತ್ತವ್ಯಕ್ತಿ ಭೂತವಾಗಿ ತಮ್ಮನ್ನು ಕಾಡಬಾರದು. ವ್ಯಕ್ತಿ ತೀರಿಕೊಂಡ ಕೂಡಲೇ ಮೈದೊಳೆದು ಪಡಸಾಲೆಯಲ್ಲಿ ಗೋಡೆಗೆ ಆನಿಸಿ ಕೂಡ್ರಿಸುತ್ತಾರೆ. ಬಂಧುಬಳಗವೆಲ್ಲವೂ ಕೂಡಿದ ಮೇಲೆ ಚಟ್ಟ ಅಥವಾ ವಿಮಾನದಲ್ಲಿ ಶವವನ್ನು ಮೆರವಣಿಗೆ ಮುಖಾಂತರ ಸ್ಮಶಾನಕ್ಕೆ ಹೊರಡಿಸುತ್ತಾರೆ. ಹಿರಿಯಮಗನು ಶವದ ಮುಂದೆ ಬೆಂಕಿ ತುಂಬಿದ ಗಡಿಗೆಯನ್ನು ಹಿಡಿದು ಹೋಗುತ್ತಾನೆ. ಮೆರವಣಿಗೆಯ ತೀರ ಮುಂಭಾಗದಲ್ಲಿ ಊದುವವರು ಬಾರಿಸುವವರು ಇರುತ್ತಾರೆ. ಉತ್ತರ ಕರ್ನಾಟಕದಲ್ಲಿ ಕೆಲವರು ಮದ್ದು ಹಾರಿಸುವುದುಂಟು. ಮಂಡ್ಯ ಜಿಲ್ಲೆಯಲ್ಲಿ ಶವದ ಮೆರವಣಿಗೆ ಸಾಗಿದಂತೆ ಚಿಲ್ಲರೆ ನಾಣ್ಯಗಳನ್ನು ಶವದ ಮೇಲೆ ತೂರುವುದುಂಟು.

ಶವ ಸಂಸ್ಕಾರ ಎರಡು ಬಗೆಯದಾಗಿರುತ್ತದೆ. ಸುಡುವುದು ಬಂದು ಬಗೆಯಾದರೆ ಹೂಳುವುದು ಇನ್ನೊಂದು ಬಗೆ. ಲಿಂಗಾಯತರು, ರೆಡ್ಡಿಗಳು ಹೂಳುತ್ತಾರೆ. ಕುರುಬರಲ್ಲಿ ಎರಡೂ ರೀತಿ ರೂಢಿಯಲ್ಲಿದೆ.

ಸುಡುವುದು :

ಶವವು ಕಟ್ಟಿಗೆಯಿರಿಸಿದ ಸ್ಮಶಾನ ಸ್ಥಾನಕ್ಕೆ ಬಂದ ಕೂಡಲೇ ಕಟ್ಟಿಗೆಯ ಮೇಲೆ ಅದನ್ನು ಇರಿಸಲಾಗುವುದು. ಬೆಂಕಿ ತಗುಲಿಸುವ ಮುನ್ನ ಶವವನ್ನು ಪೂರ್ಣ

ಬೆತ್ತಲೆಗೊಳಿಸಿ ಮರ್ಮಾಂಗ ಕಾಣದಂತೆ ಅವರಿತಪ್ಪಲು ಮುಚ್ಚುತ್ತಾರೆ. ಬೆಂಕಿಯನ್ನು ಹಿಡಿದು ತಂದವನು ನೀರು ತುಂಬಿದ ಮಡಿಕೆಯನ್ನು ಹೊತ್ತು ಶವವನ್ನು ಮೂರು ಸುತ್ತು ಹಾಕಬೇಕು. ಪ್ರತಿ ಸುತ್ತಿಗೆ ಹಿಂದೆ ಒಬ್ಬರು ಮಡಿಕೆಗೆ ಕಲ್ಲಿನಿಂದ ತೂತು ಮಾಡುತ್ತಾ ನೀರನ್ನು ಬೀಳಿಸುವುದುಂಟು. ಮೂರು ಸುತ್ತು ಮುಗಿದ ಮೇಲೆ ಅವನು ಹಿಂತಿರುಗಿ ನೋಡದೆಯೇ ಮನೆಯ ಕಡೆಗೆ ಹೋಗಿಬಿಡಬೇಕು. ಉಳಿದವರು ಚಿತೆ ಹೊತ್ತಿಸಿ ಹಳ್ಳ, ಬಾವಿದಂಡೆಗಳಲ್ಲಿ ಸ್ನಾನಮಾಡಿ ತೀರಿಕೊಂಡವನ ಮನೆಯೆದುರು ಸೇರುತ್ತಾರೆ. ಹಿರಿಯ ಮಗ ತಲೆಬಾಗಿಲಲ್ಲೆ ನಿಂತಿರುವಂತೆ ದೈವದವರು ಅವನಿಗೆ ಎರಡು ಬುದ್ಧಿಮಾತು ಹೇಳಿ ಹೊರಟು ಹೋಗುತ್ತಾರೆ.

ಹೂಳುವುದು :

ವ್ಯಕ್ತಿ ತೀರಿಕೊಂಡಮೇಲೆ ಕೆಲವರು ಸ್ಮಶಾನಕ್ಕೆ ಹೋಗಿ ಗೋರಿ ತೋಡುತ್ತಾರೆ. ಈ ಗೋರಿ ಸುಮಾರು ಆಳೆತ್ತರ ಇರುತ್ತದೆ. ಹುಗಿಯುವುದಕ್ಕಿಂತ ಮೊದಲು ಹೆಣಕ್ಕೆ ಪೂಜೆಯಾಗುತ್ತದೆ. ಬಾಯಲ್ಲಿ ಚೂರು ಬಂಗಾರವನ್ನು ಹಾಕಲಾಗುತ್ತದೆ. ದಫನ ಮಾಡಿದ ಮೇಲೆ ಗೋರಿಯ ಮೇಲೆ ಒಂದು ಕಲ್ಲನ್ನಿರಿಸಿ ಅದರ ಮೇಲೆ ಕುಲಗುರುವನ್ನು ನಿಲ್ಲಿಸಿ ಪಾದಪೂಜೆ ಮಾಡಲಾಗುತ್ತದೆ. ತರುವಾಯ ಎಲ್ಲರೂ ಸ್ನಾನಕ್ಕೆ ತೆರಳುತ್ತಾರೆ.

ಮೂರನೆಯ ದಿನ, 'ಹಕ್ಕಿಗೆ ಹಾಕುವ ದಿನ'. ಅಂದು ಮುಂಜಾನೆ ತೀರಿ ಕೊಂಡವನ ಇಷ್ಟ ಪದಾರ್ಥಗಳನ್ನು ಮಾಡಿಕೊಂಡು ಗೋರಿಯ ಸುತ್ತ ಅಥವಾ ಬೂದಿಯ ಸುತ್ತ ಆಲದೆಲೆಗಳಲ್ಲಿ ಇಡುವುದುಂಟು, ಸತ್ತವನಿಗೆ ಯಾವ ಆಸೆಗಳೂ ಇರದಿದ್ದರೆ ಕಾಗೆ ಬೇಗ ಬಂದು ಅನ್ನವನ್ನು ಕಚ್ಚುತ್ತದಂತೆ. ಕಾಗೆ ಒಂದು ವೇಳೆ ಅನ್ನ ಕಚ್ಚದಿದ್ದರೆ ಒಂದು ಆಕಳನ್ನು ತಂದು ತಿನ್ನಿಸುವ ಶಾಸ್ತ್ರ ಮಾಡಲಾಗುತ್ತದೆ. ಸ್ಮಶಾನದಿಂದ ಹಿಂತಿರುಗಿ ಬಂದಮೇಲೆ ಸ್ವಾಮಿಗಳಿಂದ ಪೂಜೆ ಮಾಡಿಸಿ ಮನೆಯನ್ನು ಪವಿತ್ರಗೊಳಿಸಲಾಗುತ್ತದೆ. ಅಂದು ಮನೆಯಲ್ಲಿ ಸಿಹಿ ಅಡಿಗೆಯನ್ನು ಮಾಡಲಾಗುತ್ತದೆ. ಶವದ ಮುಂದೆ ಗಡಿಗೆ ಹಿಡಿದವ ಇಂದು ತಲೆ ಬೋಳಿಸಿಕೊಳ್ಳುತ್ತಾನೆ. ಅವನ ಸೋದರ ಮಾವ ಹೊಸಬಟ್ಟೆ ಉಡಿಸುತ್ತಾನೆ. ಗಂಡ ತೀರಿಕೊಂಡಿದ್ದರೆ ಹೆಣ್ಣು ಮಗಳು ವಿಧವೆಯಾಗುತ್ತಾಳೆ. ಅವಳ ಮಾಂಗಲ್ಯ, ಮೂಗುತಿ, ಓಲೆಗಳನ್ನು ಕಳಚಲಾಗುತ್ತದೆ.

ವ್ಯಕ್ತಿ ತೀರಿಕೊಂಡ ತಿಂಗಳೊಳಗಾಗಿ ಇನ್ನೊಂದು ತಿಥಿ ಮಾಡಿ 'ದೈವದಲ್ಲಿ ತೆಗೆದುಕೊಳ್ಳುವ ಶಾಸ್ತ್ರ' ನೆರವೇರಿಸುವುದುಂಟು.

ಭೌತಿಕ ಸಂಪ್ರದಾಯಗಳು :

ವ್ಯವಸಾಯ :

ಒಕ್ಕಲುತನ ಕರ್ನಾಟಕ ಜನಜೀವನದ ಮುಖ್ಯ ವೃತ್ತಿ. ಉಳುವುದು, ಬಿತ್ತುವುದು, ನಾಟಿ ಮಾಡುವುದು ಮುಂತಾದ ಬೇಸಾಯ ಕ್ರಮದಲ್ಲಿಯೂ ರೂಢಿಗಳ ಪದ್ಧತಿಗಳಿವೆ. ಬೇಸಾಯ, ಬೇಟೆ ಮುಂತಾದವುಗಳು ಕ್ರಿಯಾ ಪ್ರಧಾನವೆಂದರೂ ಅಲ್ಲಲ್ಲಿ ಭಾವುಕ ಅಂಶಗಳೂ ಸೇರಿಕೊಳ್ಳುವುದುಂಟು. ಭೌಗೋಳಿಕ ಪರಿಸರಕ್ಕನುಗುಣವಾಗಿ ಕರ್ನಾಟಕದ ವ್ಯವಸಾಯ ಕ್ರಮ ಬೇರೆ ಬೇರೆ ವಿಧಾನಗಳನ್ನು ಅನುಸರಿಸಿದೆ. ಮಳೆ ಕಡಿಮೆಯಿರುವ ಉತ್ತರ ಕರ್ನಾಟಕ ವ್ಯವಸಾಯ ಬೇರೆ, ಅತಿಮಳೆ ಸುರಿಯುವ ಮಲೆನಾಡಿನ ವ್ಯವಸಾಯ ಕ್ರಮ ಬೇರೆ. ಈ ಎರಡು ಪ್ರದೇಶಗಳ ವ್ಯವಸಾಯ ಪದ್ಧತಿಯನ್ನು ನೋಡಿದರೆ ಬಹುಶಃ ಕರ್ನಾಟಕ ಒಕ್ಕಲುತನದ ಒಟ್ಟು ಚಿತ್ರ ಕಲ್ಪನೆಗೆ ಬರಬಹುದು.

ಉತ್ತರ ಕರ್ನಾಟಕದಲ್ಲಿ ಏಪ್ರಿಲ್, ಮೇ ತಿಂಗಳುಗಳಲ್ಲಿ ಭೂಮಿಗೆ ಗೊಬ್ಬರ ಚೆಲ್ಲಲಾಗುವುದು. ಮೇ ತಿಂಗಳಲ್ಲಿ ಒಂದು ಮಳೆಯಾದ ಕೂಡಲೆ ರೆಂಟೆ, ಕುಂಟೆ ಹೊಡೆದು ಭೂಮಿಯನ್ನು ಹದಮಾಡಲಾಗುವುದು. ವಾರ ಮುಗಿಸದೇ ಯಾರೂ ಬಿತ್ತನೆಯನ್ನು ಮಾಡುವಂತಿಲ್ಲ. ವಾರ ಹಿಡಿಯುವುದೆಂದರೆ ಮಂಗಳವಾರ ಅಥವಾ ಶುಕ್ರವಾರ ಆರಿಸಿಕೊಂಡು ಐದು ವಾರ ಮನೆಯಲ್ಲಿ ರೊಟ್ಟಿ ಮಾಡದೇ ಕೇವಲ ಕುದಿಸಿದ ಪದಾರ್ಥಗಳ ಅಡಿಗೆ ಮಾಡಿ ಊರಿನ ಅಥವಾ ಓಣಿಯ ಎಲ್ಲ ದೇವರುಗಳಿಗೂ ಪ್ರತಿ ವಾರ ನೀರು ಹಾಕಿ ಮೂಜೆ ಸಲ್ಲಿಸುವುದು. ಪ್ರತಿ ವಾರವೂ ಎತ್ತುಗಳು ಯಾವ ಕೆಲಸ ಮಾಡುವಂತಿಲ್ಲ. ಅಂದು ಪೂರ್ಣ ವಿಶ್ರಾಂತಿ ಅವಕ್ಕೆ. ಕೊನೆಯ ವಾರದಂದುಸಿಹಿ ಅಡಿಗೆ ಮಾಡಿ ಕೆಲವರು ದೇವಾಲಯದೆದುರು ಸಾಮೂಹಿಕ ಊಟ ನಡೆಸುವುದುಂಟು. ಬಿತ್ತುವುದಕ್ಕಿಂತ ಮೊದಲು ಮನೆಯ ಕಟ್ಟೆಯ ಮೇಲೆ ಕುಬಸದ ಕಣ ಹೊದಿಸಿ ಕೂರಿಗೆಯನ್ನು ಸಿಂಗರಿಸಿ ಪೂಜಿಸಲಾಗುತ್ತದೆ. ಅಂದು ಮತ್ತೆ ಹೊಲದಲ್ಲಿ ಬಿತ್ತುವುದಕ್ಕೆ ಮೊದಲು 'ಸಡ್ಡಿ' ಪೂಜೆಯಾಗುತ್ತದೆ. ಯಾವ ಕಾಳನ್ನೇ ಹೊದಲ್ಲಿ ಬಿತ್ತುವುದಿದ್ದರೂ ಮೊದಲು ಐದ್ಹತ್ತು ಮಾರು ಪುಂಡಿಬೀಜ ಬಿಡುವುದು ರೂಢಿ. ಹತ್ತಿಯನ್ನು ಬುಧವಾರ ಅಥವಾ ಶನಿವಾರ ಬಿತ್ತಬೇಕು. ಹತ್ತಿಮುಂದು ಜೋಳ ಬಿತ್ತುವವರು ಭೂಮಿಯಲ್ಲಿ

ತುಣುಕು ಬಂಗಾರ ಒಗೆಯಬೇಕು. ಜೋಳ ಬಿತ್ತಲು ಹೊರಟಾಗ ಕಾಡಿಗೆಗಣ್ಣಿನವರು ಎದುರು ಬರಬಾರದು. ಬಿತ್ತಲು ಹೊರಟ ಎತ್ತು ಬಿತ್ತದೇ ಮನೆಗೆ ತಪ್ಪಿಸಿಕೊಂಡು ಹಿಂದಿರುಗಬಾರದು. ಇವು ಕೆಲವು ಈ ಸಂದರ್ಭದಲ್ಲಿನ ನಂಬಿಕೆಗಳು. ಬಿತ್ತಿದ ಮೇಲೆ ಪೈರು ಮೊಳಕಾಲೆತ್ತರ ಬಂದಮೇಲೆ ಒಂದು ಮೈಎರಡು ಮೈ ಎಡೆಹೊಡೆದು ಕೊಳೆ, ಕಸ ತೆಗೆಯುವುದುಂಟು. ಪೈರು ಹೊಡೆ ಹಾಕಿದಾಗ ಹಕ್ಕಿಗಳ ಕಾಟ ತಡೆಯಲು ಹೊಲದಲ್ಲಿ 'ಅಂಟ' ಹಾಕಲಾಗುತ್ತದೆ.

ಜೋಳದಂಥ ಪ್ರಮುಖ ಧಾನ್ಯದ ಒಕ್ಕಲು ಇಲ್ಲಿ ಮುಖ್ಯ. ಜೋಳ ಕಿತ್ತ ಮೇಲೆ ಮುತ್ತೈದೆಯರಿಗೆ ಮಾಡದೇ ತೆನೆ ಮುರಿಯುವಂತಿಲ್ಲ. ಕಣದಲ್ಲಿ ತೆನೆ ಬಿದ್ದ ಮೇಲೆ ಇಲ್ಲಿಯ ಒಕ್ಕಲಿಗರ ಸಡಗರ ಹೇಳತೀರದು. ಮೇಟಿ ಹುಗಿದು ಕಣ ಮಾಡಿ ತೆನೆಯನ್ನು ಬೆಲ್ಲಿದ ಮೇಲೆ ಒಂದು ದಿನ ನೆರೆಹೊರೆಯವರ ಎತ್ತುಗಳನ್ನು ಸಹಾಯಕ್ಕೆ ತಂದು ಮೇಟಿ ಸುತ್ತ ಹಂತಿ ತಿರುಗಿಸಲಾಗುವುದು. ಬೆಳಗು ಹರಿಯುವವರೆಗೆ ತೆನೆ ನುರಿಯುತ್ತದೆ. ಮರುದಿವಸ ತೆನೆಯಿಂದ ಬೇರ್ಪಟ್ಟ ಕಾಳನ್ನು ತೂರಿ ಸ್ವಚ್ಛಗೊಳಿಸಿ ಸಂಜೆಗೆ ರಾಶಿ ಬಾನಮಾಡಿ ಹಂತಿಗೆ ಬಂದು ಸಹಕರಿಸಿದವರನ್ನು, ಬಂಧು ಬಾಂಧವರನ್ನು ಕರೆಯಿಸಿ ಊಟ ಮಾಡಿಸುವುದುಂಟು. ಆ ಮರು ದಿವಸ ಬೋಲೋರಿ ಹಾಡು ಹಾಡುತ್ತಾ ಚಕ್ಕಡಿಗಳಲ್ಲಿ ಉಮೇದಿನಿಂದ ರಾಶಿಯನ್ನು ಮನೆಗೆ ತಂದು ನಿಟ್ಟು ಕಟ್ಟಲಾಗುವುದು ಅಥವಾ ಹಗೆ ತುಂಬಲಾಗುವುದು. ಹೊಟ್ಟಿನ ಬಣವೆ ಅಥವಾ ಕಣಿಕೆಯ ಬಣಿವೆ ಒಟ್ಟುವುದರೊಂದಿಗೆ ಒಂದು ವರ್ಷದ ವ್ಯವಸಾಯ ಚಕ್ರ ಒಂದು ಸುತ್ತು ಸುತ್ತಿದಂತಾಗುವುದು.

ಮಲೆನಾಡಿನ ಬೇಸಾಯ[೧೯] ಸಂಪೂರ್ಣವಾಗಿ ಭಿನ್ನವಾದದ್ದು. ಭತ್ತ ಇಲ್ಲಿಯ ಪ್ರಮುಖ ಬೆಳೆ. ಮಕರ ಸಂಕ್ರಾಂತಿಗೆ ಮಲೆನಾಡ ಜನ ಆರ್ ಕಟ್ಟುತ್ತಾರೆ. ಗೊಬ್ಬರ ಹಾಕಿ ಉಳುಮೆ ಮಾಡಿ ಭೂಮಿಯನ್ನು ಹದಮಾಡುತ್ತಾರೆ. ಏಪ್ರಿಲ್ ತಿಂಗಳ ಸುಮಾರಿಗೆ ಬೀಜ ಮುಹೂರ್ತ ನಡೆಯುತ್ತದೆ. ಗದ್ದೆಯಲ್ಲಿ ಬೆನಕನನ್ನು ಸ್ಥಾಪಿಸಿ ಬೀಜದ ಭತ್ತವನ್ನು ಪೂಜಿಸಲಾಗುತ್ತದೆ. 'ಒಂದಕ್ಕೆ ಹತ್ತಾಗಲಿ' ಎನ್ನುತ್ತಾ ಬೀಜವನ್ನು ಚೆಲ್ಲಾಡುವುದು ಇಲ್ಲಿಯ ಒಂದು ರೂಢಿ. ಇಲ್ಲಿಯ ಬೇಸಾಯ ಕ್ರಮದಲ್ಲಿ ಬಿತ್ತನೆಯ ಕ್ರಮವೂ ಉಂಟು. ನಾಟಿ ಮಾಡುವ ಕ್ರಮವೂ ಉಂಟು. ನಾಟಿ ಮಾಡುವುದು ಮಲೆನಾಡಿನ ವಿಶೇಷ. ನಾಟಿಗೆ ಮೊದಲು ತಯಾರಿಸಿದ ಅಗಿಗಳನ್ನು ಮುಹೂರ್ತಕ್ಕೆ ಸರಿಯಾಗಿ ಪೂಜಿಸಿ ಕೀಳುತ್ತಾರೆ. ನಾಟಿ ಮಾಡುವ ದಿವಸ ಮನೆಯ ಯಜಮಾನ ಬೆನಕನನ್ನು ಪೂಜಿಸಿ 'ತೊಟ್ಟಿನ' ಶಾಸ್ತ್ರ

೧೯. ಹಚ್ಚಿನ ವಿಷಯಕ್ಕೆ ಶ್ರೀ ಅಂಬಳಿಕೆ ಹಿರಿಯಣ್ಣ ಅವರ ಮಲೆನಾಡ ಜಾನಪದ ಸಂಪ್ರದಾಯಗಳು ಎಂಬ ಪುಸ್ತಕವನ್ನು ನೋಡಿ.

ಮಾಡಬೇಕು. ನಾಟಿ ಕೆಲಸದಲ್ಲಿ ಗ್ರಾಮಸ್ಥರ ಪರಸ್ಪರ ಸಹಕಾರ ಮುಖ್ಯವಾಗಿರುತ್ತದೆ. ನಾಟಿಯಾದ ಮೇಲೆ ಗದ್ದೆಗಳಲ್ಲಿ ಇರಬೇಕಾದ ನೀರಿನ ಪ್ರಮಾಣವನ್ನು ಗಮನಿಸುತ್ತಿರಬೇಕು. ಗದ್ದೆಯಲ್ಲಿಯ ಕಸಕಡ್ಡಿಗಳನ್ನು ತೆಗೆಯುತ್ತಿರಬೇಕು.

ಪೈರು ಹೊಡೆಗೆ ಬಂದಾಗ ಬಂದೂಕು ಹಿಡಿದು ಕಾಡು ಮೃಗಗಳಿಂದ ರಕ್ಷಿಸುತ್ತಾರೆ. ಮಲೆನಾಡ ಒಕ್ಕಲಿಗರಿಗೆ ದೀಪಾವಳಿ ವಿಶೇಷವಾದ ಹಬ್ಬ. ಅಂದು ಗದ್ದೆ, ಗದ್ದೆಗಳಲ್ಲಿ ದೀಪ ಹೊತ್ತಿಸಿ ಸಂಭ್ರಮ ಪಡುತ್ತಾರೆ. ಬಂಧು ಬಾಂಧವರೊಂದಿಗೆ ಹೊಸಅಕ್ಕಿಯನ್ನು ಉಣ್ಣುವುದು 'ಹೊಸ್ತಿವಯನೆ' ಹಬ್ಬ ಎನ್ನಿಸಿಕೊಳ್ಳುತ್ತದೆ. ಕೊಯ್ಲಿಗೆ ಮುನ್ನ ಗದ್ದೆಯ ನೀರನ್ನು ಸಂಪೂರ್ಣವಾಗಿ ಇಂಗುವಂತೆ ಮಾಡಲಾಗುತ್ತದೆ. ಕೊಯ್ಲು ಮಾಡಿದ ಭತ್ತದ ಹುಲ್ಲನ್ನು ಗದ್ದೆಗಳಲ್ಲಿಯೇ ಮೂರು ದಿನ ಒಣಗಿಸಿ ಹೊರೆಕಟ್ಟಿ ಮನೆಯ ಮುಂದಿನ ಕಣಕ್ಕೆ ತಂದು ಬಣವೆ ಒಟ್ಟುತ್ತಾರೆ. ಉತ್ತರ ಕರ್ನಾಟಕದಂತೆ ಇಲ್ಲಿಯೂ ಮೇಟಿ ಹುಗಿದು ದನಗಳಿಂದ ತೆನೆಯನ್ನು ನುರಿಸುವುದುಂಟು, ತರುವಾಯ ತೂರಿ ಭತ್ತವನ್ನು ಬೇರ್ಪಡಿಸಿ ಒಣ ಹುಲ್ಲನ್ನು ಒಂದು ಕಡೆ ಒಟ್ಟುತ್ತಾರೆ. ಇವರೂ ಭತ್ತದ ರಾಶಿಪೂಜೆಯನ್ನು ನೆರವೇರಿಸಿ ತಮ್ಮ ದುಡಿಮೆಯ ಸಾರ್ಥಕತೆಯನ್ನು ಅಂದು ಕಾಣುತ್ತಾರೆ.

ಬೇಟೆ :

ಭೌತಿಕ ಸಂಪ್ರದಾಯಗಳು ಭೌಗೋಳಿಕ ಸ್ಥಿತಿಯನ್ನನುಸರಿಸಿ ವ್ಯತ್ಯಾಸಗೊಳ್ಳುತ್ತವೆ. ಬೇಟೆ ಇದಕ್ಕೆ ಒಳ್ಳೆಯ ಉದಾಹರಣೆ. ಮಲೆನಾಡಿನಲ್ಲಿ ದಟ್ಟವಾದ ಕಾಡು ಇರುವುದರಿಂದ ಅಲ್ಲಿಯ ಜನರಿಗೆ ಬೇಟೆಯೂ ಒಂದು ಜೀವನಮಾರ್ಗ. ಹೀಗಿರುವುದರಿಂದ ತತ್ಸಂಬಂಧೀ ಸಂಪ್ರದಾಯ ಅಲ್ಲಿಯ ಬದುಕಿನಲ್ಲಿ ಗಟ್ಟಿಯಾಗಿದೆ. ಉತ್ತರ ಕರ್ನಾಟಕದಲ್ಲಿಯೂ 'ಬೇಟೆ' ಇದೆ. ಆದರೆ ಅದು ಹಬ್ಬದ ಒಂದು ಆಚರಣೆಯಾಗಿ ಬರುವ ವಿಧಾನ ಮಾತ್ರ. ಇಲ್ಲಿ ಬೇಟೆ ಕನಿಷ್ಟಪಕ್ಷ ಹವ್ಯಾಸವಾಗಿಯೂ ಇಲ್ಲ. ಕೇವಲ ವಿನೋದಕ್ಕಾಗಿ ಮಾತ್ರ ವರ್ಷದಲ್ಲೊಂದು ದಿನ – ಕಾರಹುಣ್ಣಿಮೆಯಾದ ಎರಡನೆಯ ದಿನ – ಬೇಟೆಯಾಡುತ್ತಾರೆ. ಅಷ್ಟೇನೂ ದಟ್ಟವಾಗಿರದ ಗುಡ್ಡಗಳಲ್ಲಿ ಇವರು ಹೊತ್ತು ಮುಳುಗುವವರೆಗೆ ತಿರುಗಾಡಿದರೂ ಐದಾರು ಮೊಲಗಳು ಮಾತ್ರ ದೊರೆಯುತ್ತವೆ. ದೊರೆತ ಬೇಟೆಯಲ್ಲಿ ಬೇಟೆಗೆ ಹೋದವರೆಲ್ಲ ಪಾಲು ಪಡೆಯುತ್ತಾರೆ.

ಮಲೆನಾಡಿನಲ್ಲಿ ಬೇಟೆ ಬಹಳ ಜನರಿಗೆ ಉಪವೃತ್ತಿಯಾಗಿದೆ. ಆಗೀಗ ಗದ್ದೆಯ ಅಂಚಿನಲ್ಲೋ ಊರ ಹೊರವಲಯದಲ್ಲೋ ಕಾಡು ಪ್ರಾಣಿಯ ಹೆಜ್ಜೆ ಗುರುತು ಸಿಕ್ಕ ಮೇಲೆ ಬೇಟೆಗೆ ಸಿದ್ಧತೆ ನಡೆಯುತ್ತದೆ. ಕತ್ತಿ, ಕೋಲು ಮುಂತಾದವುಗಳೊಂದಿಗೆ ನಾಯಿಗಳು ಸಂಗಡ ಬರುತ್ತವೆ. ಪ್ರಾಣಿಯ ಹೆಜ್ಜೆಯ ಜಾಡು ಹಿಡಿದು ಶಿಕಾರಿಗಳು ಅಲ್ಲಲ್ಲಿ ನಿಲ್ಲುತ್ತಾರೆ. ಒಂದು ತುದಿಯಿಂದ ಕೆಲವರು ಹುಯಿಲೆಬ್ಬಿಸುತ್ತಾ ಪ್ರಾಣಿಗಳನ್ನು ಅಟ್ಟಿಸಿಕೊಂಡುಬಂದು ಬೇಟೆಯಾಡುತ್ತಾರೆ. ದೊರೆತ ಬೇಟೆಯನ್ನು ಒಂದುಕಡೆಗೆ ಕುಳಿತುಕೊಂಡು ಹಂಚಿಕೊಳ್ಳುತ್ತಾರೆ. ಬೆಂಕಿ ಹೊತ್ತಿಸಿ 'ಹುರಿತುಂಡು' ತಯಾರಿಸುತ್ತಾರೆ. ಈ ಸಂದರ್ಭದಲ್ಲಿನ ಬೇಟೆರಂಗನ ಪೂಜೆ ವಿಶೇಷವಾದುದು. ಪೂಜೆ ಮುಗಿದ ತರುವಾಯ ಬಹುಶಃ ಬೇಟೆರಂಗನ ಗೌರವಾರ್ಥವಿರಬೇಕು; ಆಕಾಶದ ಕಡೆಗೆ ಗುರಿ ಮಾಡಿ ಗುಂಡು ಹಾರಿಸುವುದು ಒಂದು ಸಂಪ್ರದಾಯ. ಊರಿಗೆ ಹಿಂದಿರುಗುವ ಸಮಯದಲ್ಲಿ ಬಾಳೆಲೆಯನ್ನು ಹಾಸಿದ ವ್ಯಕ್ತಿ 'ಬೇಟೆ ಬೋ ಬೇಟೆ ಬೋ ಬೇಟೆ ಬೋ' ಎಂದು ಹೇಳುತ್ತಾ ಬಾಳೆಎಲೆಗಳನ್ನು ಕೊಚ್ಚಿ ಹಾಕುತ್ತಾನೆ. ಆ ಸಂದರ್ಭದಲ್ಲಿ ಇಬ್ಬರು ಆತನ ಹಿಂಭಾಗದಿಂದ ಬಂದು, 'ಇವತ್ತು ಹಿಡಿ ನಾಳೆ ಹೊಡಿ' ಎಂದು ಗುದ್ದು ಹೊಡೆಯುತ್ತಾರೆ.[೨೦] ಇದು ಬೇಟೆಯ ಸಾಮಾನ್ಯ ವಿಧಾನ. ಮತ್ತೆ ಬಲೆಬೇಟೆ, ಕದ್ದಿಂಗಳ ಬೇಟೆ, ಉಳ್ಳ ಹಾಕುವುದು, ಶಿಸ್ತು ಕಟ್ಟುವುದು ಮುಂತಾಗಿ ಬೇಟೆಯ ಬೇರೆ ತಂತ್ರಗಳುಂಟು.[೨೧]

ಜನಪದರು ನಂಬಿಕೆ ಸಂಪ್ರದಾಯಗಳಿಗೆ ಗಟ್ಟಿಯಾಗಿ ಅಂಟಿಕೊಂಡಿರುವುದಕ್ಕೆ ಮೂಲಕಾರಣ ಭಯ. ಇದು ದೇವರು, ದೆವ್ವದ್ದಿರಬಹುದು ಅಥವಾ ಸಮಾಜದ್ದಿರಬಹುದು. ಅನೇಕ ಸಲ ವಿಚಾರಶೀಲತೆ ಎಷ್ಟೇ ಪ್ರಖರವಾಗಿದ್ದರೂ ಭಯವು ಕಾಲಾಂತರದಲ್ಲಿ ಉದಾಸೀನತೆಗೆ ತಿರುಗಿ ಮತ್ತೆ ನಂಬಿಕೆ, ಸಂಪ್ರದಾಯಗಳಿಗೆ ಹೆಗಲು ಕೊಡುವಂತಾವುಗುವುದು ಗಮನಾರ್ಹ ಅಂಶ.

೧೯೮೪ ಕರ್ನಾಟಕ ಜಾನಪದ ಪ್ರಸಂ.ಡಾ.ಎಸ್.ಕೆ. ಕರೀಂಖಾನ್

---

೨೦. ಮಲೆನಾಡ ಜನಪದ ಸಂಪ್ರಾಯಗಳು ಪುಟ-೯೭

೨೧. ಹೆಚ್ಚಿನ ವಿವರಗಳಿಗೆ ಮೇಲಿನ ಪುಸ್ತಕ ನೋಡಿ.

ಜನಪದ ಸಾಹಿತ್ಯದಲ್ಲಿ ಮಾನವೀಯ ತುಡಿತಗಳು

ಬೇಟೆಯುಗದಿಂದ ಅತಿನಾಗರಿಕತೆವರೆಗಿನ ಮನುಷ್ಯನ ದಾರಿಯ ಮಧ್ಯದಲ್ಲಿ ಅರಳಿದ ಜಾನಪದ ಸಂಸ್ಕೃತಿಯನ್ನೇ ನಾವಿಂದು ವಿಶೇಷವಾಗಿ ಜಾನಪದ ಅಧ್ಯಯನದ ಹೆಸರಿನಲ್ಲಿ ಅಧ್ಯಸಿಸುತ್ತಿರುವುದು. ಈ ಮಧ್ಯದ ಹೊತ್ತಿಗೆ ಜನಪದರ ನಂಬಿಕೆ – ಸಂಪ್ರದಾಯಗಳು ಒಂದು ನಿಶ್ಚಿತ ಆಕಾರ ತಳೆದಿದ್ದವು, ಜಾತಿ–ಮತಗಳು ಪ್ರಬಲಗೊಂಡಿದ್ದವು, ಸಾಮಾಜಿಕ ಕಟ್ಟು ಪಾಡುಗಳು ಗಟ್ಟಿಯಾಗಿದ್ದವು. ಒಟ್ಟಾರೆ ನಾವಿಂದು ಗ್ರಾಮೀಣ ಜೀವನ ಎಂದು ಯಾವುದನ್ನು ನಿಖರವಾಗಿ ಅರ್ಥೈಸಬಹುದೋ ಅದೆಲ್ಲ ಈ ಅವಸ್ಥೆಯಲ್ಲಿ ಸಮ್ಮಿಳನಗೊಳ್ಳುತ್ತದೆ. ಈಚೆಗಿನ ನಗರ, ಜಾನಪದಗಳೆರಡೂ ಇಂದು ಜಾನಪದ ಅಧ್ಯಯನದಲ್ಲಿ ಸಮಾವೇಶಗೊಳ್ಳುತ್ತಿದ್ದರೂ ನಮ್ಮ ಜಾನಪದ ಅಧ್ಯಯನವು ಪ್ರಮುಖವಾಗಿ ಕೇಂದ್ರೀಕೃತಗೊಂಡಿರುವುದು 'ಮಧ್ಯಕಾಲೀನ' ಜಾನಪದ ಸಂಸ್ಕೃತಿಯ ಮೇಲೆಯೇ.

ಜಾನಪದ ಸಂಸ್ಕೃತಿ ರೂಢಿಸಿಕೊಂಡು ಬಂದಿರುವ ಜೀವನ ಶೈಲಿಯಲ್ಲಿ ಮುಖ್ಯವಾಗಿ ಎರಡು ರೀತಿಯುಂಟು. ಒಂದು ಜಾನಪದರ ಭೌತಿಕ ನಡೆ, ಇನ್ನೊಂದು ಅವರ ಭಾವಜಗತ್ತು. ಜನಪದರ ಕೃಷಿ ಕೈಗಾರಿಕೆ ಮುಂತಾದವುಗಳು ಮತ್ತು ಇವುಗಳಿಗೆ ಪೂರಕವಾಗಿರುವ ಉಪವೃತ್ತಿಗಳು ಭೌತಿಕ ನಡೆಯಲ್ಲಿ ಸೇರುತ್ತವೆ. ಇವು ಅವರ ಬದುಕಿಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತವೆ. ಕೇವಲ ಹೊಟ್ಟೆ ಹೊರೆಯುವುದಷ್ಟೇ ಬದುಕಾಗಲಾರದು ಎಂಬ ತಿಳುವಳಿಕೆ ಭಾವಜಗತ್ತಿಗೆ ಸೇರಿದ್ದು. ಸುರಕ್ಷಿತವಾಗಿ ಬದುಕಬೇಕು, ಚೆಂದಾಗಿ ಬದುಕಬೇಕು ಎಂಬ ಆಕಾಂಕ್ಷೆಯಿಂದ ಜಾನಪದರು ಅನೇಕ ನಂಬಿಕೆ – ಸಂಪ್ರದಾಯಗಳನ್ನು ಅಳವಡಿಸಿಕೊಂಡರು, ತಮಗೆ ತಾವೇ ಅನೇಕ ಕಟ್ಟುಪಾಡುಗಳನ್ನು ನಿರ್ಮಿಸಿಕೊಂಡರು, ಅನೇಕ ಸಾಹಿತ್ಯ–ಕಲೆಗಳನ್ನು ಸೃಷ್ಟಿಸಿದರು. ಈ ಹಂತದ ನಂಟಸ್ತಿಕೆ, ಮದುವೆ–ಮುಂಜಿವೆಗಳು ಮನುಷ್ಯನ ಭಾವನೆಗಳನ್ನು ಕೋಮಲವಾಗಿಸಿದವು, ಸಾಮಾಜಿಕ ಅಸಮಾನತೆ, ಪ್ರಕೃತಿ ವಿಕೋಪಗಳೂ ಜಾನಪದರನ್ನು ಹಣ್ಣು ಮಾಡಿವೆ. ಈ ಸಂದರ್ಭದ ಅವರ ಭಾವನೆಗಳಿಗೆ, ಭಾವುಕತೆಗೆ ವಾಸ್ತವದ ನೆಲೆಗಟ್ಟಿದೆ. ಇವೆಲ್ಲ ಮಾನವೀಯ ತುಡಿತಗಳಾಗಿ ಜನಪದ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿವೆ.

ಈ ಮಾನವೀಯ ತುಡಿತಗಳ ಅವಲೋಕನವನ್ನು ನಾವು ಕೌಟುಂಬಿಕ ನೆಲೆಯಿಂದಲೇ ಆರಂಭಿಸಬಹುದು. ಮದುವೆಯೆನ್ನುವುದು ಗಂಡು-ಹೆಣ್ಣನ್ನು ಕೌಟುಂಬಿಕ ನೆಲೆಯಿಂದ ಎತ್ತಿ ಸಾಮಾಜಿಕರಣಗೊಳಿಸುವ ಮನುಷ್ಯ ಬದುಕಿನ ಒಂದು ಮಹತ್ವದ ಘಟ್ಟ, ಈ ಪ್ರಕ್ರಿಯೆಯಲ್ಲಿ ವಿಶೇಷವಾಗಿ ಗಾಸಿಗೊಳ್ಳುವವಳು ಸ್ತ್ರೀ.ಮದುವೆಯ ಹಂದರದಲ್ಲೇ ಇವಳ ಸುತ್ತ ಭಾವನೆಗಳು ಭಾರವಾಗುತ್ತವೆ. ತಾಯಿ-ತಂದೆಗಳಿಗೆ ಹೆತ್ತ ಮಗಳನ್ನು ದೂರವಾಗಿಸಲು ಕರುಳು ಚುರುಗುಟ್ಟುತ್ತದೆ. ತಮ್ಮೊಂದಿಗೆ ತಮ್ಮ ಜೀವವಾಗಿ ಬೆಳೆದ ಸೋದರಿಯನ್ನು ಅಗಲಿ ಇರುವುದು ಅಣ್ಣ ತಮ್ಮರ ಕಣ್ಣಲ್ಲಿ ನೀರು ತರಿಸುತ್ತದೆ.

ಹತ್ತು ತಿಂಗಳು ನಿನ್ನ ಹೊತ್ತುಕೊಂಡು ತಿರುಗೇನು
ಮುತ್ತು ಸುರುವಿದರ ಬರಿ ಉಡಿಯು । ನನಮಗಳ
ಅತ್ತೇರಿಗೊಪ್ಪಿಸಿ ಕೊಡಲ್ಹ್ಯಾಂಗ.

ಕಪ್ಪರಗುಡ್ಡಕ ಬೆಂಕಿ ತಪ್ಪದಲೆ ಕೊಟ್ಹಾಂಗ
ಅಪ್ಪನ ಹೊಟ್ಟಿ ತಳಮಳಿಸಿ । ಮಗಳ ನಿನ್ನ
ಒಪ್ಪಿಸಿ ನಾವು ಕೊಡತೀವ.

ಸುಣ್ಣದ ಭಟ್ಟ್ಯಾಗ ತಣ್ಣೀರ ಹೊಯ್ದಾಂಗ
ಅಣ್ಣನ ಹೊಟ್ಟಿ ಹೊಯ್ದಾಡಿ । ನನತಂಗಿ
ನನ್ನ ಮನಿಗಿಂದ ಎರವಾದೆ.

ಇಂಥ ಹಾಡುಗಳನ್ನು ಅದೇ ಸಂದರ್ಭದಲ್ಲಿ ಪರಿಭಾವಿಸಬೇಕು. ಒಡಲ ದುಃಖಕ್ಕೆ ದನಿಯಾದ ಈ ಹಾಡುಗಳು ಸಂಬಂಧಿಕರಷ್ಟೇ ಅಲ್ಲ ನೆರೆದವರೆಲ್ಲರ ಕಣ್ಣಲ್ಲಿ ನೀರೂರಿಸುತ್ತವೆ.

ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಹೆಂಡತಿ ಗಂಡನ ಮನೆಗೆ ಬರಬೇಕಾಗುವುದು ಅನಿವಾರ್ಯ. ಇತ್ತೀಚಿನ ನಮ್ಮ ವೈಚಾರಿಕ ತಿಳುವಳಿಕೆಗಳೇನೇ ಇರಲಿ ಗ್ರಾಮೀಣ ಹೆಣ್ಣುಮಗಳು ಬಿರುಬಿರನೆ ನಡೆದು ನಿರ್ಭಾವುಕಳಾಗಿ ಗಂಡನ ಮನೆ ಸೇರಲಾರಳು.

ನಾಳಿ ಇಷ್ಟೊತ್ತಿನ್ಯಾಗ ನಾಡ ಮ್ಯಾಲಿನ ಹಕ್ಕಿ
ಕೂಡುಣ್ಣುನು ಬಾರ ಹಡದವ್ವ । ನಾವೀಗ
ಹಿಂಡಿನಾನ ಹಕ್ಕಿ ಆಗಲೀವ

ತೊಟ್ಟೀಲ ಹೊತಗೊಂಡ ತವರಬಣ್ಣ ಉಟಗೊಂಡ
ಅಣ್ಣ ಕೊಟ್ಟಿಮ್ಮಿ ಹೊಡಕೊಂಡ । ತಾಯವ್ವ
ತಿಟ್ಟತ್ತಿ ತಿರಗಿ ನೋಡ್ಯಾಳ.

ಅತ್ತರ ಕರದರ ಹತ್ತರಿದ್ದೇವೇನ
ಭೀ ಹುಚ್ಚಿ ತಾಯಿ ಮರುಳೇನ । ಗ್ವಾಡಿಯ
ಚಿತ್ತಾರ ನೋಡಿ ಮರಿಯವ್ವ

ಮೇಲಿನ ಪದ್ಯಗಳಲ್ಲಿ ತೋರುವ ತಾಯಿ ತವರಿನ ಹಂಬಲಗಳು ಮನುಷ್ಯ ಭಾವನೆಗಳನ್ನು ಆರ್ದ್ರಗೊಳಿಸುತ್ತವೆ. ಬೆಳಗಾದರೆ ಮಗಳು ಗಂಡನ ಮನೆಗೆ ಹೋಗಬೇಕು; ತಾಯೊಂದಿಗೆ ಉಣ್ಣುವ ಆಸೆ ಮಗಳಿಗೆ. ಇದುವರೆಗೆ ಹಕ್ಕಿಯಂತೆ ಇದ್ದವರು; ನಾಳೆಯ ಅಗಲುವಿಕೆ ಹಿಂಸಿಸುತ್ತಿದೆ. ಅನಿವಾರ್ಯವಾದ ಇಂಥ ಅಗಲುವಿಕೆಗೆ ಒಂದೇ ಒಂದು ಪರಿಹಾರವೆಂದರೆ ನೆನಪು. ಗೋಡೆಯ ಮೇಲೆ ಮಕ್ಕಳು ತೆಗೆದ ಚಿತ್ತಾರ ನೋಡುತ್ತಿದ್ದರೆ ಅಗಲುವಿಕೆಯ ತಾಪ ಕಡಿಮೆಯಾದೀತು. ಹೆರಿಗೆಗೆ ಬಂದವಳು ಮರಳುತ್ತಿರುವಾಗ ದಿಬ್ಬದ ಮೇಲೆ ನಿಂತು ತಾಯನ್ನು, ತವರನ್ನು ನನೆಸಿಕೊಂಡು ಹಿಂತಿರುಗಿ ನೋಡುವ ದೃಶ್ಯವಂತೂ ಕಣ್ಣಿಗೆ ಕಟ್ಟುತ್ತದೆ. ತವರಿನ ತಾಯಿ–ತಂದೆ, ಅಣ್ಣತಮ್ಮರ ಕರುಳು ಬಳ್ಳಿಯ ಸಂಬಂಧ ಅಷ್ಟೊಂದು ತೀವ್ರತರದ್ದು. ಮದುವೆಯೆಂಬ ಸಾಮಾಜಿಕ ವ್ಯವಸ್ಥೆಯೊಂದರ ಕಟ್ಟು ಪಾಡಿಗೊಳಗಾಗಿ ಬದುಕುವ ಜನಪದರು ಇಂಥ ಒಂದು ವ್ಯವಸ್ಥೆಯನ್ನು ಕುಟುಂಬದ ಸಮಾಜದ ಶ್ರೇಯೊಭಿವೃದ್ಧಿಗಾಗಿ ಅಳು ಅಳುತ್ತಲೇ ಒಪ್ಪಿಕೊಳ್ಳುವುದು ಅವರ ಸಾಮಾಜಿಕ ಪರಿಜ್ಞಾನವನ್ನು ಎತ್ತಿ ತೋರಿಸುತ್ತದೆ.

ಇದಿಷ್ಟೇ ಬದುಕಾಗಿದ್ದರೆ ಸಂತೋಷದಿಂದಿರಬಹುದಿತ್ತು. ಹೆಣ್ಣನ್ನು ನಡೆಸಿಕೊಳ್ಳುವ ಪುರುಷ ಸಮಾಜದ ದುರ್ವರ್ತನೆ – ಒಮ್ಮೊಮ್ಮೆ ಹೆಣ್ಣೇ ಇವರಿಗೆ ಬೆಂಬಲವಾಗಿ ನಿಲ್ಲುವುದೂ ಉಂಟು – ಆಗೀಗ ಮೂಡುವ ನಂಜಾಗಿದೆ. ನಮ್ಮವರು – ಗಂಡು, ಹೆಣ್ಣು ಇಬ್ಬರೂ ಬದುಕಿನ ಸೊಗಸನ್ನೇ ಬಹಳವಾಗಿ ಅಭಿವ್ಯಕ್ತಿಸಿರುವುದು ಅವರ ಸೌಂದರ್ಯ ಪ್ರೀತಿಯನ್ನು, ಜೀವನ ಪರ ಕಾಳಜಿಯನ್ನು ಪ್ರತಿನಿಧಿಸುತ್ತದೆ. ಆದರೆ ಅನ್ಯಾಯವನ್ನು ತಡೆಯದ ಕವಿ ಹೃದಯ ಆಗೀಗ ಮನ ಮಿಡಿಯುವ ವಿಕೃತ ಭಾವನೆಗಳನ್ನು ಬಯಲಿಗೆಳೆದಿರುವುದುಂಟು.

ಉತ್ತರಾಜಿಯ ಬದುಕು ಇದಕ್ಕೆ ನಿದರ್ಶನ. ಯಾವುದೋ ಕಾರಣದಿಂದ ಅತ್ತೆಗೆ ಸೊಸೆಗೆ ಜಗಳವಾಗಿ ಹೊಲದಿಂದ ಉತ್ತಿಬಂದ ಮಗನಿಗೆ ದೂರು ಹೇಳಿದ ತಾಯಿ 'ಬಿಟ್ಟು ಬಿಡು ಅವಳ ತವರಿಗೆ' ಎನ್ನುತ್ತಾಳೆ. ಮಗನೇನೋ ಮೊದಲು 'ಬಿಟ್ಟೂ ಬಿಡುವೋಕೆ

ಅವಳು ಎತ್ತಲ್ಲ' ಎಂದನು, 'ಆಡಲ್ಲ ಕುರಿಯಲ್ಲ. ಎಂದನು. ಆದರೆ ಮಗನಿಗೆ ಸೊಪ್ಪು ಹಾಕದ ತಾಯಿ ಇನ್ನೊಂದು ಮದುವೆಯ ಆಸೆ ತೋರಿ ತನ್ನದನ್ನೇ ಸಾಧಿಸಿದಳು. ಅಲ್ಲಿಗೆ ಮಗರಾಯ ಮೌನಿಯಾದ. ಅತ್ತೆ ಸೊಸೆಯನ್ನು ಹೊರಗೆ ಹಾಕಿದಳು. ಉತ್ತರಾಜಿ ತನ್ನೆರಡೂ ಮಕ್ಕಳನ್ನು ಕರೆದುಕೊಂಡು ಅಪವೇಳೆಯಲ್ಲಿ ತವರಿಗೆ ಬಂದರೆ ಅವಳ ಸಂಕಟವನ್ನು ಕೇಳುವವರಿಲ್ಲ. ಮೊದಲು ತಂದೆಯ ಮನೆಯ ಬಾಗಿಲು ಬಡಿದರೆ ಅವನು ಅವಳ ಅಣ್ಣನ ಮನೆಯ ದಾರಿ ತೋರಿದ, ಅಣ್ಣ ಅಕ್ಕನ ಮನೆಗೆ ಹೋಗೆಂದ, ಅಕ್ಕ ತಾಯಿಯ ಮನೆಗೆ ಅಟ್ಟಿದಳು, ಆ ತಾಯಿಯಾದರೋ ಇಂಥದೇ ದುಃಖವನ್ನು ಉಂಡವಳು. 'ಉತ್ತರಿ ಮಳೆಯಾಗಿ ಹೋಗು' ಎಂದು ಬಿಟ್ಟಳು. !

ಇಡೀ ಕಥೆಯುದ್ದಕ್ಕೂ ಉತ್ತರೆಯ ಅನಾಥಪ್ರಜ್ಞೆ ಮನಕಲಕುತ್ತದೆ. ಉತ್ತರೆಯನ್ನು ತವರಿಗೆ ದಬ್ಬುವ ಗಳಿಗೆಯಲ್ಲಿ ಅವರತ್ತೆ 'ನೆಲ್ಲಕ್ಕಿ ಬಾನ ಉಂಡು ಹೋಗು', 'ಹಸುವಿನ ಹಾಲು ಕುಡಿದು ಹೋಗು' ಎಂಬ ಬಣ್ಣದ ಮಾತುಗಳನ್ನಾಡಿದಾಗ 'ನೀನಾರೆ ಉಣ್ಣು ನೀನಾರೆ ಕುಡಿ' ಅಥವಾ 'ಮುಂದೆ ಬರುವಳಿಗೆ ಮಡಗಿರೆ' ಎಂಬ ಮಾತುಗಳನ್ನಾಡುವುದನ್ನು ಬಿಟ್ಟರೆ ಎಲ್ಲಿಯೂ ಅನ್ಯಾಯಕ್ಕೆ ಸೊಸೆಯ ಪ್ರತಿರೋಧವಿಲ್ಲ. 'ನನ್ನ ತಪ್ಪೇನು, ನಾನು ಯಾಕೆ ಮನೆ ಬಿಟ್ಟು ಹೋಗಬೇಕು. ಎಂದು ಅತ್ತೆ, ಗಂಡನನ್ನು ಎದುರಿಸಿ ಕೇಳುವ ಧೈರ್ಯ ಉತ್ತರೆಗಿಲ್ಲ. ಅವಳಂತೆಯೇ ಅವಳ ತವರು ಮನೆಯವರು ತಮ್ಮ ಮಗಳು ಮಾಡಿರುವ ಅಪರಾಧವೇನು ? ಅವಳಿಗೆ ಯಾಕೀ ಶಿಕ್ಷೆ ಎಂದು ಗಂಡನ ಮನೆಯವರನ್ನು ಪ್ರಶ್ನಿಸಬೇಕೆಂಬ ಕನಿಷ್ಠ ಪ್ರಜ್ಞೆಯೂ ಅವರಲ್ಲಿಲ್ಲ. ಒಟ್ಟಾರೆ ಹೆಣ್ಣು ಹಲ್ಲಲ್ಲಿ ನಾಲಿಗೆ ಇಟ್ಟುಕೊಂಡು ಆದ ಅನ್ಯಾಯವನ್ನು ಸಹಿಸಿಕೊಳ್ಳಬೇಕೆಂಬುದು ಅಂದಿನ ಸಮಾಜನಿರ್ಮಿತ ಅಲಿಖಿತ ಶಾಸನವಾಗಿ ತೋರುತ್ತದೆ. ಇಂಥ ಎಷ್ಟು ಉತ್ತರೆಯರು ಉತ್ತ್ರಿ ಮಳೆಯಾಗಿ ಹೋದರೋ ; 'ಹೆಣ್ಣು ಆಗುದಕಿಂತ ಮಣ್ಣು ಆಗುದ ಲೇಸ".

ದುಡಿಯುವ ಜನರಿಗೆ ದನಿಯಿಲ್ಲ. ಆಳಾಗಿ, ಜೀತದಾಳಾಗಿ ನೀರಿನಂತೆ ಬೆವರು ಸುರಿಸುವ ಬಡವರ ಗೋಳಿಗೆ ಕೊನೆಯೆಂದು? ತಮ್ಮ ಶ್ರಮ ಮೇಲು ವರ್ಗದವರಿಗೆ ಸುಪ್ಪತ್ತಿಗೆ ಕಲ್ಪಿಸಿ ಕೊಟ್ಟದೆಯೆಂಬುದನ್ನು ಅರಿಯಲಾರದೆ ಹೋದವರಿವರು.

ಕ್ಷಣಜಾ ಬೆಳೆದ ಮಗಗ ಉಣಲಾಕ ಕೂಳಿಲ್ಲ
ಬೀಸಾಕ ಕವಣಿ ಬಲನಿಲ್ಲ
ಕವಣೀನ ಬೀಸಾಕ ಬಲನಿಲ್ಲ – ಕೂಲ್ಯೆವರ
ಸುಡಬೇಕ ಜನುಮ ಸುಖವಿಲ್ಲ.

ಮಳಿ, ಗಾಳಿ, ಬಿಸಿಲೆನ್ನದೆ ದುಡಿಯುವವ ರೈತ, ಎಲ್ಲರಿಗೂ ಅನ್ನ ಹಾಕುವವ

ರೈತ.ಆದರೆ ಅವನಿಗೇ ಕೂಳಿಲ್ಲದ ಪರಿ ಮೇಲಿನ ಸಾಲುಗಳಲ್ಲಿದೆ. ಶ್ರಮಕ್ಕೆ ಬೆಲೆ ಕೇಳುವ ಪ್ರಜ್ಞಾವಂತಿಕೆ ಒಂದು ಸಮೂಹ ಸೃಷ್ಟಿಯಾಗಿ ಯಾಕೆ ಮೂಡಲಿಲ್ಲವೋ ಆಶ್ಚರ್ಯವೆನಿಸುತ್ತದೆ.

ನೈಸರ್ಗಿಕ ವಿಕೋಪಗಳೂ ನಮ್ಮವರನ್ನು ಆಗೀಗ ಕಂಗೆಡಿಸಿ ಸಾಹಿತ್ಯ ಸೃಷ್ಟಿಗೆ ಕಾರಣವಾಗಿವೆ. ಬರಗಾಲದ ಬವಣೆ ಮಹಾಪೂರದ ಅನಾಹುತಗಳೆಷ್ಟೋ ಜನಪದರ ಮನಕಲಕಿವೆ. ಪ್ರಸಿದ್ಧವಾದ ಬರದ ಹಾಡು ಮನುಷ್ಯನ ಅಸಹಾಯಕತೆಯನ್ನು ತೆರೆದು ತೋರಿಸುತ್ತದೆ. ಬರ ಮನುಷ್ಯನ ಬದುಕನ್ನು ಅಸಹನೀಯವಾಗಿಸುತ್ತದೆ. ಜೀವರಾಶಿಗಳಿಗೆಲ್ಲ ಆಧಾರವಾಗಿರುವ ಮಳೆ ಮುಖ ದೋರದಿದ್ದರೆ ಅನ್ನಕ್ಕಾಗಿ ಪರದಾಡಬೇಕಾಗುತ್ತದೆ. 'ಬಣ್ಣದ ಗುಬ್ಬಿ' ಗಳಂತೆ ಕೋಮಲರಾದ ನಮ್ಮ ಅಕ್ಕ-ತಂಗಿಯರೆಲ್ಲ ಮಣ್ಣಾಗಿ ಹೋಗುವ ಪ್ರಸಂಗ ಪ್ರಾಪ್ತವಾಗುತ್ತದೆ. ಭತ್ತಕ್ಕಾಗಿ ಒಕ್ಕಲಗೇರಿಯಲ್ಲಿ ಮಕ್ಕಳನ್ನು ಮಾರುವ ಅನಿವಾರ್ಯತೆ ದಂಗಾಗಿಸುತ್ತದೆ. ಸಂಗಡವೇ ಬಡವರ ಅಸಹಯಕತೆಯನ್ನು ದುರುಪಯೋಗಪಡಿಸಿಕೊಂಡು ಅವರ ಮಕ್ಕಳನ್ನು ಖರೀದಿಸುವ ಇದ್ದುಳ್ಳವರ ಕ್ರೌರ್ಯ ಅಸಹನೀಯವಾಗುತ್ತದೆ. ಕೆಲವರಂತೂ ಬರದ ಯಾತನೆ ನೀಗಿಕೊಳ್ಳಲು ತಾವೂ ಸಾಯುತ್ತಾರೆ. ಮಕ್ಕಳನ್ನು ಕೊಲ್ಲುತ್ತಾರೆ.

ಹಿಲಗಿ ಹಿಟ್ಟಿನ್ಯಾಗ ಮಳಿರಾಜಾ । ಅವರು
ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ
ಹಸ್ತು ಬಂದಕೇರಿ ಗಪ ಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ
ಗಿದ್ದನ ಅಕ್ಯಾಗ ಮಳಿರಾಜಾ । ಅವರು
ಅಮವನ್ನು ಕೂಡಿಸ್ಯಾರ ಮಳಿರಾಜಾ
ಸಣ್ಣ ಕೂಸಿಗೆ ಮನ್ನಿಸಿ ಉಣಿಸ್ಯಾರ
ಕಣ್ಣನ್ನೇ ಮುಚ್ಚ್ಯಾವ ಮಳಿರಾಜಾ

ದುಡಿದು ಉಣ್ಣುವ ಸಾಮಾನ್ಯರ ಬದುಕನ್ನು ವ್ಯಾಪಿಸುವ ಈ ಬರದ ಕರಾಳತೆಯನ್ನು ವರ್ಣಿಸಲು ಶಬ್ದಗಳಿಲ್ಲ.

ಜನಪದ ಸಾಹಿತ್ಯದಲ್ಲಿ ಬದುಕಿನ ಮನತುಡಿಯುವ ಪ್ರಸಂಗಗಳೆಷ್ಟೋ ಪ್ರತಿಫಲಿತವಾಗಿವೆ. ಕೌಟುಂಬಿಕ ಮಟ್ಟದ ಹಿಂಸೆಯನ್ನು ಮನುಷ್ಯ ತಡೆದುಕೊಳ್ಳಬಹುದು; ಪ್ರಕೃತಿ ಒಡ್ಡುವ ದುರಂತಗಳನ್ನು ಎದುರಿಸುವುದು ಅನಿವಾರ್ಯವಾಗುತ್ತದೆ. ಆದರೆ ಅನ್ಯಾಯಕ್ಕೆ ಬಡವರ ಪ್ರತಿರೋಧ ನಿರೀಕ್ಷಿತ ಪ್ರಮಾಣದಲ್ಲಿ ಜಾನಪದ ಸಾಹಿತ್ಯದಲ್ಲಿ

ಉಕ್ತಗೊಂಡಿಲ್ಲ. ಈ ಸಾಮಾಜಿಕ ಅನ್ಯಾಯವನ್ನು ನುಂಗಿಕೊಂಡು ಮೌನವಾಗುವ ಬಡವರಿಗೆ ಇದು ಅನ್ನ ಬಟ್ಟೆಯ ಪ್ರಶ್ನೆಯಾಗಿರಬಹುದು, ಆದರೆ ಇವರ ಈ ಮೌನ ವಿಚಾರವಂತರ ಒಡಲುರಿಸುತ್ತದೆ.

೨೦೦೦ ಸಾಮರಸ್ಯ ಸಂ. ಸತ್ಯಾನಂದ ಪಾತ್ರೋಟ

~~~*****~~~
~~~

ಬದಲಾಗುತ್ತಿರುವ ಹಳ್ಳಿಗಳು

ಹಳ್ಳಿಗಳು ನಮ್ಮ ಸಂಸ್ಕೃತಿಯ ಪ್ರತೀಕ; ನಮ್ಮ ಸಂಸ್ಕೃತಿಯ ಮೂಲಬೇರುಗಳಿರುವುದು ಗ್ರಾಮೀಣ ಪ್ರದೇಶದಲ್ಲಿ. ನಮ್ಮ ಉದ್ಯೋಗ–ವ್ಯವಹಾರ, ಆಚಾರ–ವಿಚಾರ, ರೀತಿ–ನೀತಿ, ನಂಬಿಕೆ–ಸಂಪ್ರದಾಯ, ಸಾಹಿತ್ಯ–ಕಲೆ ಇವೆಲ್ಲ ಮೂಲಸ್ವರೂಪದಲ್ಲಿ ಸಿಗುವುದು ಗ್ರಾಮಜೀವನದ ಮಧ್ಯೆ. ಆದರೆ ಸ್ವಾತಂತ್ರ್ಯಾ ನಂತರ ಅಧಿಕವಾಗಿ ಬೆಳವಣಿಗೆ ಪಡೆದ ಯಂತ್ರಯುಗದ ಪ್ರಭಾವ ಕೇವಲ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗುಳಿಯದೆ ಗ್ರಾಮೀಣ ಭಾಗಕ್ಕೂ ತಗುಲಿ ಗ್ರಾಮೀಣ ಜೀವನ ಬಹಳಷ್ಟು ಬದಲಾವಣೆ ಹೊಂದುತ್ತಿದೆ. ಆದರೆ ಈ ಬದಲಾವಣೆಗೆ ಇತಿಮಿತಿಯುಂಟು. ಇದು ಒಂದೇ ದಿನದಲ್ಲಿ ಮೂಡಿ ನಿಲ್ಲುವಂತಹುದಲ್ಲ, ಇದೊಂದು ಅಪ್ರಯತ್ನಪೂರ್ವಕವಾದ ಸಹಜ ಪ್ರಕ್ರಿಯೆಯಾಗಿದ್ದು ಈ ಬದಲಾವಣೆಯನ್ನು ಯಾರೂ ಅಂಗೈ ಹಚ್ಚಿ ತಡೆಯುವುದು ಸಾಧ್ಯವಿಲ್ಲ.

ಇಂದು ಬದಲಾಗುತ್ತಿರುವ ಹಳ್ಳಿಗಳ ಸ್ವರೂಪದ ಅಧ್ಯಯನವನ್ನು ನಾವು ಮೊಟ್ಟಮೊದಲು ಜೀವನಾಧಾರವಾದ ಔದ್ಯೋಗಿಕ ನೆಲೆಯಿಂದಲೇ ಆರಂಭಿಸಬೇಕಾಗುತ್ತದೆ. ನಮ್ಮ ಗ್ರಾಮ ಜೀವನ, ವ್ಯವಸಾಯವನ್ನು ಆಧರಿಸಿದ್ದು. ಇಂದು ವ್ಯವಸಾಯ ಸ್ವರೂಪದಲ್ಲಿ ಮಾತ್ರ ಬದಲಾವಣೆಯಾಗುತ್ತಿಲ್ಲ. ಆ ವೃತ್ತಿಯನ್ನವಲಂಬಿಸಿದವರ ಇಡೀ ಬದುಕೇ ಬದಲಾವಣೆ ಹೊಂದುತ್ತಿದೆ. ಕೃಷಿಕರು ಇಂದು ಕೃಷಿಗೆ ಸಂಬಂಧಿಸಿದ ಅನೇಕ ಸಾಂಪ್ರದಾಯಿಕ ಉಪಕರಣಗಳನ್ನು ಕೈಬಿಡುತ್ತಿದ್ದಾರೆ. ಉದಾಹರಣೆಗೆ ಅನೇಕ ರೈತರು ಕುಂಟಿ, ಕೂರಿಗೆಯ ಬದಲು ಟ್ರ್ಯಾಕ್ಟರನ್ನು ಉಪಯೋಗಿಸುತ್ತಿದ್ದಾರೆ. ಇದು ಶ್ರಮದ ಉಳಿತಾಯವಷ್ಟೇ ಅಲ್ಲ, ಆರ್ಥಿಕ ಅನುಕೂಲತೆಯೂ ಹೌದು. ಇಂಥ ಒಂದು ಯಂತ್ರದ ಒಡೆತನ ಸಣ್ಣ ರೈತರಿಗೆ ಸಾಧ್ಯವಿಲ್ಲದಿರುವುದರಿಂದ ಅವರು ಕುಂಟಿ ಕೂರಿಗೆಯಿಂದಲೇ ಕೃಷಿಗೈಯುತ್ತಿದ್ದಾರೆ. ರಾಶಿ ಮಾಡುವ ಮಷಿನ್ನು ಬಂದ ಮೇಲೆ ಹಂತಿ ನಿಂತು ಹೋಯಿತು. ಈ ಯಾಂತ್ರಿಕ ಪರಿಣಾಮ ದಿನದ ಕೆಲಸ–ಕಾರ್ಯಗಳ ಮೇಲೂ ಸಾಕಷ್ಟಾಗಿದೆ. ಗಿರಣಿಗಳು ಬಂದ ಮೇಲೆ ಗ್ರಾಮೀಣ ಹೆಣ್ಣುಮಕ್ಕಳಾರೂ ಬೀಸುವುದಿಲ್ಲ. ಹೀಗೇ ಕುಟ್ಟುವ ಕ್ರಿಯೆಯೂ ಹೆಚ್ಚು ಕಡಿಮೆ ನಿಂತಂತೆಯೇ ಆಗಿದೆ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕ್ರಮ ಸಂಖ್ಯೆ 87875

ಈ ಬಗೆಯ ಯಂತ್ರ ಪ್ರವೇಶದಿಂದ ನಮ್ಮ ಕೃಷಿಕರ ಎಷ್ಟೋ ಶ್ರಮ ಹಾಗೂ ಸಮಯ ಉಳಿಯಿತೆಂಬುದು ನಿಜ. ಈ ಯಂತ್ರೋಪಯೋಗದ ಬೆನ್ನಹಿಂದೆಯೇ ಒದಗಿದ ಅನ್ಯ ಬದಲಾವಣೆಗಳನ್ನು ಪರ್ಯಾಲೋಚಿಸಬೇಕಗುತ್ತದೆ. ಯಂತ್ರಗಳ ಆಗಮನದಿಂದ ಪೂರ್ವದಲ್ಲಿದ್ದ ಮನುಷ್ಯ ಸಂಬಂಧಗಳು ಕ್ರಮೇಣ ಕಳಚಿಕೊಂಡ, ಕಳಚಿಕೊಳ್ಳುತ್ತಿರುವ ಆತಂಕವನ್ನು ಕುರಿತು ನಾವು ಯೋಚಿಸಬೇಕಾಗುತ್ತದೆ. ಹಂತಿಯನ್ನೇ ತೆಗೆದುಕೊಳ್ಳೋಣ. ಸುಗ್ಗಿ ಕಾಲದ ಬಹುಮುಖ್ಯವಾಗಿ ರಾಶಿ ಸಂದರ್ಭದಲ್ಲಿ ವ್ಯಕ್ತವಾಗುತ್ತಿದ್ದ ಸಹಬಾಳ್ವೆ ಇಂದು ಇಲ್ಲವಾಗಿದೆ. ಪರಸ್ಪರ ಎತ್ತುಗಳನ್ನು ಕಣದಿಂದ ಕಣಕ್ಕೆ ಒಯ್ಯುವುದು ಇಡೀ ರಾತ್ರಿ ರಾಶಿಗೆ ಸಂಬಂಧಪಟ್ಟ ಕೆಲಸಗಳನ್ನು ಎಲ್ಲರೂ ಮಾಡುವುದು – ಇವೆಲ್ಲ ಪರಸ್ಪರ ಪ್ರೀತಿಪೂರಕ ವಿಷಯಗಳಾಗಿದ್ದವು. ಆದರೆ ಆ ಮೂಲ ಸಂದರ್ಭವೇ ಇಂದು ರಾಶಿ ಮಷಿನನ್ನು ಅವಲಂಬಿಸಿದ, ಮೇಲೆ ಒಬ್ಬರಿಗೊಬ್ಬರ ಮಧ್ಯದಲ್ಲಿದ್ದ ಸಹಕಾರದ ಅವಕಾಶವೇ ಕಳಚಿಕೊಂಡಿತು. ಈ ಬಗೆಯ ನಿಲುಗಡೆಯಿಂದ ಪರಸ್ಪರ ವಿಮುಖತೆ ಇಲ್ಲವೆಂದರೂ ಸಹಕಾರ ಸಂವರ್ಧನೆಗೆ ಅವಕಾಶ ತಪ್ಪಿಹೋಗಿರುವುದಂತೂ ಸತ್ಯ.

ಆಧುನಿಕ ಬದುಕಿನ ಪ್ರಭಾವದಿಂದಾಗಿ ನಮ್ಮ ಹಳ್ಳಿಗಾಡಿನ ಕಲೆ–ಸಾಹಿತ್ಯದ ಸೊಗಸುಗಾರಿಕೆ ಮರೆಯಾಗುತ್ತಿದೆ. ಕೋಲಾಟಗಳು ನಿಂತುಹೋಗಿವೆ. ಬಯಲಾಟಗಳೂ ಅದೇ ದಾರಿಯಲ್ಲಿವೆ. ಬೀಸುವುದು, ಹಂತಿ ಹೊಡೆಯುವುದು ಇಲ್ಲವೆಂದಾದ ಮೇಲೆ ಬೀಸುಕಲ್ಲಿನ ಹಾಡು, ಹಂತಿ ಹಾಡು ಎಲ್ಲಿಂದ ಬರಬೇಕು ? ಅವಸರವಸರವಾಗಿ ಮುಗಿಯುವ ಒಂದು ದಿನದ ಮದುವೆಯಲ್ಲಿ ಮದುವೆಯ ಹಾಡುಗಳನ್ನು ಹಾಡುವ ಕೇಳುವ ವ್ಯವಧಾನ ಯಾರಿಗಿದೆ ?. ನಮ್ಮ ಹಳ್ಳಿಯ ಕ್ರೀಡೆಗಳಿಗೂ ಇಂದು ಇದೇ ಗತಿ ಬಂದು ಕ್ರಿಕೆಟ್ ಗ್ರಾಮ ಮೈದಾನವನ್ನು ಆಕ್ರಮಿಸಿಕೊಂಡುಬಿಟ್ಟಿದೆ. ಹೀಗೆ ಹಳ್ಳಿಯ ಹೊಸ ಪೀಳಿಗೆ ಹಳ್ಳಿಯ ವೇಷಭೂಷಣ ತೊಡಲು ಸಿದ್ಧವಿಲ್ಲ. ಮುಂದಿನ ತಲೆಮಾರಿನಲ್ಲಿ ಹುಗ್ಗಿ ಹೋಳಿಗೆ ಮಾಡುವವರಾರು ?

ಶಿಕ್ಷಣ ಮತ್ತು ಮಾಧ್ಯಮಗಳ ಪ್ರಭಾವದಿಂದ ಕ್ರಮೇಣ ವೈಚಾರಿಕತೆ ಹಳ್ಳಿ ಮನಸ್ಸನ್ನು ಆಕ್ರಮಿಸುತ್ತಿದೆ. ಮದುವೆ ಮುಂಜಿವೆಗಳು ಸಂಕ್ಷಿಪ್ತಗೊಳ್ಳುತ್ತಿವೆ. ಮುಂಚೆಲ್ಲ ಮದುವೆಯ ಅಕ್ಷತಾರೋಪಣಕ್ಕೆ ಮೊದಲು ವಾರಾನುಗಟ್ಟಲೆ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಿದ್ದವು ಇಂದು ಆ ಸ್ಥಿತಿ ಹೋಗಿ ಯಾವುದೋ ಗುಡಿ–ಗುಂಡಾರಗಳಲ್ಲಿ ಮದುವೆ ನಡೆದು ಹೋಗುತ್ತವೆ. ಸತಿ–ಪತಿಗಳಾಗುವುದಕ್ಕೆ ಧಾರ್ಮಿಕ ವಿಧಿವಿಧಾನಗಳಿಗಿಂತ ಸಾಮಾಜಿಕರ ಒಪ್ಪಿಗೆಯ ಮುದ್ರೆ ಅವಶ್ಯವೆಂಬ ತಿಳುವಳಿಕೆಯಿಂದು ದಟ್ಟವಾಗುತ್ತಿದೆ. ದೈವಭಕ್ತಿಯ ವಿಷಯದಲ್ಲೂ ಆಧುನಿಕ ಭಾವಗಳು ಮೊಳೆಯುತ್ತಿವೆ. ದೂರದ ಊರಲ್ಲಿರುವ ದೇವರಿಗೆ ಚೆಕ್ಕಡಿ ಹೂಡಿಕೊಂಡು

ವಾರಾನುಗಟ್ಟಲೆ ಮನೆಯ ಬಹುಪಾಲು ಜನ ಹೋಗುತ್ತಿದ್ದದು ಮುಂಚಿನ ವಾಡಿಕೆ. ಇಂದು ಒಬ್ಬರು ಬಸ್ಸಿಗೆ ಹೋಗಿ ಕಾಯಿ ಒಡೆಸಿಕೊಂಡು ಬಂದರಾಗದೇ ಎಂಬ ತಿಳುವಳಿಕೆ ಹೆಚ್ಚುತ್ತಿದೆ. ಹೆಚ್ಚಿರುವ ವಾಹನ ಸೌಕರ್ಯಗಳೂ ಇದಕ್ಕೆ ಕಾರಣ.

ಕುಲಜಾತಿಗಳ ವಿಷಯದಲ್ಲೂ ಮುಂಚಿನ ಕಟ್ಟುನಿಟ್ಟು ಈಗ ಉಳಿದಿಲ್ಲ. ಆಧುನಿಕ ಪೀಳಿಗೆಗೆ ದೊರೆತಿರುವ ಶಿಕ್ಷಣದಿಂದಾಗಿ ಈ ವಲಯದ ಮೌಢ್ಯತೆಗೆ ಮೂಗುದಾರ ಹಾಕಲಾಗುತ್ತಿದೆ. ಸಾವಿರಾರು ವರ್ಷಗಳಿಂದ ಬೆಳದುಬಂದಿರುವ ಜಾತಿ-ಅಂತಸ್ತಿನ ಪರಿಕಲ್ಪನೆ ಅಷ್ಟು ಸುಲಭವಾಗಿ ಮರೆಯಾಗುವುದಿಲ್ಲವಾದರೂ ಕ್ರಮೇಣ ಜಾತಿಯ 'ಆದರ್ಶ'ಗಳನ್ನು ಬಿಟ್ಟುಕೊಟ್ಟು ಗ್ರಾಮೀಣರು ಬಾಳುತ್ತಿರುವ ಪರಿ ಆಶಾದಾಯಕವೆನ್ನಿಸಿವೆ. ಶಿಕ್ಷಣ ಪಡೆದು ಜಾತಿ ವಾದವನ್ನು ಅಲ್ಲಗಳೆಯುತ್ತಿರುವ ತಮ್ಮ ಮಕ್ಕಳು, ಮೊಮ್ಮಕ್ಕಳ ಅನಿಸಿಕೆಗಳಿಗೆ ಇಂದು ಹಳ್ಳಿಯ ಹಿರಿಯರು ಮನ್ನಣೆ ಕೊಡುತ್ತಿದ್ದಾರೆ. ಹಳ್ಳಿಯ ತಮ್ಮ ಮೊಮ್ಮಕ್ಕಳ ಎಲ್ಲ ಜಾತಿಯ ಗೆಳೆಯ ಗೆಳತಿಯರಿಗೆ ಅಜ್ಜ ಅಜ್ಜಿಯರು ಪಡಸಾಲೆಯೇರುವ ಅವಕಾಶ ಮಾತ್ರ ಕೊಟ್ಟಿರಬಹುದು. ತಂದೆತಾಯಿಗಳು ಮಾತ್ರ ಅಡುಗೆ ಮನೆಯವರೆಗೆ – ಕೆಲವರು ದೇವರ ಮನೆಯವರೆಗೂ ಅವಕಾಶ ಕೊಡುತ್ತಿರುವುದು ಬಹುದೊಡ್ಡ ಬೆಳವಣಿಗೆಯೆನ್ನಿಸುತ್ತದೆ.

ಇತ್ತೀಚಿಗೆ ಹಳ್ಳಿಗಳ ಕೌಟುಂಬಿಕ ಜೀವನ ಶಿಥಿಲಗೊಳ್ಳುತ್ತದೆ. ಅಕ್ಷರಸ್ಥ ಮಕ್ಕಳು, ಸೊಸೆಯಂದಿರು ತಮ್ಮ ಹಳ್ಳಿಯ ತಂದೆ ತಾಯಿ, ಅತ್ತೆಮಾವಂದಿರೊಂದಿಗೆ ಹೊಂದಿಕೊಳ್ಳುತ್ತಿಲ್ಲ. ಯಾರು ಸರಿ, ಯಾರು ತಪ್ಪು ಎಂಬ ವಿಶ್ಲೇಷಣೆಗೆ ಕೈ ಹಾಕುವವರು ಸಂಸ್ಕೃತಿ ಸಂವಹನದಲ್ಲಿ ತಲೆಮಾರುಗಳ ಅಂತರವನ್ನು ಮರೆಯದೆ ನೆನಪಿಡಬೇಕಾಗುತ್ತದೆ.

ಆಧುನಿಕತೆ ಗ್ರಾಮಜೀವನದ ಬಾಹ್ಯವನ್ನು ಬಹುಬೇಗ ಬದಲಿಸಿರಬಹುದು. ಆದರೆ ಬಹುಕಾಲದಿಂದಲೂ ರೂಢಿಸಿಕೊಂಡು ಬಂದ ಗ್ರಾಮೀಣ ಜೀವನ ಮೌಲ್ಯಗಳನ್ನು ಹಿರಿಯ ತಲೆಮಾರಿನ ಜನ ಇಂದಿಗೂ ಅರಗಿಸಿಕೊಂಡಿದ್ದಾರೆ. ಇಂದಿಗೂ ಮುಪ್ಪಿನ ತಂದೆ ತಾಯಿಗಳ ಅಗತ್ಯಗಳನ್ನು ಪೂರೈಸಿ ಅವರನ್ನು ರಕ್ಷಿಸುತ್ತ ಸಾಧ್ಯವಾದಷ್ಟು ಅವರನ್ನು ಸಂತೋಷದಿಂದಿಡಲು ಯತ್ನಿಸುತ್ತಾರೆ. ಮದುವೆ ಮರಣದಂಥ ಸಂದರ್ಭಗಳಲ್ಲಿ ಹಳ್ಳಿ ಜನ ಎಲ್ಲರೂ ಒಂದುಗೂಡಿ ಸಹಕರಿಸುತ್ತಾರೆ. ಹಬ್ಬ-ಹರಿದಿನಗಳಲ್ಲಿ ಧರ್ಮ-ಜಾತಿಗಳ ಗಡಿದಾಟಿ ಬನ್ನಿ ಮುಡಿಯುವುದು, ಕುಸುರೆಳ್ಳು ಕೊಡುವುದು, ಕರ್ಬಲಾ ಹಾಡುವುದು – ಇವೆಲ್ಲ ಇಂದಿಗೂ ಉಳಿದುಕೊಂಡು ಬಂದಿವೆ.

ಅನೇಕ ಜನ ನಾವು ಕಲಿತವರು ಎಲ್ಲಾ ಬಗೆಯ ಆದರ್ಶಗಳನ್ನು ಕುರಿತು

ಮಾತನಾಡುತ್ತೇವೆ, ಬರೆಯುತ್ತೇವೆ, ಗಂಟೆಗಟ್ಟಲೆ ಭಾಷಣ ಮಾಡುತ್ತೇವೆ. ಆದರೆ ಗ್ರಾಮೀಣರು ಅಂಥ ಬದುಕನ್ನು ಬದುಕುತ್ತಾರೆ. ಇಂದು ಹಳ್ಳಿಗಳ ಕೌಟುಂಬಿಕ ಭಾವ-ಬಂಧಗಳೇನಾದರೂ ಸಡಿಲುಗೊಳ್ಳುತ್ತಿದ್ದರೆ, ಗ್ರಾಮೀಣರ ಭಾವೈಕ್ಯತೆಗೇನಾದರೂ ಧಕ್ಕೆ ಒದಗುತ್ತಿದ್ದರೆ ಅದಕ್ಕೆ ಆಧುನಿಕ ಜಗತ್ತಿನ 'ಅರೆಪ್ರಜ್ಞಾವಂತರೇ' ಕಾರಣವೆನ್ನದೆ ಅನ್ಯದಾರಿಯಿಲ್ಲ.

೨೦೦೬ ಕುರುಕ್ಷೇತ್ರ ಸಂ. ಸಂಗಮೇಶ ಕೋಟಿ.

~~~*****~~~
~~~

ಡಾ. ಶ್ರೀರಾಮ ಇಟ್ಟಣ್ಣವರ



ಡಾ. ಶ್ರೀರಾಮ ಇಟ್ಟಣ್ಣವರ ಅವರು ದೇಸಿ ಬದುಕಿನ ಜೀವಂತಿಕೆಯನ್ನು ಅದರ ಮೂಲನೆಲೆಯಲ್ಲಿ ಒಂದಾಗಿ ಅನುಭವಿಸುತ್ತ ಬಂದವರು. ಅವರ ಈ ಅನುಭವದ್ರವ್ಯ ಅವರಿಗೆ ಸ್ಫೂರ್ತಿ-ಸಂಪತ್ತು ಎರಡೂ ಹೌದು. ಕಾವ್ಯ, ನಾಟಕ, ಜೀವನ ಚರಿತ್ರೆ, ಜಾನಪದ, ಸಂಪಾದನೆ, ಸಂಶೋಧನೆ ಹೀಗೆ ಸೃಜನ ಸೃಜನೇತರ ಎರಡೂ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿಗೈದಿರುವ ಇಟ್ಟಣ್ಣವರ ಗ್ರಾಮೀಣ ಬದುಕಿನ ಸತ್ವವನ್ನು ಪ್ರೀತಿಸುವ ಲೇಖಕ. ಜಾನಪದ ಬದುಕಿನ ಭಾವ-ಬಂಧಗಳೇ ಇವರ ಎಲ್ಲಾ ಬಗೆಯ ಬರವಣಿಗೆಗೆ ಸ್ಥಾಯಿ.

ಮೂಲತಃ ಕವಿಯಾಗಿ ಸಾಹಿತ್ಯ ಕೃಷಿಯನ್ನು ಆರಂಭಿಸಿದ ಡಾ. ಇಟ್ಟಣ್ಣವರ ಕ್ರಮೇಣ ಜಾನಪದ ಅಧ್ಯಯನಕ್ಕೆ ಒಲಿದವರು. ಗ್ರಾಮೀಣ ಜೀವನದ ಅನ್ವಯಿಕ ನೆಲೆಯಲ್ಲಿ ಒಡೆದು ತೋರುವ ಇವರ ದೇಸಿ ಚಿಂತನ ಕ್ರಮಗಳು ಜಾನಪದ ಅಧ್ಯಯನ ವಲಯದಲ್ಲಿ ಇವರಿಗೊಂದು ಸ್ಥಾನಮಾನ ಕಲ್ಪಿಸಿಕೊಟ್ಟಿವೆ.

"ಶ್ರೀ ಕೃಷ್ಣ ಪಾರಿಜಾತ: ಒಂದು ಅಧ್ಯಯನ", 'ಲಾವಣಿ'ಗಳಂಥ ಮಹತ್ವದ ಕೃತಿಗಳನ್ನು ಕನ್ನಡ ಜಾನಪದ ಅಧ್ಯಯನ ಕ್ಷೇತ್ರಕ್ಕೆ ಕೊಟ್ಟಿರುವ ಡಾ. ಶ್ರೀರಾಮ ಇಟ್ಟಣ್ಣವರ ಅವರು ಪ್ರಸ್ತುತ 'ಜಾನಪದ ಪರಿಕ್ರಮ'ಕೃತಿಯಲ್ಲಿ ಜಾನಪದಕ್ಕೆ ಸಂಬಂಧಪಟ್ಟ ತಮ್ಮ ಒಂಬತ್ತು ಲೇಖನಗಳನ್ನು ಸಂಕಲಿಸಿದ್ದಾರೆ. ಲೇಖನಗಳಲ್ಲಿ ವೈವಿಧ್ಯತೆಯಿದೆ. ಅನುಭವ ದ್ರವ್ಯವನ್ನು ಅಧ್ಯಯನ ಮಾರ್ಗಕ್ಕೆ ಒಗ್ಗಿಸಿಕೊಳ್ಳುವ ಹದ ಲೇಖಕರಿಗೆ ದಕ್ಕಿರುವುದಿಲ್ಲಿ ಸ್ಪಷ್ಟವಾಗಿದೆ.